ಸಂಪುಟ : 13 Volume | ಸಂಚಿಕೆ : 203 Issue | ಪುಟಗಳು : 08 Pages | ಗುರುವಾರ 25 ಸೆಪ್ಟೆಂಬರ್ 2025 | ₹2 | RNINO:KARKAN/2011/48371 | BDR/054/2026-20274 | www.mallammanudi.in | mallammanudi@gmail.com | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper

ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ


**ಬೆಳಗು**

" ಪ್ರೀತಿಸುವವರನ್ನು ಪಡೆಯುವುದು ಕಠಿಣ , ಅದಕ್ಕೂ ಕಠಿಣ ಕೆಡದಂತೆ ಪ್ರೀತಿ ಕಾಯ್ದುಕೊಂಡು ಹೋಗುವುದು "

- ಸಿದ್ದಯ್ಯ ಪುರಾಣಿಕ .

ಆ.26ರಂದು ಸಿಂಧೂರ ರಕ್ಷಕ ಓಟ 2 | ರಸ್ತೆ ಗುಂಡಿ ಮುಚ್ಚಲು ಪ್ರತಿಭಟನೆ 4 | ಶ್ರಮದ ಬೆವರಿನ ಫಲ ಶಾಶ್ವತ 8

# ಹಿರಿಯ ಸಾಹಿತಿ ಭೈರಪ್ಪ ನಿಧನ



ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು:ಸೆ.24: ಸರಸ್ವತಿಸಮ್ಮಾನ್,ಪದ್ಮಭೂಷಣಪ್ರಶಸ್ತಿಪುರಸ್ಕೃತ, ಹಿರಿಯ ಸಾಹಿತಿ, ಎಸ್ ಎಲ್ ಭೈರಪ್ಪ (94) ಇಂದು ನಿಧನರಾದರು.ಪರ್ವ, ಉತ್ತರಕಾಂಡ, ವಂಶವೃಕ್ಷ, ಆವರಣ ಸೇರಿ ಹಲವು ಕೃತಿಗಳನ್ನು ಎಸ್ ಎಲ್ ಭೈರಪ್ಪ ರಚಿಸಿದ್ದರು.ಗೃಹಭಂಗಕಾದಂಬರಿಧಾರಾವಾಹಿಯಾಗಿದ್ದರೆ, ವಂಶವೃಕ್ಷ,ತಬ್ಬಲಿಯುನೀನಾದೆಮಗನೆಕಾದಂಬರಿಗಳು ಸಿನಿಮಾಗಳಾಗಿವೆ. ಇಂದಿಗೂ ಕೂಡ ಎಸ್ ಎಲ್ ಭೈರಪ್ಪನವರಕೃತಿಗಳುಜನಮಾನಸದಲ್ಲಿಅಚ್ಚಳಿಯದೇ ಉಳಿದಿವೆ.ಮೈಸೂರಿನಲ್ಲಿವಾಸವಿದ್ದಎಸ್ ಎಲ್ ಭೈರಪ್ಪ ಹಲವು ದಿನಗಳಿಂದ ಅನಾರೋಗ್ಯಕ್ಕೆ ಒಳಗಾಗಿದ್ದರು. ಎಸ್ ಎಲ್ ಭೈರಪ್ಪ ಅವರ ಅನೇಕ ಕೃತಿಗಳು ಮರಾಠಿ, ಗುಜರಾತ್ ಸೇರಿದಂತೆ ದೇಶದ ಅನೇಕ ಭಾಷೆಗಳಿಗೆ ಅನುವಾದಗೊಂಡಿವೆ.ಬೆಂಗಳೂರಿನರಾಜರಾಜೇಶ್ವರಿನಗರದ ರಾಷ್ಟ್ರೋತ್ಥಾನಆಸ್ಪತ್ರೆಯಲ್ಲಿಎಸ್ ಎಲ್ ಭೈರಪ್ಪಮಧ್ಯಾಹ್ನ 2.38ಕ್ಕೆಹೃದಯಸ್ತಂಭನದಿಂದಕೊನೆಯುಸಿರೆಳೆದಿದ್ದಾರೆ.

ಹಾಸನ ಜಿಲ್ಲೆ ಚನ್ನರಾಯಪಟ್ಟಣದ ಸಂತೇಶಿವರದಲ್ಲಿ 20-08-1931 ರಂದು ಹುಟ್ಟಿದ ಭೈರಪ್ಪನವರು ಪ್ರಾಥಮಿಕಶಿಕ್ಷಣವನ್ನುಹುಟ್ಟೂರಿನಲ್ಲೇಪಡೆದರು.ಕಿತ್ತು ತಿನ್ನುವ ಬಡತನ, ಪ್ಲೇಗ್ ಮಾರಿಯಿಂದ ತತ್ತರಗೊಂಡ ಪರಿಸರದಲ್ಲೂ ಅವರ ಸಣ್ಣ ವಯಸ್ಸಿನಲ್ಲೇ ಅವರ ತಾಯಿಯಧೀಮಂತಿಕೆಯನ್ನುಮೈಗೂಡಿಸಿಕೊಂಡರು. ಅತ್ಯಂತಬಡತನದಲ್ಲೇಪ್ರೌಢಶಿಕ್ಷಣಹಾಗೂಕಾಲೇಜು ವ್ಯಾಸಂಗವನ್ನು ಮೈಸೂರಿನಲ್ಲಿ ಮುಂದುವರೆಸಿದ ಭೈರಪ್ಪನವರುಎಂ.ಎ.ನಲ್ಲಿಸುವರ್ಣಪದಕದೊಂದಿಗೆ ತೇರ್ಗಡೆಯಾದರು. ಬರೋಡಾದ ಮಹಾರಾಜ ಸಯ್ಯಾಜಿರಾವ್ ವಿಶ್ವವಿದ್ಯಾಲಯದಿಂದ ಸತ್ಯ ಮತ್ತು ಸೌಂದರ್ಯ, ಎಂಬ ಇಂಗ್ಲಿಷ್‌ನಲ್ಲಿ ರಚಿಸಿದ ಮಹಾ ಪ್ರಬಂಧಕ್ಕಾಗಿಡಾಕ್ಟರೇಟ್ ಪದವಿಗಳಿಸಿದರು.ಹುಬ್ಬಳ್ಳಿ, ಗುಜರಾತಿನ ಸರದಾರ್ ಪಟೇಲ್ ವಿಶ್ವವಿದ್ಯಾಲಯ, ದೆಹಲಿಗಳಲ್ಲಿ ತಮ್ಮ ಉಪನ್ಯಾಸಕ ವೃತ್ತಿ ಕೈಗೊಂಡ ಭೈರಪ್ಪನವರು,ಶಾಸ್ತ್ರೀಯಶಿಸ್ತಿನಓದಿನನಡುವೆಮಹತ್ವದ ಕಾದಂಬರಿಗಳನ್ನುರಚಿಸಿದ್ದಾರೆ.1961ರಲ್ಲಿಧರ್ಮಶ್ರೀ' ಕಾದಂಬರಿಪ್ರಕಟಿಸಿಇದುವರೆಗೆನಾಲ್ಕುದಶಕಗಳಲ್ಲಿ 21 ಕಾದಂಬರಿಗಳನ್ನು ಬರೆದಿದ್ದಾರೆ.

ವಂಶವೃಕ್ಷ,ತಬ್ಬಲಿಯುನೀನಾದೆಮಗನೆ,ಮತದಾನ ಕಾದಂಬರಿಗಳು ಚಲನಚಿತ್ರವಾಗಿ ಪ್ರಶಸ್ತಿ ಗಳಿಸಿವೆ. ವಂಶವೃಕ್ಷಕ್ಕೆ 1966 ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ,1975ರಲ್ಲಿದಾಟುಕಾದಂಬರಿಗೆರಾಜ್ಯಹಾಗೂ ಕೇಂದ್ರಸಾಹಿತ್ಯ ಅಕಾಡೆಮಿಪ್ರಶಸ್ತಿ ದೊರೆತಿದೆ. ಪರ್ವ' ಭೈರಪ್ಪನವರುರಚಿಸಿದಕಾದಂಬರಿಗಳಲ್ಲೇಭಾರೀಚರ್ಚೆಗೆ ಒಳಗಾದದ್ದು. ಮಹಾಭಾರತ ಕಾಲದ ಭಾರತೀಯ ಸಮಾಜದ ರೀತಿ ನೀತಿಗಳನ್ನೂ, ಆ ಕಾಲದ ಜೀವನ ಮೌಲ್ಯಗಳನ್ನು, ಮೃತ್ಯುವಿನ ರಹಸ್ಯಾತ್ಮಕತೆಯನ್ನು ಕಾದಂಬರಿಯಲ್ಲಿಅರ್ಥಪೂರ್ಣವಾಗಿಬಿಂಬಿಸಲಾಗಿದೆ.

## ಸೆ.26 ರಂದು ಅಂತ್ಯಕ್ರಿಯೆ

ನಾಳೆ ಬೆಳಿಗ್ಗೆ 8 ಗಂಟೆಯಿಂದ ರವೀಂದ್ರ ಕಲಾಕ್ಷೇತ್ರದಲ್ಲಿ ಸಾರ್ವಜನಿಕ ದರ್ಶನಕ್ಕೆ ಪಾರ್ಥಿವ ಶರೀರವನ್ನು ಇರಿಸಲಾಗುತ್ತದೆ. ಆ ಬಳಿಕ ಎಸ್ ಎಲ್ ಭೈರಪ್ಪ ಅವರ ಅಂತ್ಯಕ್ರಿಯೆ ಶುಕ್ರವಾರ ಅಂದರೆ ಸೆಪ್ಟೆಂಬರ್ 26ರಂದು ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ಬ್ರಾಹ್ಮಣ ಸಂಪ್ರದಾಯದಂತೆ ನೆರವೇರಲಿದೆ.ಸೆಪ್ಟೆಂಬರ್ 25 ಬೆಳಗ್ಗೆ 8ಗಂಟೆಗೆ ವರೆಗೂ ಸಾರ್ವಜನಿಕ ದರ್ಶನಕ್ಕೆ ಅವಕಾಶ ಇಲ್ಲ. ಎಂಟು ಗಂಟೆ ನಂತರ ಆಸ್ಪತ್ರೆಯಿಂದ ರವೀಂದ್ರ ಕಲಾಕ್ಷೇತ್ರಕ್ಕೆ ಪಾರ್ತೀವ ಶರೀರವನ್ನು ಶಿಫ್ಟ್ ಮಾಡಿ ಸಾರ್ವಜನಿಕರ ಅಂತಿಮ ದರ್ಶನನ ವ್ಯವಸ್ಥೆ ಮಾಡಲಾಗುತ್ತದೆ.ಸೆ.26 ರಂದು ಮಧ್ಯಾಹ್ನದ ನಂತರ ಎಸ್ ಎಲ್ ಭೈರಪ್ಪ ಅವರ ಪಾರ್ಥಿವ ಶರೀರವನ್ನು ಬೆಂಗಳೂರಿನಿಂದ ಮೈಸೂರಿಗೆ ಕೊಂಡೊಯ್ದು ಸಂಜೆ ಮೈಸೂರಿನ ಕಲಾಮಂದಿರದಲ್ಲಿ ಅಂತಿಮ ದರ್ಶನಕ್ಕೆ ಅವಕಾಶ ಮಾಡಿಕೊಡಲಾಗುತ್ತೆ. ಬಳಿಕ ಶುಕ್ರವಾರ ಮಧ್ಯಾಹ್ನ ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ಅಂತ್ಯಕ್ರಿಯೆ ನೆರವೇರಲಿದೆ.

## ಗಣ್ಯರ ಕಂಬನಿ

ಹಿರಿಯ ಸಾಹಿತಿ ಭೈರಪ್ಪನವರ ನಿಧನಕ್ಕೆ ಪ್ರಧಾನಿ ನರೇಂದ್ರ ಮೋದಿ, ಸಿಎಂ ಸಿದ್ದರಾಮಯ್ಯ,ಡಿಸಿಎಂ ಡಿ.ಕೆ.ಶಿವಕುಮಾರ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಅನೇಕ ರಾಜಕೀಯ ಮುಖಂಡರು, ಸಾಹಿತಿಗಳು, ಅಭಿಮಾನಿಗಳು ಕಂಬನಿ ಮಿಡಿದಿದ್ದಾರೆ.

## ಸಿನೇಮಾ ಟಾಕೀಸ್ ಗೇಟ್ ಕೀಪರಾಗಿದ್ದ ಭೈರಪ್ಪ

ಸಾಹಿತಿ ಎಸ್.ಎಲ್.ಭೈರಪ್ಪ ಅವರು ಬಾಲ್ಯದಲ್ಲೇ ಕಡುಕಷ್ಟದ ಜೀವನ ಕಂಡವರು. ಒಪ್ಪೊತ್ತಿನ ಊಟ ಮತ್ತು ಶಿಕ್ಷಣಕ್ಕೆ ಯಾರ ನೆರವೂ ಇಲ್ಲದಂತಹ ಪರಿಸ್ಥಿತಿ. ಅಲ್ಲಿ ಇಲ್ಲಿ ಸಣ್ಣಪುಟ್ಟ ಕೆಲಸ ಮಾಡಿಕೊಂಡು ಜೀವನ ಸಾಗಿಸಿದ್ದರು.

ಭೈರಪ್ಪಅವರುಬಾಲ್ಯದಲ್ಲೇಮಾರಕಪ್ಲೇಗ್‌ಗೆಅಣ್ಣ-ಅಕ್ಕ, ತಾಯಿ, ತಂಗಿ, ತಮ್ಮನನ್ನು ಕಳೆದುಕೊಂಡರು. ಇದು ಬದುಕಿನಲ್ಲಿಅವರಿಗೆದೊಡ್ಡಆಘಾತನೀಡಿತು. ಅಕ್ಷರಶಃ ಬದುಕು ಬೀದಿಗೆ ಬಿದ್ದಿತು. ಆರಂಭದಲ್ಲಿ ಶಿಕ್ಷಣಕ್ಕಾಗಿ ಸೋದರ ಮಾವನನ್ನು ಅವಲಂಬಿಸಬೇಕಾಯಿತು. ಬಳಿಕ ಅಲ್ಲಿಂದ ನುಗ್ಗೆಹಳ್ಳಿಗೆ ಬಂದು ಸ್ವಾಮಿ ಮೇಷ್ಟ್ರು ಮತ್ತು ಶ್ರೀನಿವಾಸ ಅಯ್ಯಂಗಾರ್ ಅವರಿಂದ ಶಿಕ್ಷಣ ಕಲಿತರು. ಈ ಮಧ್ಯೆ ಸ್ವಾಮಿ ಮೇಷ್ಟ್ರಿಗೆ ಗೊರೂರಿಗೆ ವರ್ಗವಾಯಿತು. ಆಗ ಎಸ್.ಎಲ್.ಭೈರಪ್ಪ ಅವರು ಚನ್ನರಾಯಪಟ್ಟಣಕ್ಕೆ ಹಿಂತಿರುಗಿ ಬಂದರು.

ಊಟಮತ್ತುಶಿಕ್ಷಣಕ್ಕಾಗಿತುಂಬಾಕಡೆಅಲೆದಾಡಿದರು. ಬದುಕಿನಹೋರಾಟನಡೆಸಿದರು.ಚನ್ನರಾಯಪಟ್ಟಣದಲ್ಲಿ ನಿತ್ಯದಖರ್ಚುಹುಟ್ಟಿಸಿಕೊಳ್ಳಲುತಿಂಗಳಿಗೆ5 ರೂಪಾಯಿ ಸಂಬಳದಮೇಲೆಸಿನಿಮಾ ಟಾಕಿಸ್ ಗೇಟ್ ಕೀಪರ್ ಆಗಿ ಕೂಡ ಭೈರಪ್ಪ ಅವರು ಕೆಲಸ ಮಾಡಿದ್ದಾರೆ.

# ಎಕ್ಸ್ ಅರ್ಜಿ ವಜಾಗೊಳಿಸಿದ ಹೈಕೋರ್ಟ್

ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು:ಸೆ.24: ಮಾಹಿತಿ ತಂತ್ರಜ್ಞಾನ ಕಾಯ್ದೆ 2000 ರ ಸೆಕ್ಷನ್ 79(3)() ಅಡಿ ಟ್ವೀಟ್ ಗಳನ್ನು ನಿರ್ಬಂಧಿಸುವಂತೆ ಕೇಂದ್ರ ಸರ್ಕಾರ ಹೊರಡಿಸಿದ್ದ ಆದೇಶಗಳನ್ನು ಪ್ರಶ್ನಿಸಿ ಎಕ್ಸ್ ಸಂಸ್ಥೆ ಸಲ್ಲಿಸಿದ್ದ ಅರ್ಜಿಯನ್ನು ಕರ್ನಾಟಕ ಹೈಕೋರ್ಟ್ ಬುಧವಾರ ವಜಾಗೊಳಿಸಿದೆ.

ನಿರ್ಬಂಧಿಸುವ ಆದೇಶ ನೀಡುವ ಕೇಂದ್ರ ಸರ್ಕಾರದ ಸೆನ್ಸಾರ್‌ಶಿಪ್ (ಸಹಯೋಗ್) ಪೋರ್ಟಲ್, ತನ್ನ ವಿರುದ್ಧ ಬಲವಂತದ ಅಥವಾ ಪೂರ್ವಾಗ್ರಹ ಪೀಡಿತ ಕ್ರಮ ಕೈಗೊಳ್ಳದಂತೆ ತಡೆಯುವಂತೆ ಎಕ್ಸ್ ಕಾರ್ಪ್ ನ್ಯಾಯಾಲಯವನ್ನು ಕೋರಿತ್ತು.

ಸಾಮಾಜಿಕ ಮಾಧ್ಯಮವನ್ನು ನಿಯಂತ್ರಿಸುವುದು 'ಅಗತ್ಯ'. ವಿಶೇಷವಾಗಿ ಮಹಿಳೆ ಮತ್ತು ಮಕ್ಕಳ ಗೌರವ ಕಾಪಾಡಲು ಸಾಮಾಜಿಕ ಮಾಧ್ಯಮಗಳ ಮೇಲೆ ನಿಯಂತ್ರಣ ಅಗತ್ಯ. ಇಲ್ಲದಿದ್ದರೆ ಸಂವಿಧಾನದಲ್ಲಿ ನಿಗದಿಪಡಿಸಲಾದ ಘನತೆಯ ಹಕ್ಕನ್ನು ಹಳಿತಪ್ಪಿಸಲಾಗುತ್ತದೆ ಎಂದು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಪೀಠ ಹೇಳಿದೆ.

ಮಾಹಿತಿ ಮತ್ತು ಸಂವಹನ, ಅದರ ಹರಡುವಿಕೆ ಅಥವಾ ವೇಗವನ್ನು ಯಾವತ್ತೂ ನಿಯಂತ್ರಿಸದೆ ಬಿಟ್ಟಿಲ್ಲ. ಇದು ನಿಯಂತ್ರಣದ ವಿಷಯವಾಗಿದೆ. ತಂತ್ರಜ್ಞಾನವು ಸಂದೇಶವಾಹಕರಿಂದ ಅಂಚೆ ಸಾಧನಗಳವರೆಗೆ, ವಾಟ್ಸಾಪ್, ಇನ್‌ಸ್ಟಾಗ್ರಾಮ್ ಮತ್ತು ಸ್ನ್ಯಾಪ್‌ಚಾಟ್‌ಗಳ ಯುಗದವರೆಗೆ ಅಭಿವೃದ್ಧಿ ಹೊಂದಿದಾಗ, ಎಲ್ಲವನ್ನೂ ಜಾಗತಿಕವಾಗಿ ಮತ್ತು ಸ್ಥಳೀಯವಾಗಿ ಆಡಳಿತಗಳಿಂದ ನಿಯಂತ್ರಿಸಲಾಗಿದೆ. ಸಾಮಾಜಿಕ ತಾಣಗಳ ಮೇಲೆ ನಿಯಂತ್ರಣ ಹೇರುವುದು ಈ ಕಾಲದ ಅತ್ಯಂತ ಅವಶ್ಯವಾಗಿದೆ ಎಂದು ನ್ಯಾಯಾಲಯ ತನ್ನ ಆದೇಶದಲ್ಲಿ ತಿಳಿಸಿದೆ.

# ಬಸ್ ದರ ಏರಿಕೆಗೆ ರಾಜ್ಯ ಸರ್ಕಾರದ ಸಿದ್ಧತೆ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು:ಸೆ.24: ಒಂದೆಡೆ ಕೇಂದ್ರ ಸರ್ಕಾರ ಜಿಎಸ್ಟಿ ಸ್ಲ್ಯಾಬ್ ಗಳನ್ನು ಇಳಿಕೆಮಾಡುವಮೂಲಕಜನರಿಗೆತೆರಿಗೆಹೊರೆಕಡಿಮೆಮಾಡಿದ್ದರೆ, ರಾಜ್ಯ ಸರ್ಕಾರ ಮತ್ತೊಂದು ಸುತ್ತಿನ ಬೆಲೆ ಏರಿಕೆ ಶಾಕ್ ಕೊಡಲು ಸಿದ್ಧತೆ ನಡೆಸಿದೆ.

ದೇಸಿ ಹಾಲಿನ ಪ್ಯಾಕೆಟ್ ದರ ಏರಿಕೆ ಆಗಿರುವುದರ ನಡುವೆ ಈಗ ಪ್ರಯಾಣಿಕರಿಗೆ ಶಾಕಿಂಗ್ ಸುದ್ದಿ ಬಂದಿದೆ. ವಿದ್ಯುತ್ ದರ ಏರಿಕೆಯ ಮಾದರಿಯಲ್ಲೇಇನ್ನು ಮುಂದಿನ ದಿನಗಳಲ್ಲಿ ಪ್ರತಿವರ್ಷ ಸಾರಿಗೆಸಂಸ್ಥೆಗಳ ದರ ಪರಿಷ್ಕರಣೆ ಮಾಡಲು ರಾಜ್ಯ ಸರ್ಕಾರ ಸಮಿತಿ ರಚನೆ ಮಾಡಿದೆ.

ಕೆಇಆರ್‌ಸಿ ಮಾದರಿಯಲ್ಲೇ ಮುಂದಿನ ದಿನಗಳಲ್ಲಿ ಸಾರ್ವಜನಿಕ ಸಾರಿಗೆ ದರ ನಿಯಂತ್ರಣ ಸಮಿತಿ ಅಸ್ತಿತ್ವಕ್ಕೆ ಬರಲಿದೆ. ಕರ್ನಾಟಕ ಮೋಟಾರು ವಾಹನ ನಿಯಮ 1989ರ ಅಡಿಯಲ್ಲಿ ದರ ನಿಯಂತ್ರಣ ಸಮಿತಿಯನ್ನ ರಾಜ್ಯ ಸರ್ಕಾರ ರಚನೆ ಮಾಡಿದೆ. ಈ ಸಮಿತಿ ಪ್ರತಿ ವರ್ಷ ರಸ್ತೆ ಸಾರಿಗೆ ದರ ಹೆಚ್ಚಿಸುವ ನಿರ್ಧಾರ ತೆಗೆದುಕೊಳ್ಳಲಿದೆ.

ಈ ಸಮಿತಿ ಅಧ್ಯಕ್ಷರು ಹಾಗೂ ಇನ್ನಿಬ್ಬರು ಸದಸ್ಯರನ್ನು ಒಳಗೊಂಡಿದ್ದು, ಕಾಲಕಾಲಕ್ಕೆ ದರ ಪರಿಷ್ಕರಣೆ ಮಾಡಲಿದೆ. ಇಂಧನ ದರ ಹೆಚ್ಚುತ್ತಿರುವ ಹಿನ್ನೆಲೆ ದೀರ್ಘಾವಧಿಯಲ್ಲಿ ಒಂದೇ ಬಾರಿ ಪ್ರಯಾಣ ದರ ಏರಿಕೆ ಬದಲು ಪ್ರತಿ ವರ್ಷ ದರ ಪರಿಷ್ಕರಣೆ ಮಾಡುವುದು ಸಮಿತಿ ರಚನೆಯ ಹಿಂದಿನ ಉದ್ದೇಶವಾಗಿದೆ.

# ಲಡಾಖ್ ಹಿಂಸಾಚಾರಕ್ಕೆ ನಾಲ್ವರು ಬಲಿ

ಮಲ್ಲಮ್ಮ ನುಡಿ ವಾರ್ತೆ

ಲಡಾಖ್:ಸೆ.24: ಲಡಾಖ್‌ಗೆ ರಾಜ್ಯದ ಸ್ಥಾನಮಾನ ಮತ್ತು ಆರನೇ ಪರಿಚ್ಛೇದದಡಿಯಲ್ಲಿಸೇರಿಸುವಂತೆಒತ್ತಾಯಿಸಿಬುಧವಾರನಡೆಸಲಾಗುತ್ತಿದ್ದ ಪ್ರತಿಭಟನೆಮತ್ತು ಬಂದ್ ಹಿಂಸಾಚಾರಕ್ಕೆತಿರುಗಿದ್ದು, ಬಿಜೆಪಿಕಚೇರಿಮತ್ತು ಹಲವಾರುವಾಹನಗಳಿಗೆಬೆಂಕಿಹಚ್ಚಲಾಗಿದೆ.ಇಂದುನೂರಾರುಯುವಕರು ಬೀದಿಗಿಳಿದು ಪ್ರತಿಭಟನೆ ನಡೆಸಿದ್ದು, ಲೇಹ್ ಬಿಜೆಪಿ ಕಚೇರಿಗೆ ಬೆಂಕಿ ಹಚ್ಚಿ, ಪೊಲೀಸ್ ವಾಹನಗಳ ಮೇಲೆ ಕಲ್ಲು ತೂರಾಟ ಸಹ ನಡೆಸಿದರು. ಪರಿಸ್ಥಿತಿ ನಿಯಂತ್ರಿಸಲು ಪೊಲೀಸರು ಅಶ್ರುವಾಯು ಶೆಲ್‌ಗಳನ್ನು ಹಾರಿಸಿ ಲಾಠಿ ಪ್ರಹಾರನಡೆಸಿದರು.ಲೇಹ್‌ಪಟ್ಟಣದಲ್ಲಿಲೇಹ್ ಅಪೆಕ್ಸ್ ಬಾಡಿಪ್ರಾಯೋಜಿತ ಬಂದ್ ಸಂದರ್ಭದಲ್ಲಿ ಪ್ರತಿಭಟನಾಕಾರರುಮತ್ತು ಭದ್ರತಾಸಿಬ್ಬಂದಿಗಳನಡುವೆ ನಡೆದಘರ್ಷಣೆಯಲ್ಲಿ ಕನಿಷ್ಠ ನಾಲ್ವರು ಸಾವನ್ನಪ್ಪಿ, 30 ಮಂದಿ ಗಾಯಗೊಂಡಿದ್ದಾರೆ.ಪ್ರತಿಭಟನಾಕಾರರು ವ್ಯಾಪಕಹಿಂಸಾಚಾರದಲ್ಲಿ ತೊಡಗಿ, ಬಿಜೆಪಿಕಚೇರಿ ಮತ್ತು ಹಲವಾರು ವಾಹನಗಳ ಮೇಲೆ ದಾಳಿ ಮಾಡಿದ ನಂತರ ಪರಿಸ್ಥಿತಿ ನಿಯಂತ್ರಣಕ್ಕೆ ತರಲು ಪೊಲೀಸರು ಗುಂಡು ಹಾರಿಸಬೇಕಾಯಿತು ಎಂದು ಅವರು ಹೇಳಿದ್ದಾರೆ.ತೀವ್ರ ಘರ್ಷಣೆಯಲ್ಲಿ ನಾಲ್ವರು ಸಾವನ್ನಪ್ಪಿದ್ದು, 30 ಜನರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.ಪೊಲೀಸರ ಗುಂಡಿನದಾಳಿಯಲ್ಲಿನಾಲ್ವರುಸಾವನ್ನಪ್ಪಿದ್ದಾರೆಎಂದುಪ್ರತಿಭಟನಾಕಾರರು ಹೇಳಿದ್ದಾರೆ.ಯುವಕರು ಪೊಲೀಸ್ ಸಿಬ್ಬಂದಿಯೊಂದಿಗೆ ಘರ್ಷಣೆಗಿಳಿದು, ಆ ಪ್ರದೇಶದಲ್ಲಿ ನಿಯೋಜಿಸಲಾಗಿದ್ದ ಪೊಲೀಸರ ಮೇಲೆ ಕಲ್ಲು ತೂರಾಟ ನಡೆಸಿದರು. ಪ್ರತಿಭಟನಾಕಾರರು ಸರ್ಕಾರಿ ಕಚೇರಿಗಳು ಮತ್ತು ಪೊಲೀಸ್ ವಾಹನಗಳಮೇಲೂಕಲ್ಲುತೂರಾಟನಡೆಸಿದರು.ಶಾಂತಿಸುವ್ಯವಸ್ಥೆಯನ್ನು ಪುನಃಸ್ಥಾಪಿಸಲು ಹೆಚ್ಚುವರಿ ಪಡೆಗಳನ್ನು ಸ್ಥಳದಲ್ಲಿ ನಿಯೋಜಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



# ರಸ್ತೆ ದುರಸ್ಥಿ ಆಗದಿದ್ದರೇ ಉಸ್ತುವಾರಿ ಸಚಿವರಿಗೆ ಘೇರಾವ್



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ:ಸೆ.24:ರಾಜ್ಯದಲ್ಲಿಅತಿಭ್ರಷ್ಟಶಾಸಕಮತ್ತುಸಚಿವಸಿಗುವುದು ಯಾದಗಿರಿಜಿಲ್ಲೆಯಲ್ಲಿ. ನಿತ್ಯವೂಇಲ್ಲಿಂದಲೇತಾವುಅಡ್ಡಾಡಿದರುರಸ್ತೆಯ ದುಸ್ಥಿತಿ ಕಾಣದಷ್ಟು ಕುರುಡುತನ ಬಂದಿದೆ. ಈ ಸರ್ಕಾರದಲ್ಲಿ ಎಲ್ಲರೂ ಗಂಟುಗಳ್ಳರೆಆಗಿದ್ದಾರೆ.ಈರಸ್ತೆಕೇವಲಶಹಾಪುರಯಾದಗಿರಿಸೀಮಿತವಲ್ಲ ಇದು ಕೊಡಂಗಲ್ -ಸಿಂದಗಿ ಸಂಪರ್ಕಿಸುವ ರಾಜ್ಯ ಹೆದ್ದಾರಿಯಾಗಿದೆ. ಅವರಿಗೆ ಅಭಿವೃದ್ಧಿ ಪದದ ಅರ್ಥವೆ ಗೊತ್ತಿಲ್ಲ ಎಂದು ಬಿಜೆಪಿ ಜಿಲ್ಲಾ ಅಧ್ಯಕ್ಷ ಬಸವರಾಜ ವಿಭೂತಿಹಳ್ಳಿ ಟೀಕಿಸಿದರು.

ದೋರನಹಳ್ಳಿ ಗ್ರಾಮದಲ್ಲಿ ಬುಧವಾರ ಬೆಳಗ್ಗೆ ಜಿಲ್ಲಾ ಬಿಜೆಪಿ ಘಟಕದ ವತಿಯಿಂದ ರಸ್ತೆ ದುಸ್ಥಿತಿ ಖಂಡಿಸಿ ಹಮ್ಮಿಕೊಳ್ಳಲಾಗಿದ್ದ ಪ್ರತಿಭಟನೆಯಲ್ಲಿ ಪಾಲ್ಗೊಂಡು ರಾಜ್ಯ ಸರ್ಕಾರದ ವೀರುದ್ಧ ವಾಗ್ದಾಳಿ ನಡೆಸಿದರು.ಈ ಸಂದರ್ಭದಲ್ಲಿಬಿಜೆಪಿಯುವನಾಯಕಮಹೇಶರಡ್ಡಿಮುದ್ನಾಳಮಾತನಾಡಿದ ಅವರು ಪಂಚಗ್ಯಾರಂಟಿ ಕೊಟ್ಟ ನೆಪದಲ್ಲಿ ರಾಜ್ಯದ ಅಭೀವೃದ್ಧಿಯೇ ಮರೆತು ಸಾರ್ವಜನಿಕರ ಜೀವ ಹಿಂಡುತಿದೆ ರಾಜ್ಯ ಸರ್ಕಾರ. ಉಚಿತ ಬಸ್ ಪ್ರಯಾಣ ಕೊಟ್ಟು ದುಸ್ಥಿತಿ ರಸ್ತೆಗಳನ್ನು ಇಟ್ಟು ಬಸ್ ಬಾರದಂತೆ ಮಾಡಿ ಒಣ ಜಂಭ ಪ್ರದರ್ಶನ ಮಾಡುತ್ತಿದೆ ಎಂದು ಕಾಂಗ್ರೇಸ್ ನೇತೃತ್ವದ ರಾಜ್ಯ ಸರ್ಕಾರದ ವೀರುದ್ಧ ಬಿಜೆಪಿ ಯುವ ನಾಯಕ ಮಹೇಶರಡ್ಡಿಗೌಡ ಮುದ್ನಾಳ್ ಹರಿಹಾಯ್ದರು.

# ಎಣ್ಣೆ ಹಚ್ಚದಿದ್ದಕ್ಕೆ ವಿದ್ಯಾರ್ಥಿನಿಯ ಕೂದಲು ಕಟ್

ಮಲ್ಲಮ್ಮ ನುಡಿ ವಾರ್ತೆ

ಗಾಂಧೀನಗರ:ಸೆ.24:ತಲೆಗೂದಲಿಗೆಎಣ್ಣೆಹಚ್ಚದಿದ್ದಕ್ಕೆವಿದ್ಯಾರ್ಥಿನಿಯ ಕೂದಲು ಕತ್ತರಿಸಿದ ಘಟನೆ ಗುಜರಾತ್‌ನ ಖಾಸಗಿ ಶಾಲೆಯಲ್ಲಿ ನಡೆದಿದೆ.

ಮಂಗಳವಾರ (ಸೆ.23) ವಿದ್ಯಾರ್ಥಿನಿ ಶಾಲೆಗೆ ತೆರಳಿದಾಗ ತಲೆಗೂದಲಿಗೆ ಎಣ್ಣೆಹಚ್ಚಿರಲಿಲ್ಲ. ಇದನ್ನು ಕಂಡದೈಹಿಕಶಿಕ್ಷಕಿವಿದ್ಯಾರ್ಥಿನಿಯಕೂದಲನ್ನು ಬ್ಲೇಡ್‌ನಿಂದಕತ್ತರಿಸಿದ್ದಾರೆ. ಮನೆಗೆಮರಳಿದಮಗಳಕೂದಲುಗಮನಿಸಿದಾಗ ಪೋಷಕರಿಗೆವಿಷಯತಿಳಿದಿದ್ದು, ಕೂಡಲೇಜಿಲ್ಲಾಶಿಕ್ಷಣಅಧಿಕಾರಿಗೆದೂರು ನೀಡಿದ್ದಾರೆ. ದೂರಿನನ್ವಯಅಧಿಕಾರಿಗಳುಶಿಕ್ಷಕಿಯನ್ನುವಜಾಗೊಳಿಸಿದ್ದಾರೆ.ಈ ಕುರಿತು ವಿದ್ಯಾರ್ಥಿನಿಯ ತಾಯಿ ಮಾತನಾಡಿ, ಶಾಲೆಯಲ್ಲಿ ಮಕ್ಕಳಿಗೆ ಚಿಕ್ಕ ಚಿಕ್ಕ ವಿಷಯಗಳಿಗೆ ಶಿಕ್ಷೆ ಕೊಡುತ್ತಾರೆ. ಒಂದು ಪುಸ್ತಕ ಮರೆತರೂ ಕೂಡ 100 ಬಸ್ಕಿ ಹೊಡೆಸುತ್ತಾರೆ. ಇದರಿಂದ ನಮ್ಮ ಮಕ್ಕಳು ಶಾಲೆಯೆಂದರೆ ಹೆದರುತ್ತಾರೆ. ಇದಕ್ಕೂಮುನ್ನ ಈಶಾಲೆಯಲ್ಲಿ ಇದೇರೀತಿಯವಿಷಯಗಳು ನಡೆದಿದೆ ಎಂದು ತಿಳಿಸಿದ್ದಾರೆ.

ಜಿಲ್ಲಾ ಶಿಕ್ಷಣ ಅಧಿಕಾರಿ ವಿಪುಲ್ ಮೆಹ್ತಾ ಮಾತನಾಡಿ, ಎರಡು ಶಾಲೆಗಳ ವಿರುದ್ಧ ಪೋಷಕರು ದೂರು ನೀಡಿದ್ದಾರೆ. ಎರಡೂ ಪ್ರಕರಣದಲ್ಲಿಯೂ ಮಕ್ಕಳ ಕೂದಲು ಕತ್ತರಿಸುವ ಬಗ್ಗೆ ಆರೋಪಿಸಿದ್ದಾರೆ.




ಏಷ್ಯಾಕಪ್: ಕ್ರಿಕೆಟ್ ಟೂರ್ನಿಯ ಸೂಪರ್ 4 ಹಂತದ ಇಂದಿನ ಪಂದ್ಯದಲ್ಲಿ ಶ್ರೀಲಂಕಾ ವಿರುದ್ಧ ಪಾಕಿಸ್ತಾನ ತಂಡಕ್ಕೆ 5 ವಿಕೆಟ್ ಗಳ ಭರ್ಜರಿ ಜಯ

# ತರಬೇತಿಯ ಪ್ರಾಮುಖ್ಯತೆ ಸಹಕಾರ ಕ್ಷೇತ್ರದಲ್ಲಿ ಹೆಚ್ಚಿದೆ: ಮಲ್ಲಿಕಾರ್ಜುನ ವಿರುಪಾಪುರ




ಮಲ್ಲಮ್ಮನುಡಿ ವಾರ್ತೆ ಶಹಾಪುರ : ತಾಲೂಕಿನಲ್ಲಿಕರ್ನಾಟಕ ರಾಜ್ಯ ಸಹಕಾರಮಹಾಮಂಡಳನಿಯಮಿತ, ಬೆಂಗಳೂರು; ಯಾದಗಿರಿ ಜಿಲ್ಲಾ ಸಹಕಾರ ಒಕ್ಕೂಟ ಯೂನಿಯನ್ ನಿ., ಯಾದಗಿರಿ; ಸಹಕಾರ ಇಲಾಖೆ, ಯಾದಗಿರಿ; ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಸಗರ ಇವರುಗಳ ಸಂಯುಕ್ತ ಆಶ್ರಯದಲ್ಲಿ ಕ್ಲಸ್ಟರ್ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಜ್ಯೋತಿ ಬೆಳಗುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಈ ಕಾರ್ಯಕ್ರಮದ ಉದ್ಘಾಟನೆಯನ್ನು ಜಿಲ್ಲಾ ಸಹಕಾರ ಒಕ್ಕೂಟ ನಿ., ಯಾದಗಿರಿ ಉಪಾಧ್ಯಕ್ಷರಾದ ಎಂ. ನಾರಾಯಣ ಅವರು ನೆರವೇರಿಸಿ ಮಾತನಾಡುತ್ತಾ, "ಸಹಕಾರ ಸಂಸ್ಥೆಗಳು ಲಾಭದ ಉದ್ದೇಶದಿಂದ ಕಾರ್ಯನಿರ್ವಹಿಸುತ್ತಿಲ್ಲವಾದರೂ ನಷ್ಟಕ್ಕೆ ಒಳಗಾಗದಿರಬೇಕು. ಸಹಕಾರ ತತ್ವದಲ್ಲಿ ನೈತಿಕತೆ ಅನಿವಾರ್ಯ, ಪಾರದರ್ಶಕ ಆಡಳಿತ ಅಗತ್ಯ. ಜನರಿಂದ ಜನರಿಗಾಗಿ, ಜನರೇ ನಡೆಸುವ ಸಂಸ್ಥೆಗಳಾದ ಸಹಕಾರ ಸಂಘಗಳು ವಿಶಿಷ್ಟರೀತಿಯ ವ್ಯಾಪಾರ ಸಂಸ್ಥೆಗಳಾಗಿವೆ," ಎಂದು ಹೇಳಿದರು.

ಸಂಘದ ಅಧ್ಯಕ್ಷ ಮಲ್ಲಿಕಾರ್ಜುನ ವಿರುಪಾಪುರ ಅವರು ಅಧ್ಯಕ್ಷತೆಯನ್ನು ವಹಿಸಿ ಮಾತನಾಡುತ್ತಾ, "ಕೇಂದ್ರ ಸರ್ಕಾರ ಸಹಕಾರ ಸಚಿವಾಲಯ ಸ್ಥಾಪಿಸಿದ ನಂತರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಬಹುಸೇವಾ ಕೇಂದ್ರಗಳಾಗಿ ಅಭಿವೃದ್ಧಿ ಹೊಂದಲು ಅವಕಾಶವಾಯಿತು. ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಈ ಬೆಳವಣಿಗೆಯಲ್ಲಿ ಮಾತೃ ಸಂಸ್ಥೆಯಾಗಿ ತರಬೇತಿ ಹಾಗೂ ಪ್ರಚಾರ ಮೂಲಕ ಸಹಕಾರ ಸಂಘಗಳ ಸಬಲತೆಯಲ್ಲಿ ಪ್ರಮುಖ ಪಾತ್ರವಹಿಸುತ್ತಿದೆ," ಎಂದರು.

ಕಾರ್ಯಕ್ರಮದ ನಿರೂಪಣೆ ಹಾಗೂ ಸ್ವಾಗತವನ್ನು ಜಿಲ್ಲಾ ಸಹಕಾರ ಶಿಕ್ಷಕಿ ಶ್ರೀಮತಿ ಸುಜಾತ ಮಠ ಅವರು ಮಾಡಿದರು. ವಂದನಾರ್ಪಣೆಯನ್ನು ಸಂಘದ ಕಾರ್ಯದರ್ಶಿ ಮಲ್ಲಿಕಾರ್ಜುನ್ ನೆರವೇರಿಸಿದರು.

ಕಾರ್ಯಕ್ರಮದಲ್ಲಿ ಸಂಘದ ನಿರ್ದೇಶಕರುಗಳು

ಶ್ರೀಮತಿ ಗಿರಿಯಮ್ಮ ಗಿರಿಯಪ್ಪ ಗೌಡಬಾಗಪ್ಪ ಕನಗುಂಡಶರಣಪ್ಪ ತರನೂರುಸೋಮಲಿಂಗಪ್ಪಮಾಲಗತ್ತಿ

ನೀಲಮ್ಮ ಮುದ್ದ ಮತ್ತು ಪ್ರಮುಖ ಅತಿಥಿಗಳು

ಶೇಖರಪ್ಪ ಅರಿಕೇರಿ ನಿವೃತ್ತ ಶಿಕ್ಷಕರು. ಮಾನಪ್ಪ, ನಿಂಗಣ್ಣ ಮುದ್ದ (ನಿವೃತ್ತ ಇಂಜಿನಿಯರ್) ಚಂದನ,

ಕಲ್ಲಪ್ಪ ಜಾಯಿ ಮಾಜಿ ತಾ. ಪಂ. ಸದಸ್ಯರು ಇವರುಗಳು ಉಪಸ್ಥಿತರಿದ್ದರು. ಸಂಘದ ಎಲ್ಲಾ ಸದಸ್ಯರು ಮತ್ತು ಗ್ರಾಮದ ಹಿರಿಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಯಾಗಿಸಿದರು.

# ವ್ಯಸನಿಗಳನ್ನು ಸಂಬಾಳಿಸುವುದು ಕಷ್ಟದ ಕೆಲಸ : ಲೋಖಂಡೆ



ಮದ್ಯವರ್ಜನ ಶಿಬಿರದ ಅಧ್ಯಕ್ಷರಾಗಿ ಸುಭಾಷ ಹುಲಸೂರೆ, ಉಪಾಧ್ಯಕ್ಷರಾಗಿ ಸಂಜೀವಕುಮಾರ ಭಾವಿಕಟ್ಟೆ, ವಿಜಯಕುಮಾರ ರಾಜಭವನ, ತಿಪ್ಪಣ್ಣ ಶಿವಪೂರೆ, ಜಯರಾಜ ದಾಬಶೆಟ್ಟಿ, ಕಾರ್ಯದರ್ಶಿಗಳಾಗಿ ಧರ್ಮಸ್ಥಳ ಗ್ರಾಮಾಭಿವೃದ್ಧಿಯ ಯೋಜನಾಧಿಕಾರಿಗಳಾದ ಸಂತೋಷಕುಮಾರ, ಸಹಕಾರ್ಯದರ್ಶಿಗಳಾಗಿ ಶಿವಾನಂದ ಲಕಾಟಿ. ಕೋಶಾಧ್ಯಕ್ಷರಾಗಿ ಪಂಢರಿ ಮೇತ್ರೆ ಗೌರವ ಸಲಹೆಗಾರರಾಗಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜನಜಾಗೃತಿ ವೇದಿಕೆಯ ಅಧ್ಯಕ್ಷ ಶಿವು ಲೋಖಂಡೆಯವರ ಜೊತೆಯಲ್ಲಿ 7 ಜನ ವೇದಿಕೆಯ ಸದಸ್ಯರನ್ನು ನೇಮಕ ಮಾಡಲಾಯಿತು.

ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ: ಸೆ.24:ವ್ಯಸನಿಗಳನ್ನು ಸಂಬಾಳಿಸುವುದು ತುಂಬಾ ಕಷ್ಟದ ಕೆಲಸವಾಗಿದೆ ಎಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜನಜಾಗೃತಿ ವೇದಿಕೆಯ ಜಿಲ್ಲಾಧ್ಯಕ್ಷ ಶಿವು ಲೊಖಂಡೆ ಅಭಿಪ್ರಾಯಪಟ್ಟರು.

ಪಟ್ಟಣದ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕಚೇರಿಯ ಆವರಣದಲ್ಲಿ ಬುಧವಾರ ಆಯೋಜಿಸಿದ್ದ ಮದ್ಯವರ್ಜನ ಶಿಬಿರದ ಪೂರ್ವಭಾವಿ ಸಭೆ ಉದ್ಘಾಟಿಸಿ ಅವರು ಮಾತನಾಡಿದರು. ಮದ್ಯವರ್ಜನ ಶಿಬಿರ ನಡೆಸುವಾಗ ಕುಡಿತದ ದಾಸರಾದ ವ್ಯಸನಿಗಳಿಂದ ಒಂದೆರಡು ದಿನ ತ್ರಾಸ್ ಆಗುತ್ತದೆ. ನಂತರದ ದಿನಗಳಲ್ಲಿ ಎಲ್ಲರೂ ಒಗ್ಗಿಕೊಂಡು ಹೋಗುತ್ತಾರೆ. ಹೀಗಾಗಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜೊತೆ ಕೈಜೋಡಿಸಿದ ಪ್ರಗತಿಪರ ಸಮಾಜ ಮುಖಂಡರು ಮದ್ಯವರ್ಜನ ಶಿಬಿರಕ್ಕೆ ಸಹಕರಿಸಿ, ಧರ್ಮಸ್ಥಳದ ಪೂಜ್ಯರ ಸಾಮಾಜಿಕ ಕಾರ್ಯಕ್ಕೆ ಕೈಜೋಡಿಸಬೇಕು ಎಂದು ಸಲಹೆ ನೀಡಿದರು.

ಮದ್ಯವರ್ಜನ ಶಿಬಿರವು ಕಳೆದ ಸಾಲಿನಂತೆಯೇ ಭಾಲ್ಕಿಯ ಚನ್ನಬಸವಾಶ್ರಮ ಪರಿಸರದ ಕುಂಬಾರ ಗುಂಡಯ್ಯಾ ಕಲ್ಯಾಣ ಮಂಟಪದಲ್ಲಿಯೇ ನಡೆಸಲು ನಿರ್ಧರಿಸಲಾಗಿದೆ. ಶಿಬಿರದ ಗೌರವಾಧ್ಯಕ್ಷರಾಗಿ ಭಾಲ್ಕಿ ಹಿರೇಮಠದ ಪೀಠಾಧಿಪತಿ ಶ್ರೀ ಗುರುಬಸವ ಪಟ್ಟದ್ದೇವರು ಮತ್ತು ಮದ್ಯವರ್ಜನ ಶಿಬಿರ 2025 ರ ಅಧ್ಯಕ್ಷರಾಗಿ ನಿವೃತ್ತ ಮುಖ್ಯ ಶಿಕ್ಷಕ ಸುಭಾಷ ಹುಲಸೂರೆಯವರನ್ನು ಸರ್ವಾನುಮತದಿಂದ ನೇಮಿಸಲಾಯಿತು. ಪ್ರಾಸ್ತಾವಿಕವಾಗಿ ಮಾತನಾಡಿದ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ಯೋಜನಾಧಿಕಾರಿ ಸಂತೋಷಕುಮಾರ ಅರೋಗ್ಯವಂತ ವ್ಯಸನಿಗಳಿಗೆ ಆದಷ್ಟೂ ಬೇಗ ಗುಣಪಡಿಸಬಹುದು. ಹೆಚ್ಚೆಚ್ಚು ಜನ ಆರೋಗ್ಯವಂತ ವ್ಯಸನಿಗಳನ್ನು ಶಿಬಿರದಲ್ಲಿ ಸೇರಿಸುವಂತೆ ಕ್ರಮ ವಹಿಸಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಪ್ರಮುಖರಾದ ಸೋಮನಾಥಪ್ಪ ಅಸ್ಟೂರೆ, ಪುರಸಭೆ ಉಪಾಧ್ಯಕ್ಷ ವಿಜಯಕುಮಾರ ರಾಜಭವನ, ಎಬಿವಿಪಿ ಮುಖಂಡ ಈಶ್ವರ ರುಮ್ಮಾ, ಕಸಾಪ ಅಧ್ಯಕ್ಷ ನಾಗಭೂಷಣ ಮಾಮಡಿ, ಸಂತೋಷ ಬಿಜಿಪಾಟೀಲ, ಶಿವರಾಜ ಮಲ್ಲೇಶಿ, ತಿಪ್ಪಣ್ಣ ಶಿವಪೂರೆ, ಪಂಢರಿ ಮೇತ್ರೆ, ಸಿದ್ರಾಮಯ್ಯಾ ಸ್ವಾಮಿ ದಾಡಗಿ, ಸಂಜೀವಕುಮಾರ ಭಾವಿಕಟ್ಟೆ, ಕಿಶನರಾವ ಜಾಧವ ಉಪಸ್ಥಿತರಿದ್ದರು.

# ಗ್ಲೋಬಲ್ ಸೈನಿಕ ಅಕಾಡೆಮಿಯಿಂದ ಆ.26ರಂದು ಸಿಂಧುರ ರಕ್ಷಕ ಓಟ:ಕರ್ನಲ್ ಶರಣಪ್ಪ ಸಿಕೆನಪುರೆ




ಬೀದರ. ಸೆ. 24: ರೋಟರಿ ಕ್ಲಬ್ ಬೀದರ ಸಹಕಾರದೊಂದಿಗೆ ಗ್ಲೋಬಲ್ ಸೈನಿಕ್ ಅಕಾಡೆಮಿ ವತಿಯಿಂದ ಶಾಲೆಯ ದಶಮಾನೋತ್ಸವದ ಅಂಗವಾಗಿ ಅಕ್ಟೋಬರ್ 26 ರಂದು ಆಯೋಜಿಸಿದ ಸಿಂಧೂರ್ ರಕ್ಷಕ ಓಟ ಕಾರ್ಯಕ್ರಮದ ಪ್ರಯುಕ್ತ ನವೆಂಬರ್ 01 ರಂದು ಶಾಲೆಯ ಆವರಣದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ಧ್ವಜಾರೋಹಣ, ಮಾರ್ಚ್‌ಪಾಸ್ಟ್, ಪರೇಡ್, ವ್ರೀತ್ ಲೇಯಿಂಗ್ ಮತ್ತು ಉಪನ್ಯಾಸ ಕಾರ್ಯಕ್ರಮಗಳು ನಡೆಯಲಿವೆ. ನವೆಂಬರ್ 01ರ ಬೆ. 11 ಗಂಟೆಗೆ ಆರಂಭವಾಗುವ ಈ ಕಾರ್ಯಕ್ರಮಕ್ಕೆ ಇನ್ಫೋಸಿಸ್ ಫೌಂಡೇಶನ್ ಅಧ್ಯಕ್ಷರು ಹಾಗೂ ಲೇಖಕಿ ಸುಧಾಮೂರ್ತಿ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದು ಗ್ಲೋಬಲ್ ಸೈನಿಕ್ ಅಕಾಡೆಮಿ ಅಧ್ಯಕ್ಷ ಕರ್ನಲ್ ಶರಣಪ್ಪ ಸಿಕೆಂಪುರೆ ತಿಳಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಕರೆದ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, .ಈ ಸಿಂಧೂರ್ ರಕ್ಷಕ ಓಟವನ್ನು ಒಗ್ಗಟ್ಟಾಗಿ ರಕ್ಷಿಸೋಣ ಎನ್ನುವ ಧ್ಯೇಯವಾಕ್ಯದಡಿಯಲ್ಲಿ ನಮ್ಮ ಸಶಸ್ತ್ರಪಡೆಗಳು ಹಾಗೂ ದೇಶಕ್ಕಾಗಿ ಪ್ರಾಣಾರ್ಪಣೆ ಮಾಡಿದವರಿಗೆ ಸಮರ್ಪಣೆ ಮಾಡುವುದೇ ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ ಎಂದರು.

ಕರ್ನಲ್ ಶರಣಪ್ಪ ಅವರು ಅಕ್ಟೋಬರ್ 26ರ ಭಾನುವಾರದಂದು ಸಿಂಧೂರ್ ರಕ್ಷಕ್ ಓಟ 10 ಕಿ.ಮೀ. ಇದರ ಧ್ವಜಾರೋಹಣವನ್ನು ಭಾರತದ ಮೊಟ್ಟಮೊದಲ ಬ್ಲೇಡ್ ರನ್ನರ್ ಮತ್ತು ಲಿಂಕಾ ಬುಕ್ ಆಫ್ ರೆಕಾರ್ಡ್ ಹೊಂದಿರುವ ಮೇಜರ್ ಡಿ.ಪಿ.ಸಿಂಗ್ ನೆರವೇರಿಸುವರು. 6 ಕಿ.ಮೀ. ಓಟದ ಧ್ವಜಾರೋಹಣ ಒಲಿಂಪಿಯನ್, ಭಾರತದ ಹೈಜಂಪ್ ದಾಖಲೆದಾರ ಮತ್ತು ಅರ್ಜುನ ಪ್ರಶಸ್ತಿ ಪುರಸ್ಕೃತರಾದ ಕ್ಯಾಪ್ಟನ್ ಭೀಮಸಿಂಗ್, 3 ಕಿ.ಮೀ. ಓಟದ ಧ್ವಜಾರೋಹಣವನ್ನು ರೋಟರಿ ಕ್ಲಬ್‌ನ ಜಿಲ್ಲಾ ಗವರ್ನರ್ ರವೀಂದ್ರ ನೆರವೇರಿಸುವರು. ಸಿಂಧೂರ್ ರಕ್ಷಕ್ ಓಟವು ಗ್ಲೋಬಲ್ ಶಾಲೆಯಿಂದ ಆರಂಭವಾಗಿ ಕೊನೆಗೆ ಅಲ್ಲಿಯೇ ಮುಕ್ತಾಯಗೊಳ್ಳಲಿದ್ದು, ಓಟದಲ್ಲಿ ಭಾಗವಹಿಸುವ ಪ್ರತಿಯೊಬ್ಬರಿಗೂ ಟೀಶರ್ಟ್, ಪದಕ ಮತ್ತು ಇ-ಪ್ರಮಾಣ ಪತ್ರ ನೀಡಲಾಗುವುದು. 10 ಕಿ.ಮೀ. ಓಟದ ಪುರುಷ ಹಾಗೂ ಮಹಿಳಾ ವಿಭಾಗದ ಮೊದಲ ಮೂರು ವಿಜೇತರಿಗೆ ಕ್ರಮವಾಗಿ ರೂ. 10 ಸಾವಿರ, ರೂ 8 ಸಾವಿರ ಹಾಗೂ ರೂ. 5 ಸಾವಿರ ಬಹುಮಾನ ಹಾಗೂ ಟ್ರೋಫಿ ನೀಡಲಾಗುತ್ತಿದೆ. ಓಟ ಮುಗಿದ ನಂತರ ಉಪಾಹಾರ ಹಾಗೂ ಶಕ್ತಿಯುತ ಪಾನೀಯ ಒದಗಿಸಲಾಗುವುದು. ವಿಶೇಷ ವೆಬ್‌ಸೈಟ್ ಮತ್ತು ಲ್ಯಾಂಡಿಗ್ ಪೇಜ್ ಮೂಲಕ ಆನ್‌ಲೈನ್ ನೊಂದಣಿ ಮಾಡಿಸಿಕೊಳ್ಳಬೇಕು. ಒಬ್ಬರಿಗೆ ಭಾಗವಹಿಸುವ ಶುಲ್ಕ ರೂ. 200 ಇರುತ್ತದೆ. ಅಂದಿನ ಓಟದಲ್ಲಿ

ಸುಮಾರು 5 ಸಾವಿರ ಓಟಗಾರರು ಭಾಗವಹಿಸುವ ನಿರೀಕ್ಷೆಯಿದೆ ಎಂದು ಕರ್ನಲ್ ಶರಣಪ್ಪ ಸಿಕೆಂಪುರೆ ತಿಳಿಸಿದರು.

ಇದೇ ವೇಳೆ ಸಿಂಧೂರ್ ರಕ್ಷಕ್ ಓಟದ ನೊಂದಣಿಗಾಗಿ ಹಾಯ್ ಐಡಿಯಲ್ಸ್ ಕಂಪನಿ ವತಿಯಿಂದ ತಯಾರಿಸಿದ ವಿಶೇಷ ವೆಬ್‌ಸೈಟ್ ಮತ್ತು ಲ್ಯಾಂಡಿಂಗ್ ಪೇಜ್ ಬಿಡುಗಡೆಗೊಳಿಸಲಾಯಿತು.

ಸಿಂಧೂರ್ ರಕ್ಷಕ್ ಓಟ ಇದು ಕೇವಲ ಕ್ರೀಡಾ ಕಾರ್ಯಕ್ರಮವಲ್ಲ. ಬದಲಾಗಿ ದೇಶದ ಏಕತೆ ಮತ್ತು ಕೃತಜ್ಞತೆಯ ಸಂಕೇತವಾಗಿದೆ. ದೇಶವು ಹಲವು ಸವಾಲುಗಳನ್ನು ಎದುರಿಸುತ್ತಿರುವ ಈ ಸಮಯದಲ್ಲಿ ಒಗ್ಗಟ್ಟಾಗಿ ರಕ್ಷಿಸೋಣ ಎಂಬ ನಮ್ಮ ವಿಷಯದಂತೆ ಪ್ರತಿ ನಾಗರಿಕರು, ಕುಟುಂಬಗಳು, ಸಂಸ್ಥೆಗಳು ಒಂದಾಗಿ ಬಂದು ನಮ್ಮ ಸಶಸ್ತ್ರ ಪಡೆಗಳಿಗೆ ಗೌರವ ಸಲ್ಲಿಸಲು ನಾವು ಎಲ್ಲರನ್ನೂ ಆಹ್ವಾನಿಸುತ್ತಿದ್ದೇವೆ. ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಕರ್ನಲ್ ಕರೆ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಅಕಾಡೆಮಿ ಪದಾಧಿಕಾರಿಗಳಾದ ರಮೇಶ ಪಾಟೀಲ ಸೋಲಪುರ, ರೋಟರಿ ಕ್ಲಬ್‌ನ ಹಾವಶೆಟ್ಟಿ ಪಾಟೀಲ, ಡಾ. ರಘು ಕೃಷ್ಣಮೂರ್ತಿ, ಡಾ. ಸುವಿನ್ ಪಾಟೀಲ, ಬಸವಕುಮಾರ ಪಾಟೀಲ ಖಾಜಾಪುರ, ಡಾ. ನಾಗೇಶ ಪಾಟೀಲ, ಆದೀಶ ವಾಲಿ, ಅನೀಲ ಬಿರಾದಾರ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಧರ್ಮದ ಕಾಲಂನಲ್ಲಿ ಲಿಂಗಾಯತ ಬರೆಸಿ:ಡಾ.ಬಸವಲಿಂಗ ಪಟ್ಟದ್ದೇವರು



ಮಲ್ಲಮ್ಮನುಡಿ ವಾರ್ತೆ ಭಾಲ್ಕಿ:ಸೆ.24: ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಆಯೋಗದ ವತಿಯಿಂದ ನಡೆಸಲಾಗುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ–2025ರಲ್ಲಿ ಲಿಂಗಾಯತ ಸಮುದಾಯದ ಜನರು ಇತರೆ ಧರ್ಮದ ಕಾಲಂನಲ್ಲಿ ಲಿಂಗಾಯತ ಮತ್ತು ಜಾತಿ ಕಾಲಂನಲ್ಲಿ ಲಿಂಗಾಯತ, ಬಣಜಿಗ, ಕುಂಬಾರ, ಹಡಪದ, ಗಾಣಿಗ, ಕುರುಬ ಹೀಗೆ ಮುಂತಾದ ತಮ್ಮ ತಮ್ಮ ಜಾತಿಗಳ ಹೆಸರನ್ನು ಬರೆಸಬೇಕು ಎಂದು ಲಿಂಗಾಯತ ಮಠಾಧಿಪತಿಗಳ ಒಕ್ಕೂಟದ ಅಧ್ಯಕ್ಷ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ತಿಳಿಸಿದ್ದಾರೆ. ಉಪಜಾತಿಯು ಕಾಲಂನಲ್ಲಿ ತಮ್ಮ ಉಪಜಾತಿ–ಪಂಗಡ ಬರೆಸಬೇಕು. ಸರಕಾರ ನಡೆಸುತ್ತಿರುವ ಈ ಸಮೀಕ್ಷೆಗೂ ಹಾಗೂ ಮೀಸಲಾತಿಗೂ ಯಾವುದೇ ಸಂಬಂಧವಿರುವುದಿಲ್ಲ. ಅದಕ್ಕಾಗಿ ಧರ್ಮದ ಕಾಲಂದಲ್ಲಿ ಲಿಂಗಾಯತ– ಎಂದು ಬರೆಸುವುದರಿಂದ ಯಾವುದೇ ಮೀಸಲಾತಿ ಸೌಲಭ್ಯಗಳಿಗೆ ಧಕ್ಕೆ ಉಂಟಾಗುವುದಿಲ್ಲ ಎಂಬುದನ್ನು ಲಿಂಗಾಯತ ಒಳಪಂಗಡಗಳ ಸಮಾಜ ಬಾಂಧವರು ಸ್ಪಷ್ಟವಾಗಿ ಅರಿತುಕೊಳ್ಳಬೇಕು. ಈ ಸಮೀಕ್ಷೆಯಲ್ಲಿ ತಮ್ಮ ಮಕ್ಕಳ ಭವಿಷ್ಯ ಅಡಗಿದೆ. ನಮ್ಮ ಮಕ್ಕಳ ಉಜ್ವಲ ಭವಿಷ್ಯಕ್ಕಾಗಿ ನಾವು ಈ ಸಮೀಕ್ಷೆಗೆ ಅತ್ಯಂತ ಕಾಳಜಿಪೂರ್ವಕ ಮಾಹಿತಿ ನೀಡಬೇಕು. ಸಮೀಕ್ಷೆ ಮಾಡುವವರು ತಾವು ಹೇಳಿದ ಹಾಗೆಯೆ ನೋಂದಣಿ ಮಾಡಿಕೊಂಡಿದ್ದಾರೊ ಇಲ್ಲವೊ ಎಂದು ಖಾತರಿಪಡಿಸಿದ ನಂತರವೆ ತಮ್ಮ ಒಪ್ಪಿಗೆ ನೀಡಬೇಕು. ಈ ಸಮೀಕ್ಷೆ ನಮ್ಮ ಸಮಾಜದ ಜನಸಂಖ್ಯೆಯ ಅಸ್ಮಿತೆಯ ಪ್ರತೀಕವಾಗಿದೆ. ನಾವು ಜಾಗರೂಕತೆಯಿಂದ ಈ ಸಮೀಕ್ಷೆ ಎದುರಿಸಿದರೆ ಮುಂದಿನ ದಿನಮಾನಗಳಲ್ಲಿ ನಮ್ಮ ಸಮಾಜ ಉಳಿಯುತ್ತವೆ. ನಮ್ಮ ಮಕ್ಕಳ ಭವಿಷ್ಯ ಬೆಳೆಗುತ್ತದೆ. ಕೇಂದ್ರ ಸರಕಾರದಿಂದ ನಮ್ಮ ಧರ್ಮಕ್ಕೆ ಅಲ್ಪಸಂಖ್ಯಾತ ಮಾನ್ಯತೆ ದೊರೆಯಬೇಕೆಂಬ ನೂರಾರು ವರ್ಷಗಳ ಹೋರಾಟ ಮುಂದುವರೆಯಲಿಕ್ಕೆ ಸಹಕಾರಿಯಾಗುತ್ತದೆ. ಆ ದಿಶೆಯಲ್ಲಿ ಸಮಸ್ತ ಸಮಾಜ ಬಾಂಧವರು ಅನ್ಯರ ಮಾತುಗಳಿಗೆ ಕಿವಿಗೊಡದೆ ಬಸವಾದಿ ಶರಣರ ಸಾಕ್ಷಿಯಾಗಿ ಮಾಹಿತಿ ನೀಡಬೇಕೆಂದು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

# ಬಿ.ವಿ. ಭೂಮರಡ್ಡಿ ಪದವಿ ಮಹಾವಿದ್ಯಾಲಯ ಅಂತರ ಕಾಲೇಜುಗಳ ಏಕವಲಯ ಮಟ್ಟದ ಕಬಡ್ಡಿ ಪುರುಷ ಪಂದ್ಯಾಟಗಳ ಉದ್ಘಾಟನೆ



ಬೀದರ:ಸೆ.24:ನಗರದ ಬಿ.ವಿ.ಭೂಮರಡ್ಡಿ ಪದವಿ ಮಹಾವಿದ್ಯಾಲಯ ಹಾಗೂ ಬೀದರ ವಿಶ್ವವಿದ್ಯಾಲಯ ಬೀದರ ಇವರ ಸಂಯುಕ್ತಾಶ್ರಯದಲ್ಲಿ ಅಂತರ ಕಾಲೇಜುಗಳ ಏಕವಲಯ ಮಟ್ಟ ಕಬಡ್ಡಿ ಪುರುಷ ಪಂದ್ಯಾಟಗಳ ಉದ್ಘಾಟನಾ ಸಮಾರಂಭ ಬೀದರ ವಿಶ್ವವಿದ್ಯಾಲಯದ ಬೀದರದ ಕುಲಸಚಿವರು (ಆಡಳಿತ) ಆದರಣೀಯ ಸುರೇಖಾ ಅವರ ಅಮೃತ ಹಸ್ತದಿಂದ ಸಸಿಗೆ ನೀರೆರೆಯುವುದರ ಮುಖಾಂತರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ ಕ್ರೀಡೆ ವ್ಯಕ್ತಿಯ ದೈಹಿಕ ಮತ್ತು ಮಾನಸಿಕ ಒತ್ತಡವನ್ನು ಕಡಿಮೆ ಮಾಡುತ್ತದೆ ಹಾಗೂ ಕ್ರೀಡೆಯಲ್ಲಿ ಭಾಗವಹಿಸಿದ ಕ್ರೀಡಾಪಟುಗಳಿಗೆ ಹುದ್ದೆಗಳನ್ನು ಪಡೆಯುವದರ ಸಂದರ್ಭದಲ್ಲಿ 5% ಮೀಸಲಾತಿ ಇದೆ ಇದರ ಸದುಪಯೋಗ ಪಡೆದುಕೊಂಡು ತಾವೆಲ್ಲರು ಉಜ್ವಲ ಭವಿಷ್ಯ ನಿರ್ಮಿಸಿಕೊಳ್ಳಬೇಕೆಂದು ಕರೆಕೊಟ್ಟರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ ಪಶು ವೈದ್ಯಾಧಿಕಾರಿಗಳು ಪಶು ಸಂಗೋಪನಾ ಇಲಾಖೆಯ ಡಾ. ಗೌತಮ ಅರಳಿ ಅವರು ಮಾತನಾಡುತ್ತಾ ಕ್ರೀಡೆ ಮಾನವನ ದೈಹಿಕತೆಯನ್ನು ಬಲಪಡಿಸಿ ಸೈನ್ಯ ಪೋಲಿಸ್ ಹಾಗೂ ಉನ್ನತ ವ್ಯಾಸಂಗದಲ್ಲಿ ಕ್ರೀಡಾಪಟುಗಳ ಕೋಟಾದಲ್ಲಿ ತಾವು ತಮ್ಮ ಸ್ಥಾನವನ್ನು ಪಡೆಯಲು ಸಾಧ್ಯವಾಗುತ್ತದೆ ದೇಶಿಯ ಕ್ರೀಡೆಗಳಿಗೆ ತಾವೆಲ್ಲರು ಪ್ರೋತ್ಸಾಹ ಕೊಟ್ಟಾಗ ಅವು ಉಳಿಯಲು ಸಾಧ್ಯ ಹೀಗಾಗಿ ಭಾಗವಹಿಸಿದ ಎಲ್ಲಾ ಕ್ರೀಡಾ ಪಟುಗಳಿಗೆ ಶುಭ ಹಾರೈಸಿದರು.

ಕಾರ್ಯಕ್ರಮದ ಘನ ಅಧ್ಯಕ್ಷತೆಯನ್ನು ವಹಿಸಿದ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ.ಪಿ.ವಿಠ್ಠಲ ರಡ್ಡಿಯವರು ಮಾತನಾಡುತ್ತಾ ಇಂದು ಎಲ್ಲಾ ಕ್ರೀಡಾಪಟುಗಳು ಹಾಗೂ ದೇಶದ ಜನತೆ ಕೇವಲ ಕ್ರಿಕೆಟ್ ಪಂದ್ಯಾವಳಿಗೆ ಮಾತ್ರ ಪ್ರೋತ್ಸಾಹ ಕೊಟ್ಟು ಅದಕ್ಕೆ ದಾಸರಾದಂತೆ ವರ್ತಿಸುತ್ತಿದ್ದಾರೆ ನಮ್ಮ ದೇಶಿಯ ಕ್ರೀಡೆಗಳಾದ ಹಾಕಿ, ಕಬಡ್ಡಿ, ಖೋ – ಖೋ, ಲಗೋರಿ, ಡ್ಯಾಂಬಲ್ಸ್, ಓಟದ ಸ್ಪರ್ಧೆ, ಹಗ್ಗಾಟ, ಇಂತಹ ಅಮೂಲ್ಯವಾದ ಕ್ರೀಡೆಗಳು ಇವತ್ತಿನ ವಿದ್ಯಾರ್ಥಿಗಳು ಮರೆಯುತ್ತಿದ್ದಾರೆ ಈ ಎಲ್ಲಾ ಮೇಲಿನ ಕ್ರೀಡೆಗಳು ವಿದ್ಯಾರ್ಥಿ ದೈಹಿಕವಾಗಿ ಮಾನಸಿಕವಾಗಿ ಸದೃಢವಾಗಿ ಬೆಳೆದು ದೇಶದ ಕೀರ್ತಿಯನ್ನು ವಿದೇಶಗಳಲ್ಲಿ ಹರಡಿಸಬಹುದು ಆದುದರಿಂದ ಸೋಲು ಗೆಲವು ಅನಿವಾರ್ಯ ಸೋತವರು ನಿರಾಶರಾಗದೇ ಗೆದ್ದವರು ಹಿಗ್ಗದೇ ಸೋಲು ಗೆಲವು ಒಂದೇ ನಾಣ್ಯದ ಎರಡು ಮುಖಗಳು ಹಾಗೂ ಕ್ರೀಡೆ ಜೊತೆಗೆ ಅಧ್ಯಯನದಲ್ಲಿ ಆಸಕ್ತಿಹೊಂದಿ ಒಳ್ಳೆಯ ಸಾಧನೆ ಮಾಡಿ ಗುರು ಹಿರಿಯರ ಹಾಗೂ ಶಿಕ್ಷಕರ ಕನಸನ್ನು ನನಸು ಮಾಡಬೇಕೆಂದು ಕ್ರೀಡಾಪಟುಗಳನ್ನು ಉದ್ದೇಶಿಸಿ ಮಾರ್ಮಿಕವಾಗಿ ನುಡಿದರು.

ಈ ಕ್ರೀಡೆಯಲ್ಲಿ ಪ್ರಥಮ ಸ್ಥಾನವನ್ನು ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ ನೌಬಾದ, ಬೀದರ ಪಡೆದುಕೊಂಡರೆ, ಎರಡನೇಯ ಸ್ಥಾನವನ್ನು ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ ಔರಾದ ಗಿಟ್ಟಿಸಿಕೊಂಡಿತ್ತು. ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಪಿ.ವಿಠ್ಠಲ ರಡ್ಡಿಯವರು ಗೆದ್ದ ಕ್ರೀಡಾಪಟುಗಳಿಗೆ ಕಪ್ ಮತ್ತು ಪ್ರಮಾಣ ಪತ್ರ ವಿತರಿಸಿದರು.

ಕಾರ್ಯಕ್ರಮದ ಆರಂಭದಲ್ಲಿ ಬಿ.ಎ. ಪ್ರಥಮ ವರ್ಷದ ಕು: ಕುಮಾರಿ ಮನುಪ್ರೀಯಾ, ಕು: ಕೀರ್ತಿ ಪ್ರಾರ್ಥನೆ ಗೀತೆ ಹಾಡಿದರು, ಸ್ವಾಗತ ಹಾಗೂ ಪ್ರಾಸ್ತಾವಿಕ ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಶೇಷರಾವ ಜಾಧವ ನಡೆಸಿಕೊಟ್ಟರೆ, ಸಂಚಾಲನೆಯನ್ನು ಇತಿಹಾಸ ವಿಭಾಗ ಪ್ರಾಧ್ಯಾಪಕರಾದ ಶ್ರೀ ಬಸವರಾಜ ಬಿರಾದಾರ ನಿರ್ವಹಿಸಿದರೆ, ವಂದನೆಯನ್ನು ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಶ್ರೀಮತಿ ವಚನಶ್ರೀ ನಡೆಸಿಕೊಟ್ಟರು. ಈ ಕಾರ್ಯಕ್ರಮದಲ್ಲಿ ಬಸವೇಶ್ವರ ಶಿಕ್ಷಣ ಮಹಾವಿದ್ಯಾಲಯದ ದೈಹಿಕ ಶಿಕ್ಷಕರಾದ ಡಾ. ಸಿದ್ರಾಮ ನೆಂಗಾ, ಶ್ರೀ ಓಂಕಾರ ಮಾಶೆಟ್ಟಿ, ಡಾ. ಬಾಲಸುಬ್ರಮಣ್ಯಂ, ಡಾ. ರವಿ ನಾಯಕ, ಡಾ. ಊರ್ವಶಿ, ಡಾ. ಸಂಜುಕುಮಾರ ಅಪ್ಪೆ, ಡಾ. ಶಿವಕುಮಾರ ಗಡ್ಡೆ, ಶ್ರೀ ಪಂಡಿತ ಪಾಟೀಲ, ಶ್ರೀ ಸತೀಶ ಡೊಂಗ್ರೆ, ಶ್ರೀ ಕುಶಾಲ ಕೋರೆ, ಉಪಸ್ಥಿತರಿದ್ದರು.

# ಆದಿ ಕರ್ಮಯೋಗಿ ಅಭಿಯಾನದಡಿಯಲ್ಲಿ ಜನರಿಗೆ ಅರಿವು ಮೂಡಿಸಿ: ಸಂಸದ ಸಾಗರ ಖಂಡ್ರೆ




ಬೀದರ,ಸೆ.24: ಆದಿ ಕರ್ಮಯೋಗಿ ಅಭಿಯಾನದಡಿ ಅವರಿಗಿರುವ ಕಾರ್ಯಕ್ರಮಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಬೇಕು ಎಂದು ಸಂಸದ ಸಾಗರ ಈಶ್ವರ ಖಂಡ್ರೆ ಅವರು ತಿಳಿಸಿದರು.

ಅವರು ಬುಧವಾರ ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ನಡೆದ ಧರ್ತಿ ಆಭಾ ಜನಜಾತಿ ಗ್ರಾಮ ಉತ್ಕರ್ಷ ಕಾರ್ಯಕ್ರಮದಡಿ ಆದಿ ಕರ್ಮಯೋಗಿ ಅಭಿಯಾನದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸರ್ಕಾರದ ಅನೇಕ ಯೋಜನೆಗಳ ಬಗ್ಗೆ ಹಾಗೂ ತಮ್ಮ ವರ್ಗಗಳ ಅಭಿವೃದ್ಧಿಗಾಗಿ ಸರ್ಕಾರದ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ಇರುವುದಿಲ್ಲ. ಅದಕ್ಕಾಗಿ ಅಧಿಕಾರಿಗಳು ಆದಿ ಕರ್ಮಯೋಗಿ ಅಭಿಯಾನದಡಿಯಲ್ಲಿ ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ ಅವರಿಗಿರುವ ಯೋಜನೆ ಬಗ್ಗೆ ತಿಳುವಳಿಕೆ ಮೂಡಿಸಬೇಕು ಎಂದರು.

ಕೇಂದ್ರ ಸರ್ಕಾರವು 2024ರಲ್ಲಿ ಆದಿವಾಸಿ, ಬುಡಕಟ್ಟು, ಪರಿಶಿಷ್ಟ ಪಂಗಡ, ಪರಿಶಿಷ್ಟ ಪಂಗಡದ ಅಲೆಮಾರಿ ಜನಾಂಗದ ಸರ್ವತೋಮುಖ ಅಭಿವೃದ್ಧಿಗಾಗಿ ಧರ್ತಿ ಆಭಾ ಜನಜಾತಿ ಗ್ರಾಮ ಉತ್ಕರ್ಷ ಕಾರ್ಯಕ್ರಮ ಜಾರಿಗೆ ತಂದಿತು. ಈ ಕಾರ್ಯಕ್ರಮದಡಿ ಬೀದರ ಜಿಲ್ಲೆಯ 196 ಗ್ರಾಮಗಳು ಆಯ್ಕೆಯಾಗಿದೆ. ಔರಾದ–72, ಹುಮನಾಬಾದ–44, ಕಮಲನಗರ–38, ಚೀಟಗುಪ್ಪಾ–31, ಬಸವಕಲ್ಯಾಣ–5, ಬೀದರ–4, ಭಾಲ್ಕಿ–2, ತಾಲೂಕುವಾರು ಗ್ರಾಮಗಳು ಆಯ್ಕೆಯಾಗಿವೆಂದರು

ಈ ಕಾರ್ಯಕ್ರಮದಡಿ ಬರುವ ಜನರಿಗೆ ಶಿಕ್ಷಣ, ಆರೋಗ್ಯ, ಮೂಲಭೂತ ಸೌಕರ್ಯ, ರಸ್ತೆ ಸಂಪರ್ಕ, ದೂರಸಂಪರ್ಕ, ಕುಡಿಯುವ ನೀರು, ವಸತಿ, ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ಸೇರಿದಂತೆ 29 ಅಂಶಗಳನ್ನು ಒಳಗೊಂಡ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದು. ಈ ಕಾರ್ಯಕ್ರಮದಡಿ ಪ್ರತಿ ಗ್ರಾಮಕ್ಕೆ 2 ಕೋಟಿವರೆಗೆ ಅನುದಾನ ನೀಡಲಾಗುತ್ತದೆ ಆದ್ದ–ರಿಂದ ಶಾಸಕರ, ಸ್ಥಳಿಯ ನಾಯಕರ , ಗ್ರಾಮ ಪಂಚಾಯಿತಿ ಅಧ್ಯಕ್ಷರ ಮತ್ತು ಸದಸ್ಯರ ಗಮನಕ್ಕೆ ತಂದು ಈ ಕಾರ್ಯಕ್ರಮದ ತಿಳಿಸಿ, ಕುಂದು ಕೊರತೆಗಳ ಬಗ್ಗೆ ಅವರಿಂದ ಮಾಹಿತಿ ಪಡೆಯಬೇಕು ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಗ್ರಾಮಗಳಿಗೆ ಖುದ್ದಾಗಿ ಭೇಟಿ ನೀಡಿ ಪರಿಶೀಲನೆ ನಡೆಸಿ, ಕುಂದು ಕೊರತೆ ಅರಿತು ನಂತರ ಆಕ್ಷನ್ ಪ್ಲಾನ್ ಹಾಕಿಕೊಳ್ಳಬೇಕು ಎಂದರು.

ಇದೇ ಸಂದರ್ಭದಲ್ಲಿ ಪ್ರಧಾನಮಂತ್ರಿ ಆವಾಸ್ ಯೋಜನೆ ಗ್ರಾಮೀಣ ಬಗ್ಗೆ ಪ್ರಗತಿ ಪರಿಶೀಲನಾ ಸಭೆ ಕೈಗೊಂಡು, ಅಧಿಕಾರಿಗಳಿಂದ ಮಾಹಿತಿಗಳನ್ನು ಪಡೆದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಗಿರೀಶ್ ಬದೋಲೆ ಮಾತನಾಡಿ, ಪ್ರಧಾನಮಂತ್ರಿ ಆವಾಸ್ ಯೋಜನೆ ಗ್ರಾಮೀಣದಡಿ ಬರುವ ವಸತಿಗಳ ಜಿಯೋ ಟ್ಯಾಗ್ ಮತ್ತು ಜಿಪಿಎಸ್ ಅನ್ನು ಒಂದು ವಾರದಲ್ಲಿ ಪೂರ್ಣಗೊಳಿಸಬೇಕು. ಒಂದು ವೇಳೆ ಪೂರ್ಣಗೊಳಿಸದಿದ್ದರೆ, ಸಂಬಂಧಪಟ್ಟ ಪಿಡಿಓ ಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದರು.

ಈ ಸಂದರ್ಭದಲ್ಲಿ ಪರಿಶಿಷ್ಟ ವರ್ಗಗಳ ಇಲಾಖೆಯ ಅಧಿಕಾರಿಗಳು, ಎಲ್ಲಾ ತಾಲೂಕು ಪಂಚಾಯತಗಳ ಇಓ, ಪಿಡಿಓಗಳು ಸೇರಿದಂತೆ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

# 'ಪೌರಕಾರ್ಮಿಕರು ತಮ್ಮ ಕೆಲಸದ ಜತೆಗೆ ಮಕ್ಕಳ ವಿದ್ಯಾಭ್ಯಾಸದ ಬಗ್ಗೆಯೂ ಗಮನ ಹರಿಸಿ:ಮುಖ್ಯಾಧಿಕಾರಿ ವನಿತಾ ಚವ್ಹಾಣ



ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ:ನಿತ್ಯವೂ ಪಟ್ಟಣದ ಎಲ್ಲವಾರ್ಡ್‌ಗಳ ಸ್ವಚ್ಛತೆ ಜತೆಗೆ ಸಾರ್ವಜನಿಕರ ಆರೋಗ್ಯಕ್ಕಾಗಿ ನಿರಂತರ ಶ್ರಮಿಸುತ್ತಿರುವ ಪೌರ ಕಾರ್ಮಿಕರ ಸೇವೆ ಶ್ಲಾಘನೀಯ ಎಂದು ಮುಖ್ಯಾಧಿಕಾರಿ ವನಿತಾಬಾಯಿ ಚವ್ಹಾಣರವರು ಸ್ವಚ್ಛತಾ ಕಾರ್ಯನಿರ್ವಹಿಸುವ ಪೌರ ಕಾರ್ಮಿಕರಿಗೆ ಸಮವಸ್ತ್ರ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ನುಡಿದರು. ಪೌರ ಕಾರ್ಮಿಕರು ಪ್ರತಿ ವಾರ್ಡ್‌ಗಳ ಕಣ್ಣುಗಳಿದ್ದಂತೆ ಅವರು ಸ್ವಚ್ಛತೆ ಕಾಪಾಡಿದರೆ ಮಾತ್ರ ಸುಂದರ ನಗರವಾಗಿ ಕಾಣಲು ಸಾಧ್ಯ. 'ಪೌರಕಾರ್ಮಿಕರು ತಮ್ಮ ಕೆಲಸದ ಜತೆಗೆ ಮಕ್ಕಳ ವಿದ್ಯಾಭ್ಯಾಸದ ಬಗ್ಗೆಯೂ ಗಮನ ಹರಿಸಬೇಕು. ತಮ್ಮಂತೆ ಅವರೂ ಪೌರಕಾರ್ಮಿಕರಾಗದೆ, ಚೆನ್ನಾಗಿ ಓದಿ, ಅಧಿಕಾರಿಯಾಗುವಂತೆ ಪ್ರೇರೇಪಿಸಬೇಕು,' ಎಂದರು. ನಾವು ಏಳುವ ಮುನ್ನವೇ ಪೌರ ಕಾರ್ಮಿಕರು ಪ್ರತಿ ವಾರ್ಡ್‌ಗಳ ಮನೆಯ ಸುತ್ತ, ಮುತ್ತ ಸ್ವಚ್ಛತೆ ಮಾಡುವ ವೃತ್ತಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ನಿತ್ಯ ಕಾಯಕ ಯೋಗಿಗಳಂತೆ ಕೆಲಸ ಮಾಡುತ್ತಿರುವುದು ಅವರ ಸೇವೆಯ ಶ್ರದ್ಧೆಗೆ ಹಿಡಿದ ಕೈಗನ್ನಡಿಯಾಗಿದೆ. ಇವರು ಪಟ್ಟಣದ ಕಣ್ಣುಗಳಿದ್ದಂತೆ ಎಂದರು. ಪುರಸಭೆ ಅಧ್ಯಕ್ಷೆ ಮಾತನಾಡಿ, ನಗರವನ್ನು ಶುಚಿಗೊಳಿಸುವ ಕಾಯಕದಲ್ಲಿ ತೊಡಗುವ ಪೌರಕಾರ್ಮಿಕರು ದೇಶವನ್ನು ಕಾಯುವ ಸೈನಿಕನಂತೆ ಸೈನಿಕ ಗಡಿಯಲ್ಲಿ ದೇಶದ ಭದ್ರತೆಗಾಗಿ ಸೇವೆ ಸಲ್ಲಿಸಿದರೆ ನಗರವನ್ನು ಶುಚಿಗೊಳಿಸುವ ನಿಟ್ಟಿನಲ್ಲಿ ಸೈನಿಕರಂತೆ ಯಾವುದೇ ಪ್ರತಿಫಲಾಪೇಕ್ಷೆಯನ್ನು ಪಡೆಯದೆ ತಮ್ಮದೇ ಆದ ಸೇವೆಯನ್ನು ನೀಡುತ್ತಿರುವುದು ಪೌರಕಾರ್ಮಿಕರು ಎಂದರು. ಕಾರ್ಯಕ್ರಮದಲ್ಲಿ ಪುರಸಭೆಯ ಸದಸ್ಯರು ಹಾಗೂ ಅಧಿಕಾರಿ ಸಿಬ್ಬಂದಿ ವರ್ಗದವರು ಹಾಗೂ ಆರೋಗ್ಯ ನಿರೀಕ್ಷಕರು ಹಾಜರಿದ್ದರು.


# ಜಾನುವಾರುಗಳಿಗೆ ಲಸಿಕೆ ಹಾಕಿಸಿ: ನಾರಾಯಣಪೇಟ್

ಮಲ್ಲಮ್ಮ ನುಡಿ ವಾರ್ತೆ



ಚಿಟಗುಪ್ಪ:-ತಾಲೂಕಿನ ಎಲ್ಲಾ ರೈತರು ತಮ್ಮಲ್ಲಿರುವ ಆಕಳು ಮತ್ತು ಆಕಳು ಕರುಗಳನ್ನು ತಪ್ಪದೆ ಮುಂಜಾಗ್ರತ ಕ್ರಮವಾಗಿ ಚರ್ಮಗಂಟು ರೋಗಗಳ ಲಸಿಕೆ ಹಾಕಿಸಿ ಜಾನುವರುಗಳನ್ನು ರೋಗದಿಂದ ತಪ್ಪಿಸಿ ಎಂದು ಸಮಾಜ ಕಾರ್ಯಕರ್ತ ಚಂದು ನಾರಾಯಣಪೇಟ್ ತಿಳಿಸಿದ್ದಾರೆ. ಚರ್ಮಗಂಟುರೋಗವು ಮುಖ್ಯವಾಗಿ ಆಕಳು ಮತ್ತು ಆಕಳುಕರು, ಹೋರಿ ಕರುಗಳಲ್ಲಿ ಕಂಡು ಬರುತಿದ್ದು, ಇವುಗಳಿಗೆ ಮಾತ್ರ ಲಸಿಕೆ ಯನ್ನು ಹಾಕಲಾಗುತ್ತಿದೆ. ಚರ್ಮಗಂಟು ರೋಗ ಬಂದಲ್ಲಿ ಅವುಗಳನ್ನು ಬೇರೆ ದನಗಳಿಂದ ದೂರವಿಡಿ ಹಾಗೂ ಹತ್ತಿರದ ಪಶುವೈದ್ಯರಿಂದ ಚಿಕಿತ್ಸೆ ಕೊಡಿಸಿ ಎಂದು ಪತ್ರಿಕಾ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

# ರೈತರ ಸರ್ವಾಂಗಿಣ ಅಭಿವೃದ್ಧಿಯೇ ನನ್ನ ಗುರಿ: ವೈಜನಾಥ ವೀರರೆಡ್ಡಿ



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:- ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಜಿಲ್ಲೆಯಲ್ಲಿಯೇ ಮಾದರಿ ಸಹಕಾರಿ ಸಂಘ ಮಾಡಲು ಸಂಘದ ಸರ್ವ ಸದಸ್ಯರ ಮತ್ತು ರೈತರ ಸಹಕಾರ ಅಗತ್ಯವಾಗಿದೆ ಎಂದು ಸಂಘದ ಅಧ್ಯಕ್ಷ ವೈಜನಾಥ ವೀರರೆಡ್ಡಿ ತಾಲೂಕಿನ ಮಂಗಲಗಿ ಕೃಷಿ ಪತ್ತಿನ ಸಹಕಾರ ಸಂಘದ 68ನೇ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತ ತಿಳಿಸಿದರು. ರೈತರಿಗೆ ಯಾವುದೇ ಸಮಸ್ಯೆ ಆಗದಂತೆ ಸರಿಯಾದ ಸಮಯಕ್ಕೆ ರೈತರಿಗೆ ರಸಗೊಬ್ಬರ ಸೇರಿದಂತೆ ಎಲ್ಲಾ ಸೌಲಭ್ಯಗಳನ್ನು ಒದಗಿಸಲು ಪ್ರಮಾಣಿಕ ಪ್ರಯತ್ನ ಮಾಡುವುದಾಗಿ ತಿಳಿಸಿದರು. ಸಹಕಾರಿ ಸಂಘದ ಷೇರುದಾರ ಮರಣ ಹೊಂದಿದ್ದರೆ ನಮ್ಮ ಸಂಘದ ವತಿಯಿಂದ 10,000 ರೂಪಾಯಿ ನೀಡುವುದಾಗಿ ಈ ವಾರ್ಷಿಕ ಮಹಾಸಭೆಯಲ್ಲಿ ತಿಳಿಸಿದರು. 2024- 25ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕ ಪತ್ರವನ್ನು ಸಂಕ್ಷಿಪ್ತವಾಗಿ ಮುಖ್ಯಕಾರ್ಯನಿರ್ವಾಕ ಅಧಿಕಾರಿ ಪ್ರವೀಣ ಕೆಳಕೇರಾ ವಿವರಿಸಿದರು. ಈ ಸಂದರ್ಭದಲ್ಲಿ ಉಪಾಧ್ಯಕ್ಷ ವಿಠಲ್ ಅರ್ಕಿ, ನಿರ್ದೇಶಕರಾದ ಕಂಟೆಪ್ಪ ಪಾಟೀಲ್, ಭೀಮಣ್ಣ ಚೀನಕೇರಾ, ಇಬ್ರಾಹಿಂ ಪಟೇಲ್ ಮೊರೆಸಾಬ್, ಮಾಣಿಕರೆಡ್ಡಿ ಗುಡಪಳ್ಳಿ, ವೆಂಕಟರೆಡ್ಡಿ ಪಾಟೀಲ್, ಶಾಫಿಯಾ ಬೇಗಂ, ಬಕ್ಕಮ್ಮ, ದೇವೀಂದ್ರ ನಿಂಗದಳ್ಳಿ, ರಮೇಶ್ ಮಾಲೆಕರ್, ಕಮಲರೆಡ್ಡಿ ಗಾರಂಪಳ್ಳಿ, ಕ್ಷೇತ್ರ ಸಹಾಯಕ ರಾಹುಲ್ ಪಿ. ಸಿಬ್ಬಂದಿಗಳಾದ ಸಂತೋಷರೆಡ್ಡಿ, ಮಹಾನಂದಾ ಹಾಲಹಳ್ಳಿ, ಮಹೇಶ್ ಚಿಟ್ಟಾ, ವಿಶ್ವನಾಥ, ಗುಂಡಪ್ಪ ಕಾಡಗುತ್ತಿ ಸೇರಿದಂತೆ ರೈತರು ಗ್ರಾಮಸ್ಥರು ಉಪಸ್ಥಿತರಿದ್ದರು.

# ಸೆ.26ರಂದು ವಿದ್ಯುತ್ ವ್ಯತ್ಯಯ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಸೆಪ್ಟೆಂಬರ್ 24-: ಇಲ್ಲಿನ ಜೆಸ್ಕಾಂ ಗ್ರಾಮೀಣ ಕಾರ್ಯ ಮತ್ತು ಪಾಲನೆ ಉಪ ವಿಭಾಗ ವ್ಯಾಪ್ತಿಯ ವಡವಟ್ಟಿ 110/11ಕೆವಿ ವಿದ್ಯುತ್ ಉಪ-ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾರ್ಯ ಹಮ್ಮಿಕೊಂಡಿ ಪ್ರಯುಕ್ತ ಸೆಪ್ಟೆಂಬರ್ 26ರ ಬೆಳಗ್ಗೆ 10.30 ಗಂಟೆಯಿಂದ ಸಂಜೆ 5.30 ಗಂಟೆವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಜೆಸ್ಕಾಂ ಗ್ರಾಮೀಣ ಕಾರ್ಯ ಮತ್ತು ಪಾಲನೆ ಉಪ ವಿಭಾಗದ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜಮಖಂಡಿ । ಪ್ರಾಥಮಿಕ ಕೃಷಿ ಪತ್ತಿನ ವಾರ್ಷಿಕ ಸಭೆ.

# ರೈತರ ನೆರವಿಗೆ ನಿಂತ ಸಹಕಾರ ಸಂಘಗಳು ಬಳವಂತರಾವ ಹಿರನಾಯಕ ಅಭಿಮತ



ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ:- ಹುಲಸೂರ: ಸೆ 24 ಸಹಕಾರ ಸಂಘ ರೈತರ ನೆರವಿಗೆ ಸ್ಥಾಪನೆಯಾಗಿದ್ದು, ಅದರ ಅಭಿವೃದ್ಧಿಗೆ ರೈತರು ಸಹಕಾರ ನೀಡಬೇಕು ಆಗ ಸಂಘವು ಅಭಿವೃದ್ಧಿಯಾಗುತ್ತದೆ' ಎಂದು ರೈತ ಮುಖಂಡ ಬಳವಂತರಾವ ಹಿರನಾಯಕ ತಿಳಿಸಿದರು.

ಸಮೀಪದ ಜಮಖಂಡಿ ಗ್ರಾಮದಲ್ಲಿ ಇತ್ತೀಚೆಗೆ ನಡೆದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2024-2025 ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ಕಾರ್ಯಕ್ರಮದ ಉದ್ದೇಶಿಸಿ ಮಾತನಾಡಿದರು.

ಗ್ರಾಮಿಣ ಭಾಗದ ರೈತರಿಗೆ ಸಹಕಾರ ಸಂಘಗಳಿಂದ ಸಾಲಮನ್ನಾ, ಬಾಕಿ ಪಾವತಿ , ಬೇಳೆ ವಿಮೆ, ಸೇರಿ ವಿವಿಧ ಯೋಜನೆಗಳು ಅನುಕೂಲವಾಗುತ್ತಿದ್ದು ರೈತರು ಆತ್ಮಹತ್ಯ ಮಾಡಿಕೊಳ್ಳಬಾರದು, ಸಹಕಾರ ಸಂಘಕ್ಕೆ ಸದಸ್ಯರೇ ಮಾಲೀಕರಿದ್ದಂತೆ, ಸಹಕಾರ ಸಂಘದಲ್ಲಿ ರಾಜಕೀಯ ಬೆರೆಸಿದರೆ ಸಂಘದ ಮೂಲ ಉದ್ದೇಶವೇ ಬದಲಾಗುತ್ತದೆ' ಎಂದು ರೈತರಿಗೆ ಹೇಳಿದರು. ಸಂಘದ ಕಾರ್ಯನಿರ್ವಾಹಕ ಅಧಿಕಾರಿ ಸಂಜೀವಕುಮಾರ ಮಾನೆ ವಾರ್ಷಿಕ ವರದಿ ಮಂಡಿಸಿ ಮಾತನಾಡಿ, 'ಸಂಘವು 2024-25 ನೇ ಸಾಲಿನಲ್ಲಿ ₹ 1ಕೋಟಿ ವಹಿವಾಟು ನಡೆಸಿದ್ದು, ₹8 ಲಕ್ಷ ನಿವ್ವಳ ಲಾಭ ಗಳಿಸಿದ್ದು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವನ್ನು ಜಿಲ್ಲೆಗೆ ಪ್ರಥಮ ಸ್ಥಾನಕ್ಕೆ ಕೊಂಡೊಯ್ಯಲು ಸದಸ್ಯರ ಸಹಕಾರ ಅತ್ಯಗತ್ಯ. ಸದಸ್ಯರು ಸಂಘದ ಅಭಿವೃದ್ಧಿಗೆ ಸಹಕಾರ ನೀಡಬೇಕು. ಸಾಲ ಪಡೆದವರು ಸಕಾಲದಲ್ಲಿ ಮರು ಪಾವತಿಸಬೇಕು ಎಂದು ಮನವಿ ಮಾಡಿದರು. ಸಭೆಯಲ್ಲಿ ಜಮಖಂಡಿ, ಕೊಂಗಳಿ , ವಾಂಝುರಖೇಡಾ ಗ್ರಾಮದ ಹಳ್ಳಿಗಳಿಂದ ರೈತರು ಭಾಗಿಯಾಗಿದ್ದರು.

ಈ ಸಂದರ್ಭದಲ್ಲಿ ಪಿಕೆಪಿಎಸ ಸಂಘದ ಅಧ್ಯಕ್ಷರಾದ ಬಹುಸಾಬ ಮೊರೆ, ಪಿಕೆಪಿಎಸ ಉಪಾಧ್ಯಕ್ಷರಾದ ಮುಗದೂಮ ಜಹಾಂಗೀರ್,

ಸದಸ್ಯರಾದ ಯುವರಾಜ ಮೇತ್ರೆ, ಭಾಗವತ ತಂಬೋಲೆ, ಶ್ರೀಧರ ಬಗದೂರೆ, ರಮೇಶ ಮೂಳೆ, ಉದಯಭಾನ ಡಾಂಗೆ, ಪ್ರಮೋದ ರೋಳೆ, ಮಲ್ಲಪ್ಪಾ ದೇಶಮುಖ, ರಣಜಿತ್ ಧೋಬಳೆ, ಅನಿತಾ ನೇತಾಜಿ ಕೋಟೆ, ತಾತೆರಾವ್ ಕಾಂಬಳೆ, ನರಸಿಂಗ ತಾಂಬೋಲೆ, ಮಚಿಂದ್ರ ದೇಶಮುಖ, ನರಸಿಂಗ ಹಿರನಾಯಕ , ಭಾವರವ ಪಾಟಿಲ್, ನಂದಕುಮಾರ್ ಬಿರಾದಾರ, ಚನ್ನಬಸಪ್ಪ ಅಡೆಪ್ಪ, ಅಶೋಕ ಬಿರಾದಾರ, ಸಹಜಿರಾವ ತಂಬೋಲೆ, ವಿಠ್ಠಲ ತಡೋಳಗೆ, ಶ್ರೀಮಂತ ಕಂದಗುಳೆ , ಸಿಬ್ಬಂದಿ ವರ್ಗದವರು ಸೇರಿ ಹಲವರು ಇದ್ದರು. ಯೋಗಾಜಿ ಕಾರಬಾರಿ ನಿರೂಪಿಸಿ ವಂದಿಸಿದರು.

# ದೇಶದ ಪ್ರಗತಿಗೆ ಯುವಕರ ಪಾತ್ರ ಮಹತ್ವದ್ದಾಗಿದೆ



(ವರದಿ.ಡಿ.ಕೆ. ಪ್ರಹ್ಲಾದ. ಜಿ.)

ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ :- ಸೆ 24 ಪ್ರತಿಯೊಬ್ಬರು ಕಾಯಕದಲ್ಲಿ ತೊಡಗಿಸಿಕೊಳ್ಳಬೇಕು ನಾವು ದೇಶಕ್ಕಾಗಿ ಕೊಡುವ ಅಲ್ಪ ಕಾಣಿಕೆ ಕಾಯಕ ದೇಶದ ಪ್ರಗತಿಯಲ್ಲಿ ಯುವಕರ ಪಾತ್ರ ಮಹತ್ವದ್ದಾಗಿದೆ ಆದ್ದರಿಂದ ಕಾಯಕ ಮಾಡುವುದರ ಜೊತೆಗೆ ದೇಶದ ಉನ್ನತಿಗಾಗಿ ಕೈಜೋಡಿಸಬೇಕು ಎಂದು ಅಲಗೂಡ ಪ್ರೌಢಶಾಲೆಯ ಶಿಕ್ಷಕರಾದ ನಾಗಪ್ಪಾ ನಿಣ್ಣೆ ಹೇಳಿದರು. ಇಲ್ಲಿನ ಶ್ರೀ ಬಸವೇಶ್ವರ ದೇವಸ್ಥಾನ ಶಿಕ್ಷಣ ಸಂಸ್ಥೆ ಅಡಿಯಲ್ಲಿ ನಡೆಯುತ್ತಿರುವ, ಅಕ್ಕಮಹಾದೇವಿ ಮಹಿಳಾ ಪ್ರಥಮ ದರ್ಜೆ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ಎನ್ ಎಸ್ ಎಸ್ ಸಂಸ್ಥಾಪನಾ ದಿನಾಚರಣೆ ಮುಖ್ಯ ಅತಿಥಿಗಳಾಗಿ ಮಾತನಾಡಿದರು. ಬಸವೇಶ್ವರ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರಾದ ಡಾ. ರುದ್ರಮಣಿ ಮಠಪತಿ ಅವರು ಮಾತನಾಡಿ ಸಶಕ್ತ ಭಾರತಕ್ಕೆ ಯುವಕರ ಪಾತ್ರ ಪ್ರಾಮುಖ್ಯವಾದದ್ದು ಹೆಣ್ಣುಮಕ್ಕಳು ಕೂಡಾ ಎಲ್ಲಾ ಕ್ಷೇತ್ರಗಳಲ್ಲಿ ಉತ್ತಮ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ಹೇಳಿದರು, ಕಾಲೇಜಿನ ಪ್ರಾಚಾರ್ಯರಾದ ಮಾಯಾ ಮುಧಾಳೆ ಮಾತನಾಡಿ ಸ್ವಚ್ಛತೆಯಲ್ಲಿ ಯುವಜನತೆ ಭಾಗಿಯಾಗುವುದರ ಮೂಲಕ ಮನೆ ಅಲ್ಲದೆ ಮನೆಯ ಸುತ್ತಮುತ್ತ ಹಾಗೂ ಕಾಲೇಜಿನ ಆವರಣದಲ್ಲಿ ಸ್ವಚ್ಛತೆಯನ್ನು ಕಾಪಾಡಿಕೊಳ್ಳಬೇಕು ಎಂದರು.

ಶ್ರೀ ಬಸವೇಶ್ವರ ಪದವಿ ಕಾಲೇಜಿನ ಪ್ರಾಚಾರ್ಯರಾದ ಡಾ. ಭೀಮಾಶಂಕರ್ ಬಿರಾದರ್ ಎನ್‌ಎಸ್‌ಎಸ್ ಶಿಬಿರಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು ವಿದ್ಯಾರ್ಥಿಗಳು ಮೊಬೈಲ್ ಗಳು ಬಿಟ್ಟು ವಿದ್ಯಾಭ್ಯಾಸದ ಕಡೆ ಹೆಚ್ಚಿನ ಗಮನ ಕೊಡಬೇಕೆಂದರೆ. ಅಧ್ಯಕ್ಷತೆಯನ್ನು ಆಡಳಿತ ಅಧಿಕಾರಿ ಡಾ. ಮಲ್ಲಿಕಾರ್ಜುನ್ ಲಕಶೆಟ್ಟೆ ಮಾತನಾಡಿ ಓದು ಬರಹ ಯುವಜನತೆಯ ಶಕ್ತಿ ಓದಿನ ಕಡೆ ಗಮನವನ್ನು ಹರಿಸಬೇಕ ಎಂದರು. ಎನ್ ಎಸ್ ಎಸ್ ಬಿ ಘಟಕದ ಅಧಿಕಾರಿ ಜಗನಾಥ ರೆಡ್ಡಿ ಕಲ್ಲೂರೆ ಪ್ರಸ್ತಾವಿಕ ನುಡಿ ಮತ್ತು ಎನ್ ಎಸ್ ಎಸ್ ಪ್ರತಿಜ್ಞಾನಿಧಿಯನ್ನು ಓದಿಸಿದರು ಎನ್‌ಎಸ್‌ಎಸ್ 'ಎ' ಘಟಕದ ಅಧಿಕಾರಿಯದ ಶ್ರೀ ದಶರಥ. ಟಿ. ಹಳ್ಳಿಖೇಡೆ ಹಾಗೂ ಕಾಲೇಜಿನ ಎಲ್ಲಾ ಸಿಬ್ಬಂದಿಯವರು ಸೇರಿದಂತೆ ಅನೇಕರು ಉಪಸ್ಥಿತರಿದ್ದರು, ವಿದ್ಯಾರ್ಥಿನಿಯರಾದ ರಾಣಿ ಹಾಗೂ ಸಂಗಡಿಗರಿಂದ ಎನ್ ಎಸ್ ಎಸ್ ಗೀತೆಯನ್ನು ಹಾಡಲಾಯಿತು. ರೂಪ ನಿರೂಪಿಸಿದರೆ ಅನುರಾಧ ಸ್ವಾಗತಿಸಿದರು. ಮಧುಮತಿ ವಂದಿಸಿದರು.

# ರೈತರ ಮತ್ತು ಷೇರುದಾರರ ಬೇಡಿಕೆಗಳು ಈಡೇರಿಸಲು ಪ್ರಯತ್ನಿಸುತ್ತೇನೆ:ಅಧ್ಯಕ್ಷ ಕಲ್ಮೇಶ





(ರಾಜಕುಮಾರ.ಆರ್.ಹಡಪದ)

ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ: ತಾಲೂಕಿನ ಮನ್ನಾಏಖೇಳ್ಳಿ ಗ್ರಾಮದ ಹೊರವಲಯದಲ್ಲಿರುವ ಬೀದರ ಕಿಸಾನ್ ಸಕ್ಕರೆ ಕಾರ್ಖಾನೆಯಲ್ಲಿ ಆಡಳಿತ ಮಂಡಳಿ ಅಧ್ಯಕ್ಷ ಕಲ್ಮೇಶ ಸರ್ವಾಡ್ ನೇತೃತ್ವದಲ್ಲಿ ಬುಧವಾರ ಸಭೆ ಜರುಗಿತ್ತು.

ಸಭೆಯಲ್ಲಿ ಕಬ್ಬಿನ ಬೆಲೆ ಹೆಚ್ಚಿಸಬೇಕು, ಸ್ಥಳೀಯ ಇರುವ ಕಬ್ಬು ಬೆಳೆಯನ್ನು ಮೊದಲು ನುರಿಸಬೇಕು. ಕಾರ್ಖಾನೆ ಷೇರುದಾರರಿಗೆ ಸಕ್ಕರೆ ವಿತರಿಸಬೇಕು, ತುರ್ತು ಸಂದರ್ಭದಲ್ಲಿ ಕಬ್ಬು ಸಾಗಣಿ ಮಾಡಲು ವಾಹನ ವ್ಯವಸ್ಥೆ ಕಲ್ಪಿಸಿಕೊಡಬೇಕು. ಎಂದು ಹಲವಾರು ಬೇಡಿಕೆಗಳು ಈಡೇರಿಸುವಂತೆ ಆಡಳಿತ ಮಂಡಳಿಗೆ ಒತ್ತಾಯಿಸಿದರು. ಷೇರುದಾರರ ಮತ್ತು ರೈತರ ವಿವಿಧ ಬೇಡಿಕೆಗಳನ್ನು ಆಲಿಸಿದ ಕಾರ್ಖಾನೆ ಆಡಳಿತ ಮಂಡಳಿಯ ಅಧ್ಯಕ್ಷ ಕಲ್ಮೇಶ ಸರ್ವಾಡ್ ಅವರು ಮಾತನಾಡಿ, ಇದು ರೈತರ ಕಾರ್ಖಾನೆ ರೈತರ ಹಿತ ಕಾಯುವದು ನಮ್ಮ ಜವಾಬ್ದಾರಿಯಾಗಿದೆ. ಅಧಿಕ ರೈತರ ಬೇಡಿಕೆಯಾದ ಕಬ್ಬಿನ ಬೆಲೆ ಹೆಚ್ಚಿಸಲು ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತೇವೆ ಎಂದು ಹೇಳಿದರು. ಕಳೆದ ವರ್ಷ ಕಬ್ಬು ಸರಬರಾಜು ಮಾಡಿದ ರೈತರಿಗೆ 50ರೂಪಾಯಿ ಕೊಡವ ಬಾಕಿ ಹಣ ನೀಡುವಂತೆ ರೈತರು ಪಟ್ಟು ಹಿಡಿದ್ದರು. ಇದನ್ನು ಆಡಳಿತ ಮಂಡಳಿಯವರೊಂದಿಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಕಾರ್ಖಾನೆ ನಿರ್ದೇಶಕ ನಸೀಮ್ ಪಟೇಲ್ ಮಾತನಾಡಿ, ದಿ. ಮೀರಾಜೋದ್ದೀನ್ ಪಟೇಲ್ ಅವರು ಈ ಭಾಗದ ಕಬ್ಬು ಬೆಳೆಗಾರರ ಸಮಸ್ಯೆಗಳು ಅರಿತು ಬೀದರ್ ಕಿಸಾನ್ ಸಕ್ಕರೆ ಕಾರ್ಖಾನೆ ಸ್ಥಾಪಿಸಿದರು. ನಮ್ಮ ಕುಟುಂಬದ ಎಲ್ಲಾ ಸದಸ್ಯರ ಕಷ್ಟ ಪಟ್ಟು ಷೇರು ಸಂಗ್ರಹಿಸಿ ಕಾರ್ಖಾನೆ ಸ್ಥಾಪಿಸುವಲ್ಲಿ ಅಪಾರ ಕೊಡುಗೆ ನೀಡಿದ್ದೇವೆ. ಇತ್ತಿಚಿನ ದಿನಗಳಲ್ಲಿ ಕಾರ್ಖಾನೆ ಆಡಳಿತ ಮಂಡಳಿ ನಮ್ಮ ನಿರ್ದೇಶಕ ಸಲಹೆ ಸೂಚನೆಗಳನ್ನು ಕೇಳದೆ ಮನ ಬಂದಂತೆ ವರ್ತಿಸುತ್ತಿದ್ದಾರೆ. ಆಡಳಿತ ಮಂಡಳಿಯ ನಿರ್ದೇಶಕರ ಅಭಿಪ್ರಾಯ ಕೇಳದೆ ಯಾವುದೇ ಕೆಲಸ ಮಾಡಬೇರಾದರೆ ಸ್ವತಃ ನಿರ್ಧರ ಕೈಗೊಳ್ಳುತ್ತಿದಾರೆ. ಕಾರ್ಖಾನೆಯಿಂದ ಸಿಗುವ ಸೌಲಭ್ಯಗಳನ್ನು ಈ ಭಾಗದ ಅಭಿವೃದ್ಧಿಗೆ ಅನುದಾನ ಬಳಸಬೇಕು ಆದರೆ ತಮಗೆ ಬೇಕಾದ ಕಾರ್ಖಾನೆಗಳಿಗೆ ನೀಡುತ್ತಿದ್ದಾರೆ ಎಂದು ತಮ್ಮ ಅಳಲನ್ನು ತೊಡಿಕೊಂಡರು. ನಾನು ಈ ಕಾರ್ಖಾನೆಯ ಶೂನ್ಯ ನಿರ್ದೇಶಕನಾಗಿದ್ದೇನೆ ಎಂದರು.

ಈ ಸಂದರ್ಭದಲ್ಲಿ ಕಾರ್ಖಾನೆ ಆಡಳಿತ ಮಂಡಳಿ ನಿರ್ದೇಶಕರಾದ ಹಣಮಂತ ಸೊನ್ನದ್, ಕಲ್ಲನಗೌಡ ಪಾಟೀಲ್, ರಾಜಶೇಖರ ಅಂಗಡಿ, ರೈತ ಸಂಘದ ತಾಲೂಕಾಧ್ಯಕ್ಷ ಮಹಮ್ಮದ್ ಮುಖೀಮ್ ನಂದಗಾಂವ ಸೇರಿದಂತೆ ಷೇರುದಾರರು ಹಾಗೂ ರೈತರು ಉಪಸ್ಥಿತರಿದ್ದರು. ಸಭೆಯನ್ನು ಕಾರ್ಖಾನೆಯ ಪ್ರಧಾನ ವ್ಯವಸ್ಥಾಪಕ (ಆಡಳಿತ) ಬಾಹುಬಲಿ ರೆಂಟಿ ಕೊನೆಯಲ್ಲಿ ವಂದಿಸಿದರು.



ಔರಾದ.ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಶು ಅಭಿವೃದ್ಧಿ ಯೋಜನೆ ವತಿಯಿಂದ ಸೆ.24 ಔರಾದ(ಬಿ) ಪಟ್ಟಣದ ಡಾ.ಗುರುಪಾದಪ್ಪನಾಗಮಾರಪಳ್ಳಿ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಪೋಷಣ್ ಮಾಸಾಚರಣೆಯನ್ನು ಮಾಜಿ ಸಚಿವರು ಹಾಗೂ ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ಉದ್ಘಾಟಿಸಿದರು. ಮಕ್ಕಳಿಗೆ ವಿದ್ಯೆಯ ಮೇಲೆ ಆಸಕ್ತಿ, ಕಲಿಕೆಯ ಮೇಲೆ ಶ್ರದ್ಧೆ, ಸಂಸ್ಕಾರ ಕಲಿಯಲು ಅಂಗನವಾಡಿ ಕೇಂದ್ರವೇ ಕಲಿಕೆಯ ಮೊದಲ ಮೆಟ್ಟಿಲಾಗಿದೆ ಎಂದು ತಿಳಿಸಿದರು.ಕಾರ್ಯಕ್ರಮದಲ್ಲಿ ಅಂಗನವಾಡಿ ಕಾರ್ಯಕರ್ತರು ಹಾಗೂ ಅಂಗನವಾಡಿ ಸಹಾಯಕಿಯರನ್ನು ಸನ್ಮಾನಿಸಿದರು. (ಮಲ್ಲಮ್ಮ ನುಡಿ ಚಿತ್ರ)



ಬಸವಕಲ್ಯಾಣ :- ಇಲ್ಲಿನ ಬಿಕೆಡಿಬಿ ಕಲ್ಯಾಣ ಮಂಟಪದಲ್ಲಿ ದಸರಾ ಧರ್ಮ ಸಮ್ಮೇಳನದ ನಿಮಿತ್ತವಾಗಿ ಮೂರನೇ ದಿನದ ಬಾಳೆಹೊನ್ನೂರು ಶ್ರೀಮದ್ ರಂಭಾಪುರಿ ಜಗದ್ಗುರುಗಳಾದ ರಂಭಾಪುರಿ ಪೀಠದ ವೀರಸೋಮೇಶ್ವರ ಶಿವಾಚಾರ್ಯರು ಇಷ್ಟಲಿಂಗ ಮಹಾಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ಹುಡಗಿ ಪೂಜ್ಯ ಶ್ರೀ ವಿರೂಪಾಕ್ಷ ಶಿವಾಚಾರ್ಯರು. ಹಲಬರ್ಗದ ಪೂಜ್ಯರು. ತಿಪುರಾಂತಿನ ಗವಿಮಠದ ಪೂಜ್ಯಶ್ರೀ ಡಾ ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು. ತಡೂಳಾ ಪೂಜ್ಯಶ್ರೀ ರಾಜೇಶ್ವರ ಶಿವಾಚಾರ್ಯರು. ವೀರಣ್ಣ ಶೀಲವಂತ. ರುದ್ರೇಶ್ವರ ಸ್ವಾಮಿ. ಶರಣಪ್ಪಾ ಬಿರಾದಾರ. ರಮೇಶ ರಾಜೋಳೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. (ಮಲ್ಲಮ್ಮ ನುಡಿ ಚಿತ್ರ)

# ಎಸ್. ಎಲ್. ಬೈರಪ್ಪನವರು ವಿಶ್ವದ ಶ್ರೇಷ್ಠ ಕಾದಂಬರಿ ಕಾರರಲ್ಲಿ ಅಗ್ರಗಣ್ಯರು

ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ :- ಸೆ 24- ಎಸ್. ಎಲ್. ಬೈರಪ್ಪನವರು ವಿಶ್ವದ ಶ್ರೇಷ್ಠ ಕಾದಂಬರಿ ಕಾರರಲ್ಲಿ ಅಗ್ರಗಣ್ಯರು.

ಕನ್ನಡ ಸಾಹಿತ್ಯಕ್ಕೆ ಅನೇಕ ಅನುಭಾವ ಪೂರ್ಣ ಕಾದಂಬರಿಗಳನ್ನು ಕೊಟ್ಟಿದ್ದಾರೆ, ಇವರ ಅನೇಕ ಕಾದಂಬರಿಗಳು ಇಂಗ್ಲಿಷ್ ಭಾಷೆಗೆ ಅನುವಾದ ಗೊಂಡಿವೆ. ಇವರ ಕಾದಂಬರಿ ಆಧಾರಿತ ಅನೇಕ ಚಲನ ಚಿತ್ರಗಳು ಪ್ರಸಿದ್ದಿ ಪಡೆದಿವೆ. 2024ರಲ್ಲಿ ಇವರಿಗೆ ಹಾರಕೂಡ ಮಠದಿಂದ



"ಚನ್ನ ರೇಣುಕ ಬಸವ" ಪ್ರಶಸ್ತಿ ಕೊಟ್ಟಿದ್ದೇವೆ.

ಇವರ ಅಗಲುವಿಕೆಯಿಂದ ಕನ್ನಡ ಸಾಹಿತ್ಯದ ಶ್ರೇಷ್ಠ ನಕ್ಷತ್ರ ಕಳಚಿದಂತಾಗಿದೆ.

ಇವರ ಆತ್ಮಕ್ಕೆ ದೇವರು ಚಿರಶಾಂತಿ ನೀಡಲಿ, ಇವರ ಭೌತಿಕ ದೇಹ ಅಗಲಿದರೂ ಕೂಡ ಇವರ ಹೆಸರು ಸೂರ್ಯ ಚಂದ್ರ ಇರುವವರೆಗೂ ಜನಮಾನಸದ ಸ್ಮೃತಿ ಪಟಲದಲ್ಲಿ ಅಜರಾಮರವಾಗಿ ಉಳಿಯುತ್ತದೆ ಎಂದು ಹಾರಕೂಡದ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರು ತಿಳಿಸಿದ್ದಾರೆ.

# ದೆಹಲಿ ಕನ್ನಡ ಭವನದ ಸಿಬ್ಬಂದಿಗೆ ಶಾಲಿನಿ ಪ್ರಶಂಸೆ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು.ಸೆ24: ವಿದೇಶಗಳಲ್ಲಿ ಸಂಕಷ್ಟದಲ್ಲಿ ಸಿಲುಕಿದ ಭಾರತೀಯರನ್ನು ಅದರಲ್ಲೂ ಕನ್ನಡಿಗರನ್ನು ತಾಯ್ನಾಡಿಗೆ ಕರೆತರುವಲ್ಲಿ ಶ್ರಮಿಸಿದ ದೆಹಲಿ ಕನ್ನಡ ಭವನದ ಅಧಿಕಾರಿಗಳು ಮತ್ತು ಸಿಬ್ಬಂದಿಯ ಕಾರ್ಯವನ್ನು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಪ್ರಶಂಶಿಸಿದ್ದಾರೆ.

# ಸಿಂಧನೂರ ದಸರಾ: ಸೆ.29ಕ್ಕೆ ಖ್ಯಾತ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಸೆಪ್ಟೆಂಬರ್ 24: ಸಿಂಧನೂರು ತಾಲೂಕಾಡಳಿತ, ತಾಲೂಕು ಪಂಚಾಯಿತಿ, ನಗರಸಭೆ, ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ಸಿಂಧನೂರು ದಸರಾ ಉತ್ಸವ ಸಮಿತಿ ಇವರ ಸಂಯುಕ್ತಾಶ್ರಯದಲ್ಲಿ ಸಿಂಧನೂರು ನಗರದಲ್ಲಿ ಸೆ.29ರ ಸಂಜೆ 5.30ಕ್ಕೆ ಸಾಂಸ್ಕೃತಿಕ ದಸರಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಕನ್ನಡದ ಖ್ಯಾತ ಚಿತ್ರನಟರಾದ ಯುವರಾಜಕುಮಾರ ಅವರು ಕಾರ್ಯಕ್ರಮ ಉದ್ಘಾಟಿಸುವರು. ಶಮಿತಾ ಮಲ್ನಾಡ, ಸರಿಗಮಪ ಕಲಾವಿದರಾದ ಬಾಳು ಬೆಳಗುಂದಿ, ಕಾಸಿಂ ಅಲಿ, ರಮ್ಯಾ ಪ್ರಸನ್ನ, ವಿನೋದ್, ನಿರೂಪಕಿ ಐಶ್ವರ್ಯ ಹಾಗೂ ತಂಡದವರಿಂದ ಸಂಗೀತ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ ಎಂದು ಸಿಂಧನೂರು ದಸರಾ ಉತ್ಸವ ಸಮಿತಿಯ ಪ್ರಕಟಣೆ ತಿಳಿಸಿದೆ.

# ಭಾಗ್ಯಲಕ್ಷ್ಮಿ ಯೋಜನೆಯಡಿ ಆರ್ಥಿಕ ಸೌಲಭ್ಯ ಪಡೆಯಲು ಮನವಿ


ಮಲ್ಲಮ್ಮ ನುಡಿ ವಾರ್ತೆ



ಚಿಟಗುಪ್ಪ:- ಶಿಶು ಅಭಿವೃದ್ಧಿ ಯೋಜನೆ ಹುಮನಾಬಾದ 2006-07ನೇ ಸಾಲಿನ ನೋಂದಣಿಯಾಗಿ ಬಾಂಡ್ ಪಡೆದ ಫಲಾನುಭವಿಗಳು ಭಾಗ್ಯಲಕ್ಷ್ಮಿ ಯೋಜನೆಯಡಿ ಆರ್ಥಿಕ ಸೌಲಭ್ಯ ಪಡೆಯಲು ತಾಲೂಕ ಶಿಶು ಅಭಿವೃದ್ಧಿ ಅಧಿಕಾರಿಗಳು ಪತ್ರಿಕಾ ಪ್ರಕಟಣೆಯಲ್ಲಿ ವಿನಂತಿಸಿದಾರೆ 2006-7ನೇ ಸಾಲಿಗೆ ಸಂಬಂಧಿಸಿದಂತೆ ಆನ್ಲೈನ್ ನೋಂದಣಿಗೆ ಬಾಕಿ ಇರುವ ಫಲಾನುಭವಿಗಳು ತುರ್ತಾಗಿ ಶಿಶು ಅಭಿವೃದ್ಧಿ ಪೋರ್ಟ್ ಲೈನ್ ನಲ್ಲಿ ಆನ್ಲೈನ್ ನೋಂದಣಿ ಮಾಡಿಕೊಂಡು ಈ ಕೆಳಕಂಡ ದಾಖಲಾತಿಗಳು ಸಲ್ಲಿಸಿ, ಭಾಗ್ಯಲಕ್ಷ್ಮಿ ಯೋಜನೆಯ ಮೂಲ ಬಾಂಡ್, ಫಲಾನುಭವಿಯ ಜನನ ಪ್ರಮಾಣ ಪತ್ರ, ಬಿಪಿಎಲ್ ಪಡಿತರ ಚೀಟಿ, ಫಲಾನುಭವಿಯ ಶಾಲಾ ದಾಖಲಾತಿಗಳು, ಮಗು-ತಾಯಿ ಜಂಟಿ ಅಥವಾ ಮಗುವಿನ ಸಿಂಗಲ್ ಬ್ಯಾಂಕ್ ಖಾತೆ, ಇತರೆ ದಾಖಲೆಗಳು ಅಕ್ಟೋಬರ್ 31ರ ವರೆಗೆ ಸಲ್ಲಿಸಿ ಆರ್ಥಿಕ ಲಾಭ ಪಡೆಯಲು ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ಸ್ಥಳೀಯ ಅಂಗನವಾಡಿ ಕಾರ್ಯಕರ್ತೆ ಹಾಗೂ ಶಿಶು ಅಭಿವೃದ್ಧಿ ಅಧಿಕಾರಿಗಳಿಗೆ ಸಂಪರ್ಕಿಸಲು ಪತ್ರಿಕಾ ಪ್ರಕಟಣೆ ಯಲ್ಲಿ ತಿಳಿಸಿದ್ದಾರೆ.

# ಬಾಲಮ್ಮ ದೇವಿಯ ದರ್ಶನ ಪಡೆದ ಮಾಜಿ ಸಚಿವ ಖಾಶೆಂಪುರ್



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:- ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರದ ಮನ್ನಾಏಖೇಳ್ಳಿ ಗ್ರಾಮದ ಹೊರವಲಯದಲ್ಲಿರುವ ಶ್ರೀಬಾಲಮ್ಮ ದೇವಿಯ ಮಂದಿರಕ್ಕೆ ಬುಧವಾರ ಮಾಜಿ ಸಚಿವ ಬಂಡೆಪ್ಪ ಖಾಶೆಂಪುರ್ ಭೇಟಿ ನೀಡಿ, ತಾಯಿ ಬಾಲಮ್ಮ ದೇವಿಯ ದರ್ಶನ ಪಡೆದರು. ಜೊತೆಯಲ್ಲಿ ಸ್ಥಳೀಯ ಜನಪ್ರತಿನಿಧಿಗಳು, ಜೆಡಿಎಸ್ ಪಕ್ಷದ ಮುಖಂಡರು, ಕಾರ್ಯಕರ್ತರು ಸೇರಿದಂತೆ ಅನೇಕರಿದ್ದರು.

## ಬಿ.ವಿ.ಬಿ. ಪದವಿ ಮಹಾವಿದ್ಯಾಲಯದಲ್ಲಿ ಸಸ್ಯಶಾಸ್ತ್ರ ಪ್ರಾಧ್ಯಾಪಕರಿಗೆ ಒಂದು ದಿನದ ಕಾರ್ಯಾಗಾರ




ಮಲ್ಲಮ್ಮ ನುಡಿ ವಾರ್ತೆ

ಬೀದರ್:ಸೆ.24:ಎಚ್.ಕೆ.ಇ.ಸಂಸ್ಥೆಯ ಬಿ.ವಿ. ಭೂಮರಡ್ಡಿ ಆರ್ಟ್ಸ್, ಸೈನ್ಸ್ ಮತ್ತು ಕಾಮರ್ಸ್ ಕಾಲೇಜು,ಬೀದರ್ ಇವರು ಬೀದರ್ ವಿಶ್ವವಿದ್ಯಾಲಯ ಹಾಗೂ ಬೀದರ್ ಬೋಟಾನಿಕಲ್ ಸೊಸೈಟಿ ಸಹಯೋಗದಲ್ಲಿ "ಸಸ್ಯಶಾಸ್ತ್ರದ ಪ್ರಾಧ್ಯಾಪಕರಿಗೆ ಒಂದು ದಿನದ ಕಾರ್ಯಾಗಾರವನ್ನು" ಮಹಾವಿದ್ಯಾಲಯದ ಎ.ವಿ. ಸಭಾಂಗಣದಲ್ಲಿ ಭವ್ಯವಾಗಿ ಆಯೋಜಿಸಿದರು.

ಕಾರ್ಯಕ್ರಮವನ್ನು ಬೀದರ್ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್(ಮೌಲ್ಯಮಾಪನ) ಡಾ. ಪರಮೇಶ್ವರ ನಾಯಕ್ ಟಿ. ಉದ್ಘಾಟಿಸಿದರು. ಉದ್ಘಾಟನಾ ಭಾಷಣದಲ್ಲಿ ಅವರು, ಇಂದಿನ ಬದಲಾಗುತ್ತಿರುವ ಶಿಕ್ಷಣ ವ್ಯವಸ್ಥೆಯಲ್ಲಿ ಅಧ್ಯಾಪಕರು ತಮ್ಮ ಜ್ಞಾನವನ್ನು ನಿರಂತರವಾಗಿ ನವೀಕರಿಸಿಕೊಂಡು, ವಿದ್ಯಾರ್ಥಿ ಕೇಂದ್ರಿತ ಬೋಧನಾ ವಿಧಾನಗಳನ್ನು ಅಳವಡಿಸಿಕೊಳ್ಳುವುದು ಅತ್ಯಂತ ಅಗತ್ಯ ಎಂದು ಹೇಳಿದರು. ವಿದ್ಯಾರ್ಥಿಗಳಲ್ಲಿ ಕುತೂಹಲ, ಸಂಶೋಧನಾ ಮನೋಭಾವ ಮತ್ತು ಸೃಜನಶೀಲತೆಯನ್ನು ಬೆಳೆಸುವುದು ಅಧ್ಯಾಪಕರ ಮುಖ್ಯ ಕರ್ತವ್ಯವಾಗಿದೆ ಎಂದು ಅವರು ತಿಳಿಸಿದರು.

ಕಾರ್ಯಕ್ರಮಕ್ಕೆ ಅಧ್ಯಕ್ಷತೆ ವಹಿಸಿದ ಕಾಲೇಜಿನ ಪ್ರಾಚಾರ್ಯ ಮೇಜರ್ ಪ್ರೊ. ಪಿ. ವಿಠ್ಠಲ ರೆಡ್ಡಿ ಅವರು, ಅಧ್ಯಾಪಕರು ಸಮಾಜದ ಕಣ್ಣಿನ ದೀಪವಾಗಿದ್ದು, ಅವರ ವೃತ್ತಿಪರ ಬೆಳವಣಿಗೆಯೇ ಶಿಕ್ಷಣದ ಗುಣಮಟ್ಟವನ್ನು ನಿರ್ಧರಿಸುತ್ತದೆ ಎಂದರು. ಇಂತಹ ಕಾರ್ಯಗಾರದಿಂದ ನಿರ್ದೇಶನಾ ಕಾರ್ಯಕ್ರಮಗಳು ಅಧ್ಯಾಪಕರಿಗೆ ಹೊಸ ಉತ್ಸಾಹ ಮತ್ತು ದೃಷ್ಟಿಕೋನವನ್ನು ನೀಡುತ್ತವೆ ಎಂದು ಅಭಿಪ್ರಾಯಪಟ್ಟರು.

ಡಾ. ಶ್ಯಾಮಲಾ ವಿ. ದತ್ತ, ಪ್ರಾಚಾರ್ಯರು, ಗುರುನಾನಕ್ ಫಸ್ಟ್ ಗ್ರೇಡ್ ಕಾಲೇಜು ಹಾಗೂ ಅಧ್ಯಕ್ಷರು, ಬೀದರ್ ಬೋಟಾನಿಕಲ್ ಸೊಸೈಟಿ ಅವರು ಪರಿಚಯಾತ್ಮಕ ಭಾಷಣ ಮಾಡಿದರು. ಅವರು, ಸಸ್ಯಶಾಸ್ತ್ರ ಕೇವಲ ಪಾಠ ಪುಸ್ತಕದ ವಿಷಯವಲ್ಲದೆ, ಜೀವನದ ಪ್ರತಿಯೊಂದು ಅಂಗದಲ್ಲಿಯೂ ಅವಶ್ಯಕತೆಯಿರುವ ವಿಷಯವಾಗಿದೆ ಎಂದು ಹೇಳಿದರು. ಇಂತಹ ವೇದಿಕೆಗಳು ಅಧ್ಯಾಪಕರಿಗೆ ಪರಸ್ಪರ ಅನುಭವ ಹಂಚಿಕೊಳ್ಳಲು ಅವಕಾಶ ನೀಡುತ್ತವೆ ಎಂದರು.

ಕಾರ್ಯಕ್ರಮದ ಸಂಯೋಜಕರಾದ ಡಾ. ಸೂರ್ಯವಂಶಿ ಪೂಜಾ ಸಹಾಯಕ ಪ್ರಾಧ್ಯಾಪಕಿ ಹಾಗೂ ಸಸ್ಯಶಾಸ್ತ್ರ ವಿಭಾಗದ ಮುಖ್ಯಸ್ಥೆ, ಬಿ.ವಿ.ಬಿ. ಕಾಲೇಜು, ಬೀದರ್ ಹಾಗೂ ಕಾರ್ಯದರ್ಶಿ, ಬೀದರ್ ಬೋಟಾನಿಕಲ್ ಸೊಸೈಟಿ ಕಾರ್ಯನಿರ್ವಹಿಸಿದರು. ಕಾರ್ಯಕ್ರಮದ ಸ್ವಾಗತವನ್ನು ಸಸ್ಯಶಾಸ್ತ್ರ ವಿಭಾಗದ ಉಪನ್ಯಾಸಕರಾದ ಶ್ರೀಮತಿ ಪೃಥ್ವಿ ಸಾಲಿಮಠ ಸ್ವಾಗತಿಸಿದರೆ, ಧನ್ಯವಾದಗಳನ್ನು ಮಿಸ್ಟರ್ ರೋಹಿತ್ ಜಿರೋಬೇ, ಉಪನ್ಯಾಸಕರು, ಕರ್ನಾಟಕ ಕಾಲೇಜು ಹಾಗೂ ಖಜಾಂಚಿ, ಬೀದರ್ ಬೋಟಾನಿಕಲ್ ಸೊಸೈಟಿ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲೆಯ ವಿವಿಧ ಕಾಲೇಜುಗಳ ಅನೇಕ ಸಸ್ಯಶಾಸ್ತ್ರ ಅಧ್ಯಾಪಕರು ಪಾಲ್ಗೊಂಡು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು. ಅಧ್ಯಾಪಕರ ಬೋಧನಾ ಕೌಶಲ್ಯ ವೃದ್ಧಿ, ವೃತ್ತಿ ಅಭಿವೃದ್ಧಿ ಮತ್ತು ಹೊಸ ಪಾಠ ವಿಧಾನಗಳ ಅರಿವು ಮೂಡಿಸಲು ಇಂತಹ ಕಾರ್ಯಕ್ರಮಗಳು ಮಹತ್ವದ್ದಾಗಿವೆ ಎಂದು ಎಲ್ಲರೂ ಅಭಿಪ್ರಾಯಪಟ್ಟರು

## ಗೊಂದಲ ಬೇಡ: ಲಿಂಗಾಯತ ಬರೆಸಿ




ಮಲ್ಲಮ್ಮ ನುಡಿ ವಾರ್ತೆ

ಬೀದರ. ಸೆ. 24 : ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಲಿಂಗವಂತರು ಯಾವುದೇ ಗೊಂದಲಕ್ಕೆ ಒಳಗಾಗದೆ ಧರ್ಮದ ಕಾಲಂನಲ್ಲಿ ಲಿಂಗಾಯತ ಎಂದೇ ಬರೆಸಬೇಕು ಎಂದು ಲಿಂಗಾಯತ ಮಹಾ ಮಠದ ಪ್ರಭುದೇವ ಸ್ವಾಮೀಜಿ ಹೇಳಿದರು.

ನಗರದ ಬಸವಗಿರಿಯಲ್ಲಿ ಮಂಗಳವಾರ ನಡೆದ ಮರಣವೇ ಮಹಾನವಮಿ ಮತ್ತು ಕಲ್ಯಾಣ ಕ್ರಾಂತಿ ವಿಜಯೋತ್ಸವದ ಉದ್ಘಾಟನಾ ಸಮಾರಂಭದ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

ಧಾರ್ಮಿಕವಾಗಿ ಲಿಂಗಾಯತವು ಸ್ವತಂತ್ರ ಧರ್ಮವಾಗಿದೆ. ಹೀಗಾಗಿ ಧರ್ಮ ಮತ್ತು ಜಾತಿ ಕಾಲಂ ಎರಡರಲ್ಲೂ ಲಿಂಗಾಯತ ನಮೂದಿಸಬೇಕು. ಉಪ ಜಾತಿ ಕಾಲಂನಲ್ಲಿ ತಮ್ಮ ಕಾಯಕ ಅಥವಾ ಉಪ ಜಾತಿಯನ್ನು ಬರೆಸಬೇಕು ಎಂದು ತಿಳಿಸಿದರು.

ಸಮಾಜ ಬಾಂಧವರು ಈಗಲಾದರೂ ಒಂದಾಗಬೇಕು. ಸಮಾಜದ ಸರಿಯಾದ ಸಂಖ್ಯೆ ನಮೂದಿಸಿದರೆ ಮಾತ್ರ ಸಮಾಜದ ಎಲ್ಲ ಸ್ತರಗಳಲ್ಲೂ ಸೂಕ್ತ ಸ್ಥಾನಮಾನ ಲಭಿಸುತ್ತದೆ ಎಂದು ಹೇಳಿದರು.

ಸಮೀಕ್ಷೆಯಲ್ಲಿ ಲಿಂಗಾಯತ ಎಂದು ಬರೆಸುವುದರಿಂದ ಈಗಾಗಲೇ ಪಡೆಯುತ್ತಿರುವ ಮೀಸಲಾತಿಗೆ ಯಾವುದೇ ಧಕ್ಕೆ ಇಲ್ಲ. ಇದನ್ನು ಎಲ್ಲರೂ ಅರಿಯಬೇಕು ಎಂದು ತಿಳಿಸಿದರು.

ಸಮಾಜದ ಗೊಂದಲದ ಫಲವಾಗಿ 2 ಕೋಟಿ ಜನಸಂಖ್ಯೆ ಹೊಂದಿದ್ದರೂ ಲಿಂಗಾಯತರ ಜನಸಂಖ್ಯೆ 50 ಲಕ್ಷ ಎಂದು ಹೇಳಲಾಗುತ್ತಿದೆ. ಇದೊಂದು ಷಡ್ಯಂತ್ರ. ಇದಕ್ಕೆ ಬಲಿಯಾಗಬಾರದೆಂದರೆ ಧರ್ಮದ ಕಾಲಂನಲ್ಲಿ ಲಿಂಗಾಯತ ಬರೆಸುವುದು ಅವಶ್ಯಕ ಎಂದು ಹೇಳಿದರು.

ಲಿಂಗಪೂಜೆ, ಅನುಭಾವಗಳೇ ಶರಣನ ನಿಜವಾದ ಸಂಭ್ರಮ. ಅಂಥ ಸಂಭ್ರಮ ಉಕ್ಕಿಸಲೆಂದೇ ಅಕ್ಕನವರ ಸಂಕಲ್ಪದಂತೆ ಪ್ರತಿ ವರ್ಷ ನವರಾತ್ರಿಗೆ ನವ ಚಿಂತನೆಗಳ ಮಾಲಿಕೆಯ ಮರಣವೇ ಮಹಾನವಮಿ ಹಾಗೂ ಕಲ್ಯಾಣ ಕ್ರಾಂತಿ ವಿಜಯೋತ್ಸವ ಆಚರಿಸಲಾಗುತ್ತಿದೆ ಎಂದು ತಿಳಿಸಿದರು.

ನಮಗಾಗಿ ಪ್ರಾಣ ತ್ಯಾಗ ಮಾಡಿದ ಹರಳಯ್ಯ-ಮಧುವರಸ ಮೊದಲಾದ ಅಸಂಖ್ಯ ಶರಣರನ್ನು ನೆನೆಯುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ಹೇಳಿದರು.

ಬಸವಾದಿ ಶರಣರ ತತ್ವಗಳಿಂದ ಮಾತ್ರ ಜಗತ್ತು ಮಾನವೀಯತೆಯಿಂದ ಬೆಳಗಲು ಸಾಧ್ಯ ಎಂದು ವಿಶೇಷ ಉಪನ್ಯಾಸ ನೀಡಿದ ಶಿಕ್ಷಕ ಡಾ. ಶಿವಲಿಂಗ ಹೇಡೆ ತಿಳಿಸಿದರು.

ಮರಣವೇ ಮಹಾನವಮಿ ಎಂಬುದು ಶರಣರ ಮಹಾ ವಾಕ್ಯ. ತತ್ವ ಉಳಿಸಿ ಬೆಳೆಸಲು ಪ್ರಾಣ ತ್ಯಾಗಕ್ಕೂ ಹಿಂಜರಿಯಬಾರದೆಂಬುದೇ ಇದರ ಅರ್ಥ. ಬಸವ ಧರ್ಮ ಕೇವಲ ನುಡಿಯ ಧರ್ಮವಲ್ಲ. ನಡೆದು ನುಡಿವ ಧರ್ಮ ಎಂದು ಹೇಳಿದರು.

ಬಸವಣ್ಣನವರು ಬಿದ್ದವರನ್ನು ಎತ್ತಲೆಂದೇ ಕಲ್ಯಾಣ ಕ್ರಾಂತಿಗೈದರು. ಸರ್ವರ ಕಲ್ಯಾಣವೇ ಅವರ ಗುರಿಯಾಗಿತ್ತು ಎಂದು ತಿಳಿಸಿದರು.

ಲಿಂಗಾಯತ ಮಹಾ ಮಠದಿಂದ ಒಂಬತ್ತು ದಿನ ಒಂಬತ್ತು ವಿಷಯಗಳ ಉಪನ್ಯಾಸ ಏರ್ಪಡಿಸಿ ಮರಣವೇ ಮಹಾನವಮಿ ಹಾಗೂ ಕಲ್ಯಾಂತಿ ಕ್ರಾಂತಿ ವಿಜಯೋತ್ಸವ ಅಚರಿಸುತ್ತಿರುವುದು ಶ್ಲಾಘನೀಯ ಎಂದು ಉದ್ಘಾಟನೆ ನೆರವೇರಿಸಿದ ಡಾ. ಕಪಿಲ್ ಜಿ. ಪಾಟೀಲ ಹೇಳಿದರು. ನಿವೃತ್ತ ಎಎಐ ಮಾರುತಿ ಪಾಟೀಲ ಅಧ್ಯಕ್ಷತೆ, ನೀಲಮ್ಮನ ಬಳಗದ ಸಂಧ್ಯಾರಾಣಿ ಮುತ್ತಂಗೆ, ಶೋಭಾ ಡಿಗ್ಗೆ ಸಮ್ಮುಖ ವಹಿಸಿದ್ದರು. ಭಾಲ್ಕಿ ಪುರಸಭೆ ಉಪಾಧ್ಯಕ್ಷ ವಿಜಯಕುಮಾರ ಶರಣಪ್ಪ ರಾಜಭವನ, ಬೀದರ್ ಎಪಿಎಂಸಿ ಮಾಜಿ ಅಧ್ಯಕ್ಷ ಶಾಂತಕುಮಾರ ಪನಸಾಲೆ, ಸಾಹಿತಿ ರಮೇಶ ಮಠಪತಿ ಇದ್ದರು. ಸುಪ್ರೀತ್ ಸೋಮನಾಥ ಪತಂಗೆ ವಚನ ಪಠಣ, ಶ್ಯಾಮಲಾ ಎಲಿ ಹಾಗೂ ಶ್ರೀದೇವಿ ಮಠಪತಿ ವಚನ ಗಾಯನ ಮಾಡಿದರು. ಬಸವ ಚಿಕಲಿಂಗೆ ನಿರೂಪಿಸಿದರು. ಪ್ರವೀಣ್ ಬಿರಾದಾರ ವಂದಿಸಿದರು.

## ಮಲ್ಲಣ್ಣ ದೇವರ ಪಲ್ಲಕ್ಕಿ ಉತ್ಸವ ಅ.2ಕ್ಕೆ

ಮಲ್ಲಮ್ಮ ನುಡಿ ವಾರ್ತೆ



ಬೀದರ. ಸೆ. 24 : ವಿಜಯದಶಮಿ ನಿಮಿತ್ತ ಭಾಲ್ಕಿ ತಾಲ್ಲೂಕಿನ ಖಾನಾಪುರದ ಮಲ್ಲಣ್ಣ ದೇವಸ್ಥಾನದಲ್ಲಿ ಅಕ್ಟೋಬರ್ 2 ರಂದು ಮಲ್ಲಣ್ಣ ದೇವರ ಪಲ್ಲಕ್ಕಿ ಹಾಗೂ ರಥೋತ್ಸವ ಜರುಗಲಿದೆ.

ಅಂದು ರಾತ್ರಿ 11.15ಕ್ಕೆ ರಥವು ಮುಖ್ಯದೇವಸ್ಥಾನದಿಂದ ಹೊರಟು, ಘೃತಮಾರಿ ತುಪ್ಪದ ಮಾಳವ್ವ (ಗುರುತ್ ಮಲ್ಲಮ್ಮ) ದೇವಸ್ಥಾನ, ಮುಖ್ಯಬೀದಿ, ಬೀದರ್- ಭಾಲ್ಕಿ ಮುಖ್ಯರಸ್ತೆ ಮೂಲಕ ಹಾಯ್ದು ಹನುಮಾನ ಮಂದಿರ ತಲುಪುವುದು. ಬಳಿಕ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿವೆ.

ಅ. 3 ರಂದು ಬೆಳಿಗ್ಗೆ 6.30ಕ್ಕೆ ಮಹಾ ಮಂಗಳಾರತಿಯೊಂದಿಗೆ ಉತ್ಸವ ಸಮಾರೋಪಗೊಳ್ಳಲಿದೆ.

ಪಲ್ಲಕ್ಕಿ ಹಾಗೂ ರಥೋತ್ಸವದಲ್ಲಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಮೈಲಾರ ಮಲ್ಲಣ್ಣ ದೇವಸ್ಥಾನದ ಆಡಳಿತಾಧಿಕಾರಿಯಾದ ಬಸವಕಲ್ಯಾಣ ಉಪ ವಿಭಾಗಾಧಿಕಾರಿ ಮುಕುಲ್ ಜೈನ್ ಹಾಗೂ ಕಾರ್ಯನಿರ್ವಹಣಾಧಿಕಾರಿ ಅನಂತರಾವ್ ಕುಲಕರ್ಣಿ ಮನವಿ ಮಾಡಿದ್ದಾರೆ.

# ರಸ್ತೆ ಗುಂಡಿ ಮುಚ್ಚಲು ಒತ್ತಾಯಿಸಿ ವೆಲ್ಫೇರ್ ಪಾರ್ಟಿ ಆಫ್ ಇಂಡಿಯಾ ಪ್ರತಿಭಟನೆ




ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ: ಸೆ.24:ಗುಂಡಿಗಳು ತುಂಬಿರುವುದರಿಂದ ವಾಹನ ಸಂಚಾರಕ್ಕೆ ತೊಂದರೆಯಾಗಿರುವ ನಗರದ ಎಂ.ಜಿ ರಸ್ತೆ ದುರಸ್ಥಿಗೆ ಒತ್ತಾಯಿಸಿ ವೆಲ್ಫೇರ್ ಪಾರ್ಟಿ ಆಫ್ ಇಂಡಿಯಾ ಪಕ್ಷದ ಕಾರ್ಯಕರ್ತರು ಬುಧವಾರ ಪ್ರತಿಭಟನೆ ನಡೆಸಿದರು.

ಕಲಬುರ್ಗಿ ಮಹಾನಗರ ಪಾಲಿಕೆ ಹೆಸರಿನಲ್ಲಿ ಬಂದಿರುವ ಸಾವಿರಾರು ಕೋಟಿ ಹಣ ವ್ಯರ್ಥವಾಗಿದ್ದು ನಗರವನ್ನು ಪ್ರವೇಶಿಸುವ ಮುಖ್ಯರಸ್ತೆಯನ್ನೇ ನಿರ್ಲಕ್ಷಿಸಲಾಗಿದೆ. ಗುಂಡಿಗಳಿಂದ ಅಪಘಾತ ಸಂಭವಿಸಿದರೆ ಪಾಲಿಕೆ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಮಹಾನಗರ ಪಾಲಿಕೆ ವ್ಯಾಪ್ತಿಗೆ ಬರುವ ಎಲ್ಲಾ ವಾರ್ಡಿನ ರಸ್ತೆಗಳಲ್ಲಿ ಬೃಹತ್ ಗಾತ್ರದ ಗುಂಡಿಗಳಿವೆ ಇದನ್ನು ಸಂಪೂರ್ಣವಾಗಿ ಜನಪ್ರತಿನಿಧಿಗಳು ಜವಾಬ್ದಾರಿ ಮರೆತಿದ್ದಾರೆ. ಅಧಿಕಾರಿಗಳು ಜಾಣ ಕುರುಡು ಪ್ರದರ್ಶಿಸುತ್ತಿದ್ದಾರೆ. ಇದರಿಂದಾಗಿ ದಿನನಿತ್ಯ ಓಡಾಡುವವರ ಸಂಕಟ ಹೇಳತೀರದಂತಾಗಿದೆ. ರಸ್ತೆಗಳಲ್ಲಿ ಕಾಣಿಸುತ್ತಿರುವ ದೊಡ್ಡ ದೊಡ್ಡ ಗುಂಡಿಗಳಿಗೆ ಬಿದ್ದು ವಾಹನಗಳು ಹಾಳಾಗುತ್ತಿವೆ. ಕೈಕಾಲುಗಳು ಮುರಿಯುತ್ತಿವೆ ಎಂದು ಅವರು ಹೇಳಿದರು.

ಮಹಾನಗರ ಪಾಲಿಕೆಯ ವ್ಯಾಪ್ತಿಯ ಎಲ್ಲಾ ಗುಂಡಿಗಳು ಹಾಗೂ ರಸ್ತೆ ದುರಸ್ತಿಗೆ ಜಿಲ್ಲಾ ಉಸ್ತುವಾರಿ ಸಚಿವರು, ಸಂಸದರು, ನಗರದ ಇಬ್ಬರು ಶಾಸಕರು, ಮಹಾನಗರ ಪಾಲಿಕೆ ಮುಂದಾಗಬೇಕು ಇಲ್ಲವಾದರೆ ವೆಲ್ಫೇರ್ ಪಾರ್ಟಿ ಆಫ್ ಇಂಡಿಯಾ ಪಕ್ಷದ ವತಿಯಿಂದ ಮುಂದಿನ ದಿನಗಳಲ್ಲಿ ತೀವ್ರವಾದ ಹೋರಾಟವನ್ನು ನಡೆಸಲಾಗುವುದು ಈ ಮೂಲಕ ಎಚ್ಚರಿಸುತ್ತೇವೆ. ಈ ಸಂದರ್ಭದಲ್ಲಿ ರಾಜ್ಯ ಕಾರ್ಯದರ್ಶಿ ಮೊಬಿನ್ ಅಹಮ್ಮದ್, ಜಿಲ್ಲಾ ಅಧ್ಯಕ್ಷ, ಸಲೀಮ್ ಅಹಮ್ಮದ್ ಚಿತಾಪುರಿ, ಸಲೀಮ್ ಸಗರಿ, ಅಬ್ದುಲ್ ಬಾರಿ ತಾಜುದ್ದೀನ್ ಸೇರಿದಂತೆ ಇತರರು ಇದ್ದರು.

## ಮಹಾನಗರ ಪಾಲಿಕೆ ಸ್ಥಾಯಿಸಮಿತಿ ಅಧ್ಯಕ್ಷರ ಆಯ್ಕೆ




ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಸೆ.24: ನಗರದ ಇಂದಿರಾ ಸ್ಮಾರಕಭವನದಲ್ಲಿ (ಟೌನ್ ಹಾಲ್) ಇ ಮಹಾನಗರ ಪಾಲಿಕೆಯ ವಿವಿಧ ಸ್ಥಾಯಿ ಸಮಿತಿಗೆ ಅಧ್ಯಕ್ಷರ ಆಯ್ಕೆ ನಡೆಯಿತು.

ಕಲಬುರಗಿ ಮಹಾನಗರಪಾಲಿಕೆ ಕರ, ಹಣಕಾಸು ಹಾಗೂ ಮೇಲ್ಮನವಿ ಸ್ಥಾಯಿಸಮಿತಿ ಅಧ್ಯಕ್ಷರಾಗಿ ಅನುಪಮಾ ರಮೇಶ ಕಮಕನೂರ, ಸಾರ್ವಜನಿಕ ಹಾಗೂ ಆರೋಗ್ಯ, ಶಿಕ್ಷಣ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ಮೊಹಮ್ಮದ ಅಯಜಖಾನ, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿಸಮಿತಿ ಅಧ್ಯಕ್ಷರಾಗಿ ಶೇಖ ಹುಸೇನ್ ಮತ್ತು ಲೆಕ್ಕ ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ಪುತಲಿಬೇಗಂ ಅವರು ಆಯ್ಕೆಯಾದರು.

ಆಯ್ಕೆಯಾದ ವಿವಿಧ ಸ್ಥಾಯಿ ಸಮಿತಿಯ ಅಧ್ಯಕ್ಷರನ್ನು ಮಹಾಪೌರರಾದ ವರ್ಷಾ ರಾಜೀವ ಜಾನೆ, ಉಪ ಮಹಾಪೌರರಾದ ತೃಪ್ತಿ ಎಸ್. ಲಾಖೆ, ಪಾಲಿಕೆ ಆಯುಕ್ತ ಶಿಂಧೆ ಅವಿನಾಶ್

ಸಂಜೀವನ್, ಕುಡಾ ಅಧ್ಯಕ್ಷ ಮಜರ್ ಅಲಂಖಾನ್, ಅರ್ಜುನ ಜಮಾದಾರ, ಲಿಂಗಣ್ಣ ಜಮಾದಾರ, ಅಂಬು ಡಿಗ್ಗಿ, ಪ್ರಕಾಶ ಕಮಕನೂರ, ಸಂದೇಶ ಕಮಕನೂರ, ಸುರೇಶ ಕಮಕನೂರ, ಶಿವಾನಂದ ಹೊನಗುಂಟಿ, ಈರಣ್ಣ ಪಾಟೀಲ ಝಳಕಿ, ಸೈಯದ್ ಅಹಮದ್, ಅಜಮಲ್ ಗೋಲಾ, ಖುಸ್ರೋ ಜಾಗೀರದಾರ, ಶಫೀಕ್ ಹುಂಡೇಕಾರ್ ಮೊದಲಾದವರು ಅಭಿನಂದಿಸಿದರು.

## ಭಾವನೆಗಳಿಗೆ ಅಕ್ಷರ ರೂಪ ನೀಡುವುದೇ ಕವಿತೆ:ತಗಡೂರು



ಮೈಸೂರು:ಸೆ.24: ಕವಿತೆ ಯಾರನ್ನೂ ಹೇಳಿಕೇಳಿ ಹುಟ್ಟುವುದಿಲ್ಲ. ಅನುಭವಗಳ ಧಾರೆಗೆ ಪದ ಪುಂಜಗಳ ಮೆರಗು ನೀಡಿ ಸೃಷ್ಟಿಸುವುದೇ ಕವಿತೆ ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷರು ಮತ್ತು ಕವಿ ಶಿವಾನಂದ ತಗಡೂರು ಅಭಿಪ್ರಾಯಪಟ್ಟರು.

ದಸರಾ ಪ್ರಯುಕ್ತ ಏರ್ಪಡಿಸಿದ್ದ ಕವಿಗೋಷ್ಠಿ(ಪ್ರಚುರ ಕವಿಗೋಷ್ಠಿ) ಯನ್ನು ಉದ್ಘಾಟಿಸಿ ಮಾತನಾಡಿ, ಮನದೊಳಗಿನ ಭಾವನೆಗಳಿಗೆ, ಕಲ್ಪನಾ ಲಹರಿಗೆ, ಭಾವನೆಗಳ ತುಡಿತಕ್ಕೆ ಅಕ್ಷರ ರೂಪ ನೀಡುವ ಕುಸರಿ ಕೆಲಸದಲ್ಲಿಯೇ ಕವಿತೆ ಅರಳುತ್ತದೆ ಎಂದರು.

ಮೈಸೂರು ಅಂದ ತಕ್ಷಣವೇ ನೆನಪಾಗುವುದು ದಿಬ್ಬಣ, ದಸರಾ ಮಹೋತ್ಸವ, ಚಾಮುಂಡಿ ಬೆಟ್ಟ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆಡಳಿತ ನಡೆಸಿದ ಮಹಾರಾಜರು ನೆನಪಾಗುತ್ತದೆ. ತಂತ್ರಜ್ಞಾನದಿಂದ ಹಿಡಿದು ಜಗತ್ತಿನ ಉದ್ದಗಲಕ್ಕೂ ಮೈಸೂರು ನಗರಿ ತನ್ನ ಕಂಪನ್ನು ಪಸರಿಸಿದೆ. ಕನ್ನಡ ಸಾರಸ್ವತ ಲೋಕಕ್ಕೆ ಕೊಡುಗೆ ನೀಡಿದವರೇ ಈ ನೆಲದಲ್ಲಿ ಇದ್ದವರೇ ಹೆಚ್ಚು ಎಂದರು.

ದಸರೆಯ ಸಂದರ್ಭದಲ್ಲಿ ಧ್ವನಿ ಇಲ್ಲದವರನ್ನು, ಅಶಕ್ತ ಸಮುದಾಯ ಸೇರಿದಂತೆ ಎಲ್ಲ ವಿಭಾಗಗಳಿಂದ ಕವಿಗಳನ್ನು ಒಂದೆಡೆ ಸೇರಿಸಿರುವುದು ವಿಶೇಷ. ಎಲ್ಲರನ್ನೂ ವೇದಿಕೆಗೆ ತರುವ ಸಮಗ್ರ ಯೋಚನೆಯಿಂದ ಕವಿಗೋಷ್ಠಿಯನ್ನು ರೂಪಿಸಿರುವುದು ಅಭಿನಂದನೀಯ ಎಂದರು.

ಕವಿತೆ ಹುಟ್ಟುವುದೇ ವಿಭಿನ್ನ. ಅನುಭವದ ಸಾರದಿಂದ ಹುಟ್ಟಲಿದೆ. ಅನುಭವಗಳ ಧಾರೆಗೆ ಪದ ಪುಂಜಗಳ ಮೆರಗು ನೀಡಿ ಸೃಷ್ಟಿಯಾಗುವುದಾಗಿದೆ. ಮನದೊಳಗಿನ ಭಾವನೆಗಳಿಗೆ ರೂಪ ಕೊಡುವುದು ಎಷ್ಟು ಮುಖ್ಯವೋ, ಭಾಷೆಯ ಮೇಲೆ ಹಿಡಿತ ಇಟ್ಟುಕೊಳ್ಳುವುದು ಅಷ್ಟೇ ಮುಖ್ಯ ಎಂದು ಹೇಳಿದರು.

ಮನಸ್ಸಿನ ತುಡಿತಗಳು, ಬೇಗುದಿಗಳನ್ನು ಕೆರಳಿಸು ಮತ್ತು ಅರಳಿಸುವ ಸಾಲುಗಳಿದ್ದರೆ ಅದು ಕವಿತೆ. ಇತಿಹಾಸದ ಕಾಲಘಟ್ಟದಲ್ಲಿ ಹೋಗಿ ವಿಶ್ಲೇಷಣೆ ಮಾಡುವುದೇ ಕವಿತೆ. ಕಲ್ಪನಾ ಲಹರಿಯಲ್ಲಿ ವಿಹರಿಸುವುದು ಕವಿತೆ. ನೋವಿನ ಅಭಿವ್ಯಕ್ತದಲ್ಲಿ ಮೂಡಿಬರುವ ಸಾಲುಗಳು ಕವಿತೆಗಳಾಗುತ್ತವೆ ಎಂದರು.

ಖ್ಯಾತ ಕವಿ ಹೆಚ್.ಎಸ್. ವೆಂಕಟೇಶ್‌ಮೂರ್ತಿ ಅವರು ಸಾವಿನ ಹತ್ತಿರದಲ್ಲಿದ್ದಾಗ ಅವರೇ ಬರೆದಿದ್ದ ಕವಿತೆಯನ್ನು ಹಾಡಿಸಿದ್ದರು. ಆ ಕ್ಷಣ ಆ ಕವಿತೆಗಳು ಮನಸ್ಸಿಗೆ ಮುದ ನೀಡುತ್ತವೆ. ಪ್ರತಿ ಕವಿಗಳಿಗೂ ತಾವೇ ಸೃಷ್ಟಿಸಿದ ಕವನದ ಸಾಲುಗಳನ್ನು ಗುನುಗುವುದು ಅಭಿಲಾಷೆ ಇದ್ದೇ ಇರುತ್ತದೆ ಎಂದರು.

ಕವಿಗಳ ಬರವಣಿಗೆಯಲ್ಲಿ ಹಮ್ಮು ಗಿಮ್ಮು ಇರಲ್ಲ. ನೋವಿಗೆ ಮುಲಾಮು ಆಗುವ, ಕಷ್ಟಕ್ಕೆ ಕಿವಿಯಾಗುವ, ಕಣ್ಣೀರಿಗೆ ದನಿಯಾಗುವ ಶಕ್ತಿ ಇದೆ. ಎಲ್ಲ ಎಲ್ಲೆಗಳನ್ನು ಮೀರಿ ಎಲ್ಲಾ ಲೋಕಕ್ಕೂ ಕವಿ ಸಂಚರಿಸುತ್ತಾನೆ. ಅದು ಕವಿತೆ ಮತ್ತು ಕವಿಗೆ ಇರುವ ಶಕ್ತಿ ಎಂದರು.

ದಸರಾ ಕವಿಗೋಷ್ಠಿಗೆ ತುಂಬಾ ಜನ ಕವಿಗಳು ತಮ್ಮ ಕವನಗಳನ್ನು ಪ್ರಸ್ತುತ ಪಡಿಸಲು ಬಂದಿದ್ದೀರಿ. ಎಲ್ಲರ ಹೃದಯಗಳಲ್ಲಿ ಕವಿತೆಗಳು ಇರುತ್ತವೆ. ಆದರೆ, ಅದಕ್ಕೆ ಸ್ವರೂಪ ಕೊಡುವುದು ಮುಖ್ಯ. ಈ ನಿಟ್ಟಿನಲ್ಲಿ ನಿಮ್ಮ ಪ್ರಯತ್ನ ನಿರಂತರವಾಗಿರಲಿ ಎಂದರು.

ಬಳಿಕ ಗಾಜಾ ಗಡಿಯಲ್ಲಿ ನಿಂತು ತಾವೇ ರಚಿಸಿದ 'ನೆತ್ತರು' ಮತ್ತು ಬಾನು ಮುಷ್ತಾಕ್ ಬಗ್ಗೆ ಬರೆದಿರುವ ಕವನವನ್ನು ವಾಚಿಸಿದರು. ರಾಜ್ಯದ ನಾನಾ ಭಾಗದಿಂದ ಆಗಮಿಸಿದ್ದ 43 ಮಂದಿ ಕವಿಗಳು ತಮ್ಮ ಕವನಗಳನ್ನು ವಾಚಿಸಿದರು.

ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾದ ಲೋಲಾಕ್ಷಿ ಅವರು ಮಾತನಾಡಿ, ಈ ಬಾರಿ ವಿಭಿನ್ನ ನೆಲೆಯಿಂದ ಕವಿಗಳನ್ನು ಆಯ್ಕೆ ಮಾಡಿ ಕವಿಗೋಷ್ಠಿಯನ್ನು ಸಂಘಟಿಸಲಾಗಿದೆ ಎಂದು ಹೇಳಿದರು.

ಕವಯತ್ರಿ ಡಾ.ಸುಕನ್ಯ ಮಾರುತಿ ಅವರು ಅಧ್ಯಕ್ಷತೆ ವಹಿಸಿದ್ದರು. ಲೇಖಕ ರಾಜೇಂದ್ರ ಪ್ರಸಾದ್, ದಸರಾ ಕವಿಗೋಷ್ಠಿ ಅಧ್ಯಕ್ಷ ಸುರೇಶ್, ಉಪಾಧ್ಯಕ್ಷ ಡಾ.ಮಹೇಶ್ ದಳಪತಿ, ಮರಿದೇವಯ್ಯ, ಉಪಸಮಿತಿ ಉಪ ವಿಶೇಷಾಧಿಕಾರಿ ಸೋಮಶೇಖರ್, ಕಾರ್ಯದರ್ಶಿಗಳಾದ ಚೇತನ್ ಬಾಬು, ರಾಘವೇಂದ್ರ ಮತ್ತಿತರರಿದ್ದರು.

## ಮಾನವ ಸಂಪತ್ತಿನ ನಿರ್ಮಾತೃ ಶಿಕ್ಷಕ : ನಾಗನಾಥ ಚಿಟ್ಮೆ




ಔರಾದ(ಬಾ) :ಸೆ.24: ಪಟ್ಟಣದ ನಾಲಂದಾ ಪ್ರೌಢ ಶಾಲೆಯಲ್ಲಿ ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಯಿತು.

ಮುಖ್ಯ ಅತಿಥಿ ನಾಗನಾಥ ಚಿಟ್ಮೆ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ರವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದ ಬಳಿಕ ಮಕ್ಕಳನ್ನುದ್ದೇಶಿಸಿ ವಿದ್ಯಾರ್ಥಿ ಎಂಬ ಕಲ್ಲನ್ನು ಅಚ್ಚುಕಟ್ಟಾಗಿ ಕೆತ್ತಿ, ಅದಕ್ಕೊಂದು ರೂಪ ಕೊಟ್ಟು ವ್ಯಕ್ತಿತ್ವ ನೀಡುವ ಶಿಲ್ಪಿಯೇ ಶಿಕ್ಷಕ ಎಂದರು. ಶಿಕ್ಷಕರು ನಮ್ಮ ಜೀವನದ ಮಾರ್ಗದರ್ಶಿಗಳು, ನಮ್ಮಲ್ಲಿ ಉತ್ತಮ ಗುಣಗಳನ್ನು ತುಂಬಿ, ಸಮಾಜದ ಉತ್ತಮ ಪ್ರಜೆಗಳಾಗಿ ಬೆಳೆಯಲು ಸಹಾಯ ಮಾಡಿ, ಮಾನವ ಸಂಪತ್ತಿನ ನಿರ್ಮಾಣದ ಗುರುತರವಾದ ಹೊಣೆ ಗುರುವಿನ ಮೇಲಿದೆ ಎಂದು ತಿಳಿಸಿದರು. ಅವರು ಕೇವಲ ಪಾಠಗಳನ್ನಲ್ಲದೆ, ಜೀವನದ ಅತ್ಯಮೂಲ್ಯ ಮೌಲ್ಯಗಳನ್ನೂ ಕಲಿಸುತ್ತಾರೆ. ನಮ್ಮ ಸಾಮರ್ಥ್ಯವನ್ನು ಗುರುತಿಸಿ, ಪ್ರೋತ್ಸಾಹಿಸಿ, ನಮ್ಮ ಭವಿಷ್ಯವನ್ನು ರೂಪಿಸುವಲ್ಲಿ ಶಿಕ್ಷಕ ಪ್ರಮುಖ ಪಾತ್ರ ವಹಿಸುತ್ತಾರೆ ಹಾಗಾಗಿ ತಾವೆಲ್ಲರೂ ಗುರುಗಳ ಮಾತನ್ನು ಚಾಚುತಪ್ಪದೇ ಪಾಲಿಸುವುದರೊಂದಿಗೆ ಪ್ರತಿ ಶಿಕ್ಷಕರು ತಮ್ಮ ವಿದ್ಯಾರ್ಥಿಗಳ ಭವಿಷ್ಯವನ್ನು ಉತ್ತಮಗೊಳಿಸಲು ಹಗಲಿರುಳೆನ್ನದೆ ಶ್ರಮಿಸುತ್ತಾರೆ. ಅವರ ಶ್ರಮ, ಸಮರ್ಪಣೆ ಮತ್ತು ಮಾರ್ಗದರ್ಶನಕ್ಕೆ ಕೃತಜ್ಞತೆ ಸಲ್ಲಿಸುವಂತಹವರು ನೀವಾಗಬೇಕು ಎಂದು ಹೇಳುತ್ತಾ ಶಿಕ್ಷಕರಿಗೆ ಧನ್ಯವಾದ ಹೇಳಲು ಈ ಒಂದು ದಿನ ಮಾತ್ರವಲ್ಲ, ಅವರ ಸಲಹೆಯನ್ನು ವರ್ಷಪೂರ್ತಿ ಗೌರವಿಸಿ, ನೀವೆಂದಿಗೂ ಗುರುಗಳ ಋಣ ತೀರಿಸಲಾಗದು ಎಂದು ನುಡಿದರು.

ಪ್ರೌಢ ಶಾಲೆಯ ಪ್ರಭಾರಿ ಮುಖ್ಯಗುರು ದಿಲೀಪಕುಮಾರ ಮೇತ್ರೆ ಮಾತನಾಡಿ ಶಿಕ್ಷಕರ ಪ್ರಭಾವ ಶಾಲೆಯ ಗಡಿಗಳನ್ನು ಮೀರಿ, ವಿದ್ಯಾರ್ಥಿಗಳ ಜೀವನದ ಉದ್ದಕ್ಕೂ ಅವರೊಂದಿಗೆ ಇರುತ್ತದೆ. ಶಿಕ್ಷಕರು ತಮ್ಮ ಶಿಷ್ಯರನ್ನು ಮೇಲಕ್ಕೆತ್ತಲು ಮತ್ತು ಸಾಧನೆ ಮಾಡಲು ಸ್ಫೂರ್ತಿ ತುಂಬುತ್ತಾರೆ, ಮಕ್ಕಳ ಭವಿಷ್ಯವನ್ನು ಉಜ್ವಲಗೊಳಿಸುವಲ್ಲಿ ಸಮರ್ಥ ನಾಯಕತ್ವವನ್ನು ನಿರ್ವಹಿಸುತ್ತಾರೆ ಎಂದು ವಿದ್ಯಾರ್ಥಿಗಳಿಗೆ ಮಾರ್ಗದರ್ಶಿಸಿದರು.

ಈ ಸಂದರ್ಭದಲ್ಲಿ ಕಾಲೇಜಿನ ಪ್ರಭಾರಿ ಪ್ರಾಂಶುಪಾಲ ನರಸಿಂಗರಾವ ಬೆಲ್ದಾರ್, ಅತಿಥಿ, ನಿವೃತ್ತ ಗ್ರಂಥಪಾಲಕ ಸತ್ಯವಾನ್ ಹಾಗೂ ಪ್ರೌಢ ಶಾಲೆಯ ಸಹಶಿಕ್ಷಕರಾದ ಮಲ್ಲಿಕಾರ್ಜುನ ಕೋಟೆ, ಪರಮೇಶ್ವರ.ಬಿ.ಬಿರಾದಾರ, ಸಿದ್ಧಾರ್ಥ.ಜೆ.ಕಾಂಬಳೆ, ಅಸ್ಪಾಕಮಿಯ್ಯಾ. ಎಸ್.ಬೇಗ್, ಬಾಲಾಜಿ ರಣವೀರಕರ್, ಸಹಶಿಕ್ಷಕಿಯರಾದ ಪ್ರೀಯಾ. ಎಮ್.ಬಿರಾದಾರ, ಜ್ಯೋತಿ.ಡಿ.ಘೂಳೆ, ಮುಂಡೆ ಜ್ಞಾನೇಶ್ವರಿ.ಎಸ್ ಮತ್ತು ಕಾಲೇಜಿನ ಉಪನ್ಯಾಸಕರು ಸೇರಿದಂತೆ ಬೋಧಕೇತರ ಸಿಬ್ಬಂಧಿ ವರ್ಗದವರು ಉಪಸ್ಥಿತರಿದ್ದರು. ಕುಮಾರಿ ಸಂಜನಾ ಸ್ವಾಗತಿಸಿದರೆ, ಕುಮಾರಿ ನಂದಿನಿ ವಂದಿಸಿದರು. ಮಕ್ಕಳು ಹಾಜರಿದ್ದರು.

## ಮಲಕಾಪಲ್ಲಿಯಲ್ಲಿ ಹಿರಿಯ ಪ್ರಾಥಮಿಕ ಶಾಲೆ ಕಟ್ಟಡ ಉದ್ಘಾಟಿಸಿದ ಸಚಿವ ಡಾ. ಪಾಟೀಲ



ಸೇಡಂ. ಸೆ. 24. ತಾಲೂಕಿನ ಮಲ್ಕಾಪಲ್ಲಿ ಗ್ರಾಮದಲ್ಲಿ 3.11 ಕೋಟಿ ರೂಪಾಯಿ ಅನುದಾನದಲ್ಲಿ ನಿರ್ಮಿಸಲಾಗಿರುವ ಹಿರಿಯ ಪ್ರಾಥಮಿಕ ಶಾಲೆಯ 08 ಕೋಣೆಗಳು, ಕಾಂಪೌಂಡ ಶೌಚಾಲಯ ಕಟ್ಟಡವನ್ನು ಸಚಿವರಾದ ಡಾ.ಶರಣಪ್ರಕಾಶ ಪಾಟೀಲರು ಉದ್ಘಾಟಿಸಿ ಮಾತನಾಡಿ.

ಶಾಲೆಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಒದಗಿಸಲಾಗಿದೆ. ಕೆಕೆಆರ್‌ಡಿಬಿಯ ಅಕ್ಷರ ಆವಿಷ್ಕಾರ ಯೋಜನೆ ಮೂಲಕ ಶೈಕ್ಷಣಿಕ ಪ್ರಗತಿಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಗ್ರಾಮೀಣ ಭಾಗದಲ್ಲಿ ಶೈಕ್ಷಣಿಕ ಮಟ್ಟ ಹೆಚ್ಚಿಸಲು ಮತ್ತು ಸರ್ಕಾರಿ ಶಾಲೆಗಳನ್ನು ಅತ್ಯುತ್ತಮ ಶಾಲೆಗಳನ್ನಾಗಿಸಲು ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ.

ಎಐಸಿಸಿ ಅಧ್ಯಕ್ಷರು ಮತ್ತು ಹಿರಿಯರಾದ ಶ್ರೀ ಮಲ್ಲಿಕಾರ್ಜುನ ಖರ್ಗೆ ಅವರ ಪರಿಶ್ರಮದ ಫಲವಾದ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಮೂಲಕ ಈ ಭಾಗದ ಅನೇಕ ಬಡ ಮಕ್ಕಳಿಗೆ ಶಿಕ್ಷಣ, ಉದ್ಯೋಗ ದೊರಕುವಂತಾಗಿದೆ ಎಂದು ಹೇಳಿದರು

ಈ ಕಾರ್ಯಕ್ರಮದಲ್ಲಿ ಮಲ್ಕಾಪಲ್ಲಿ ಗ್ರಾಮದ ಹಿರಿಯ ಮುಖಂಡರು, ಶಿಕ್ಷಣ ಇಲಾಖೆ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಮತ್ತು ಪಕ್ಷದ ಮುಖಂಡರು ಇನ್ನಿತರರು ಉಪಸ್ಥಿತರಿದ್ದರು.

## ಲಿಂಗತ್ವ ಅಲ್ಪಸಂಖ್ಯಾತರ ಮೂಲ ಹಂತದ ಸಮೀಕ್ಷೆ, ಮಾಜಿ ದೇವದಾಸಿಯರ ಮರು ಸಮೀಕ್ಷೆಗೆ ಸೂಚನೆ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ಸೆಪ್ಟೆಂಬರ್ 24, : ಯಾದಗಿರಿ ಜಿಲ್ಲೆಯಾದ್ಯಂತ ಲಿಂಗತ್ವಅಲ್ಪಸಂಖ್ಯಾತರ ಮೂಲ ಹಂತದ ಸಮೀಕ್ಷೆ ಹಾಗೂ ಮಾಜಿ ದೇವದಾಸಿಯರ ಮರು ಸಮೀಕ್ಷೆಯನ್ನು 2025ರ ಸೆಪ್ಟೆಂಬರ್ 15 ರಂದು ಆರಂಭಿಸಲಾಗಿದೆ ಎಂದು ಯಾದಗಿರಿ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರು ತಿಪ್ಪಣ್ಣ ಸಿರಸಗಿ ಅವರು ತಿಳಿಸಿದ್ದಾರೆ.

ಲಿಂಗತ್ವ ಅಲ್ಪಸಂಖ್ಯಾತರ ಮೂಲ ಹಂತದ ಸಮೀಕ್ಷೆ ಹಾಗೂ ಮಾಜಿ ದೇವದಾಸಿಯರ ಮರು ಸಮೀಕ್ಷೆ ಕಾರ್ಯಗಳು ಜಿಲ್ಲೆಯಲ್ಲಿ ಈ ಸಮೀಕ್ಷೆಗಳು ಟ್ರಾನ್ಸ್‌ಜೆಂಡರ್ ಸಮುದಾಯದ ಜನರಿಗೆ ಹಾಗೂ ಮಾಜಿ ದೇವದಾಸಿ ಮಹಿಳೆಯರಿಗೆ ಅವರ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸ್ಥಿತಿಗತಿ ಕುರಿತಂತೆ ನಿಖರ ಮಾಹಿತಿ ಸಂಗ್ರಹಿಸಿ, ಪುನರ್ವಸತಿ ಕಲ್ಪಿಸಲು ಸಮೀಕ್ಷೆ ಕೈಗೊಳ್ಳಲಾಗುತ್ತಿದೆ.

ಸಮೀಕ್ಷೆ ಕಾರ್ಯ ಕೈಗೊಳ್ಳಲು ಮೊಬೈಲ್ ಆ್ಯಪ್ ಮೂಲಕ ಟ್ರಾನ್ಸ್ ಜೆಂಡರ್ಸ್ ಸಮೀಕ್ಷೆಗೆ "KARMANI WebApplication" ಅನ್ನು ಸಿದ್ಧಪಡಿಸಿದ್ದು, ಹಾಗೂ ಮಾಜಿ ದೇವದಾಸಿ ಮಹಿಳೆಯರ ಮರುಸಮೀಕ್ಷೆಗೆ ಸೇವಾ ಸಿಂಧು ಮೂಲಕ "ಮಾಜಿ ದೇವದಾಸಿ ಮಹಿಳೆಯರ ಮರುಸಮೀಕ್ಷೆ web application ಅನ್ನು ಸಿದ್ಧಪಡಿಸಿದ್ದು, ತನ್ಮೂಲಕ ಪ್ರತ್ಯೇಕವಾಗಿ ಎರಡು ಸಮೀಕ್ಷೆಗಳನ್ನು ಕೈಗೊಳ್ಳಲಾಗುತ್ತದೆ, ಎಲ್ಲಾ ರೀತಿಯ ಮೂಲಭೂತ ಸೌಕರ್ಯಗಳೊಂದಿಗೆ, ಲಿಂಗತ್ವ ಅಲ್ಪಸಂಖ್ಯಾತರ ಮೂಲ ಹಂತದ ಸಮೀಕ್ಷೆಯನ್ನು ಜಿಲ್ಲೆಯ ಎಲ್ಲಾ ತಾಲ್ಲೂಕು ಸರ್ಕಾರಿ ಆಸ್ಪತ್ರೆಗಳು ಮತ್ತು ಜಿಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ನಡೆಸಲಾಗುತ್ತಿದೆ ಹಾಗೂ ಮಾಜಿ ದೇವದಾಸಿ ಮಹಿಳೆಯರ ಮರುಸಮೀಕ್ಷೆಯನ್ನು ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯಲ್ಲಿ ನಡೆಸಲಾಗುತ್ತಿದೆ. ಈ ಸಮೀಕ್ಷೆ ಕಾರ್ಯಗಳು ಟ್ರಾನ್ಸ್‌ಜೆಂಡರ್ ಸಮುದಾಯದ ಜನರಿಗೆ ಹಾಗೂ ಮಾಜಿ ದೇವದಾಸಿ ಮಹಿಳೆಯರಿಗೆ ಮುಂದಿನ ಭವಿಷ್ಯದ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸುದಾರಣೆಗಾಗಿ ಯೋಜನೆಗಳನ್ನು ಜಾರಿಗೆ ತರಲು ಸಹಾಯವಾಗುತ್ತದೆ, ಆದ್ದರಿಂದ ಸಮೀಕ್ಷೆಗಳಿಗೆ ಟ್ರಾನ್ಸ್‌ಜೆಂಡರ್ ಸಮುದಾಯದ ಜನರು ಹಾಗೂ ಮಾಜಿ ದೇವದಾಸಿ ಮಹಿಳೆಯರು ತಮ್ಮ ವಯಕ್ತಿಕ ಸಂಕೋಲೆಗಳನ್ನು ಬದಿಗೊತ್ತಿ ಈ ಸಮೀಕ್ಷೆಗಳಲ್ಲಿ ಹೆಚ್ಚಿನ ರೀತಿಯಲ್ಲಿ ಪಾಲ್ಗೊಂಡು ತಮ್ಮ ವಯಕ್ತಿಕ ಮಾಹಿತಿಯನ್ನು ಸಮೀಕ್ಷೆಗಾರರಿಗೆ ನೀಡಲು ಕೋರಲಾಗಿದೆ. ಸಹಾಯವಾಣಿ ಸಂ.18005992025ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶೇರುದಾರರೇ ಸಂಘದ ಆಧಾರ ಸ್ಥಂಬ: ಬಿರಾದಾರ



ಮಲ್ಲಮ್ಮ ನುಡಿ ವಾರ್ತೆ

ತಾಳಿಕೋಟಿ: ಸಂಘದ ಸದಸ್ಯರು ಸಹಕಾರ ನೀಡಿದರೆ ಮಾತ್ರ ಸಹಕಾರಿ ಸಂಘಗಳು ಬೆಳವಣಿಗೆಯಾಗಲು ಸಾಧ್ಯವಿದೆ. ಸಂಘವು 50 ವರ್ಷಗಳ ಅವಧಿಯಲ್ಲಿ ಎಲ್ಲರ ಸಹಕಾರದಿಂದ ಸಾಕಷ್ಟು ಪ್ರಗತಿಯನ್ನು ಸಾಧಿಸಿದೆ ಎಂದು ಆಡಳಿತ ಮಂಡಳಿಯ ನಿರ್ದೇಶಕ ಶಿವನಗೌಡ ಬಿರಾದಾರ ಹೇಳಿದರು. ದೇವರ ಹಿಪ್ಪರಗಿ ಮತಕ್ಷೇತ್ರದ ಶರಣ ಸೋಮನಾಳ ಗ್ರಾಮದ ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘ ಇದರ 50ನೇ ವಾರ್ಷಿಕ ಮಹಾಸಭೆ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಅವರು ಮಾತನಾಡಿದರು. ಸಂಘವು ತನ್ನ ಸ್ವಂತ ಕಟ್ಟಡವನ್ನು ಹೊಂದಿದ್ದು, ಇದರ ಅಡಿಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಆರಂಭಿಸಲಾಗಿದೆ ಇದರಿಂದ ಬರುವ ಆದಾಯವನ್ನೂ ಸಂಘಕ್ಕೆ ತೆಗೆದುಕೊಳ್ಳಲಾಗುತ್ತಿದೆ, ಭವಿಷ್ಯದಲ್ಲಿ ಇನ್ನೂ ಹಲವಾರು ವ್ಯವಹಾರಗಳನ್ನು ಆರಂಭಿಸಬೇಕಾಗಿದೆ ಆದ್ದರಿಂದ ಸಂಘದ ಸದಸ್ಯರು ಕೇವಲ ಸಾಲಗಳನ್ನು ತೆಗೆದುಕೊಳ್ಳುವುದನ್ನೂ ಯೋಚಿಸದೆ ತಮ್ಮ ಠೇವಣಿಗಳನ್ನೂ ಸಂಘದಲ್ಲಿಯೇ ಇಡಲು ಪ್ರಯತ್ನಿಸಬೇಕು ಎಂದರು. ಬಸವ ಸಮಿತಿ ಯುವ ಮುಖಂಡ ಶಂಕರಗೌಡ ಬಿರಾದಾರ ಅವರು ಮಾತನಾಡಿ ಸಹಕಾರ ಸಂಘಗಳು ಲಾಭದಾಯಕ ಸಂಸ್ಥೆಗಳಾಗಿರದೇ ಸೇವಾ ಸಂಸ್ಥೆಗಳಾಗಿವೆ. ರೈತರ ಕಲ್ಯಾಣ ಇವುಗಳ ಮುಖ್ಯ ಉದ್ದೇಶವಾಗಿದೆ, ರೈತರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲವನ್ನು ಒದಗಿಸಿ ಅವರನ್ನು ಆರ್ಥಿಕವಾಗಿ ಸಬಲರನ್ನಾಗಿ ಮಾಡುವುದಾಗಿದೆ. ಸಹಕಾರಿ ಸಂಘಗಳನ್ನು ರಾಜಕೀಯ ಹಸ್ತಕ್ಷೇಪದಿಂದ ರಕ್ಷಿಸಬೇಕಾಗಿದೆ ಆದಷ್ಟು ಚುನಾವಣೆಗಳು ನಡೆಯದಂತೆ ನೋಡಿಕೊಳ್ಳಬೇಕು ಇದರಿಂದ ಸಂಘಕ್ಕೆ ಅಪಾರ ನಷ್ಟವಾಗುತ್ತದೆ ಈ ಸಂಘವು ತನ್ನ 50 ಸಂವಸ್ತರಗಳನ್ನು ಪೂರೈಸಿರುವುದು ಹೆಮ್ಮೆಯ ವಿಷಯವಾಗಿದೆ ನಾನು ಆಡಳಿತ ಮಂಡಳಿ ನಿರ್ದೇಶಕರಿಗೆ ಸಿಬ್ಬಂದಿ ವರ್ಗ ಹಾಗೂ ಸದಸ್ಯರಿಗೆ ಅಭಿನಂದಿಸುತ್ತೇನೆ ಎಂದರು. ಮುಖ್ಯಕಾರ್ಯನಿರ್ವಹಣಾಧಿಕಾರಿ ಎಸ್.ಎಂ.ದೇಸಾಯಿ ಮಾತನಾಡಿ ಸದಸ್ಯರ ಸಹಕಾರದಿಂದ ಸಂಘ ಅಭಿವೃದ್ಧಿ ಪಥದಲ್ಲಿ ಸಾಗುತ್ತಿದೆ ಸಂಘವು 2100 ಸದಸ್ಯರನ್ನು ಹೊಂದಿದೆ. 85.96 ಲಕ್ಷ ಶೇರು ಬಂಡವಾಳ, 10.38 ಕೋಟಿ ದುಡಿಯುವ ಬಂಡವಾಳ, 7.96 ಕೋಟಿ ಸಾಲಗಳನ್ನು ನೀಡಿದ್ದು ರೂ.6.66 ಲಕ್ಷ ನಿವ್ವಳ ಲಾಭವನ್ನು ಗಳಿಸಿದೆ ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ 2024-25 ನೇ ಸಾಲಿನ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿನಿಯರಾದ ತೇಜಸ್ವಿನಿ ಬಿರಾದಾರ ಹಾಗೂ ಗೌರಮ್ಮ ಕಲಿಕೇರಿ ಇವರನ್ನು ಸಂಘದ ವತಿಯಿಂದ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಸಭೆಯ ಆರಂಭದಲ್ಲಿ ಸಂಘದ ಭೂಧಾನಿಗಳಾದ ದಿವಂಗತ ರಾಮನಗೌಡ ಡಿ.ಪಾಟೀಲ ಇವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಸಂಘದ ಅಧ್ಯಕ್ಷರಾದ ಅಯ್ಯನಗೌಡ ಗು. ಪಾಟೀಲ ಸಭೆಯ ಅಧ್ಯಕ್ಷತೆ ವಹಿಸಿದ್ದರು. ವೇ.ಮೂ.ಬದ್ರಯ್ಯ ಹಿರೇಮಠ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಉಪಾಧ್ಯಕ್ಷ ಈರಣ್ಣ ಮ. ಕಚನೂರ, ನಿರ್ದೇಶಕರಾದ ಚನ್ನಬಸಪ್ಪ ಕಚನೂರ, ಬಸಲಿಂಗಪ್ಪಗೌಡ ಬಿರಾದಾರ, ಮಾಂತಗೌಡ ಪಾಟೀಲ, ಬಾಗಪ್ಪ ಕೊಡೆಕಲ್, ಪ್ರತಿನಿಧಿಗಳಾದ ಬಾಪುಗೌಡ ಧನ್ನೂರ, ಮಲ್ಲಣ್ಣ ಸಾಸನೂರ, ಬಸನಗೌಡ ನಾಡಗೌಡ, ಚಂದ್ರಶೇಖರ ಮಾರನಾಳ, ಕಾಸಪ್ಪ ಮಾದರ, ಹಿರಿಯರಾದ ಮಶಾಕಸಾಬ ವಾಲಿಕಾರ, ಭೀಮನಗೌಡ ಸಾಸನೂರ, ಶಂಕ್ರಪ್ಪ ನಂದ್ಯಾಳ, ಮಲ್ಲಣ್ಣ ಸೌಕಾರ ಗುರುಸಿದ್ದಪ್ಪ ಸಾಸನೂರ, ಸಂಘದ ಸದಸ್ಯರು ಹಾಗೂ ಸಿಬ್ಬಂದಿ ವರ್ಗ ಇದ್ದರು.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ : ಶೀಘ್ರ ಸುಸಜ್ಜಿತವಾದ

## ಕಟ್ಟಡ, ಸಂಪೂರ್ಣ ಗಣಕೀಕರಣ ರಾಜಶೇಖರ ಗೌಡ ಆಡೂರು



ಮಲ್ಲಮ್ಮ ನುಡಿವಾರ್ತೆ

ಕೊಪ್ಪಳ : ಶೀಘ್ರದಲ್ಲಿ ಸುಸಜ್ಜಿತವಾದ ಕಟ್ಟಡ, ಸಂಘದ ವ್ಯವಹಾರವನ್ನು ಸಂಪೂರ್ಣವಾದ ಗಣಕೀಕರಣಗೊಳ್ಳುವುದು ಎಂದು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ರಾಜಶೇಖರಗೌಡ ಆಡೂರ ಹೇಳಿದರು

ಅವರು ನಗರದ ಕೇತೇಶ್ವರ ಕಲ್ಯಾಣ ಮಂಟಪದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 49ನೇ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ ಸಂಘ 1976-77 ರಿಂದ ಇಲ್ಲಿವರೆಗೂ 49 ವಸಂತಗಳನ್ನು ಪೂರೈಸಿ ಸರ್ವಸದಸ್ಯರ ಬಾಳಿಗೆ ಕಣ್ಣಾಗಿ ನಿಂತದೆ ಎಂದು ಹೇಳಲು ನಮಗೆ ಹೆಮ್ಮೆಯೆನಿಸುತ್ತದೆ. ಪ್ರತಿವರ್ಷ ಸಂಘ ಲಾಭದಾಯಕ ಪ್ರಗತಿ ಹೊಂದಿ ಎಲ್ಲ ರೀತಿಯ ಯಶಸ್ಸುಗಳಿಸಿ ಮುನ್ನಡೆಯುತ್ತಿದ್ದು, ಪ್ರಸಕ್ತ ಸಾಲಿಗೆ ಮೂರನೇಯ ಬಾರಿಗೆ ಶೇ.6% ರಷ್ಟು ಡಿವಿಡೆಂಡ್ ಪಾವತಿಸಲು ಕಾರ್ಯಕಾರಿ ಮಂಡಳಿಯವರು ಶಿಫಾರಸ್ಸು ಮಾಡಿರುತ್ತಾರೆ. ಕಾರಣ ಇದು ಅಭಿವೃದ್ಧಿಯ ಸಂಕೇತವಾಗಿದ್ದು, ಸಂಘದ ಸದಸ್ಯರ ಸಂತುಷ್ಟತೆಯೇ ಸಂಘದ ಪ್ರಗತಿಯ ಅಳತೆಗೋಲು ಎಂದು ಭಾವಿಸಿರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಕೊಪ್ಪಳ ಈ ನಿಟ್ಟಿನಲ್ಲಿ ಸಮರ್ಪಕವಾಗಿ ಕಾರ್ಯನಿರ್ವಹಿಸಬೇಕಾದರೆ ಸಂಘದ ಸ್ವಂತ ಬಂಡವಾಳವನ್ನು ಹೆಚ್ಚಿಸಬೇಕಾಗಿದ್ದು, ಎಲ್ಲಾ ಸದಸ್ಯರು ಸಂಘದಲ್ಲಿ ಹೆಚ್ಚಿನ ಶೇರು ಮೊತ್ತ ಮತ್ತು ಠೇವಣಿಗಳನ್ನು ತೊಡಗಿಸಿಕೊಂಡಲ್ಲಿ ಸಂಘದ ಸಂಪನ್ಮೂಲ ಕ್ರೂಢೀಕರಣಗೊಂಡು, ಸಂಘ ಸದೃಢವಾಗಿ ಹೆಚ್ಚಿನ ಪ್ರಮಾಣದಲ್ಲಿ ಸಾಲಗಳನ್ನು ವಿತರಿಸಬಹುದಾಗಿದೆ. 2024-25ನೇ ಸಾಲಿನಲ್ಲಿ ಸಂಘವು ಹಾಕಿಕೊಂಡ ಗುರಿಗಳನ್ನು ಸಾಧಿಸಲು ಸಹಾಯ ಸಹಕಾರ ಅವಶ್ಯವಾಗಿದ್ದು ಸಂಘವು ಮುಂದಿನ ದಿನಗಳಲ್ಲಿ ಸಂಘದ ಎಲ್ಲಾ ಸದಸ್ಯರಿಗೆ ವಿವಿಧ ರೀತಿಯ ಸಾಲ ಸೌಲಭ್ಯಗಳನ್ನು ಒದಗಿಸುವ ಮೂಲಕ ಸಂಘದ ವ್ಯವಹಾರವನ್ನು ಹೆಚ್ಚಿಸುವುದು. ನಮ್ಮ ನಿಮ್ಮೆಲ್ಲರ ಆದ್ಯತೆಯ ಗುರಿಯಾಗುವುದರ ಮೂಲಕ ಸಂಘದ ಬೆಳವಣಿಗೆಗೆ ತಮ್ಮ ಸಲಹೆ ಸೂಚನೆ, ಮಾರ್ಗದರ್ಶನದಿಂದ ಉತ್ತಮ ಕಾರ್ಯನಿರ್ವಹಿಸಲು ಪ್ರೋತ್ಸಾಹಿಸುತ್ತೀರೆಂದು ನಂಬಿರುತ್ತೇನೆ ಎಂದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷ ಅಬ್ದುಲ್ ಲತೀಫ್ ಖತೀಬ್, ನಿರ್ದೇಶಕರಾದ ವಿಶ್ವನಾಥ್ ಅಗಡಿ, ಮುಕ್ಕಣ್ಣ ಹೊಸಗೇರಿ, ಗವಿಸಿದ್ದನಗೌಡ ಅಂಗಡಿ, ದೇವಪ್ಪ ಸೋಂಪುರ, ಶಿವಾನಂದಪ್ಪ ಮೆತ್ತಗಲ್, ಪ್ರಭುಗೌಡ ಈಶ್ವರಗೌಡ, ಅಜೇಯ್ ದೊಡ್ಡಮನಿ, ಬಸವರಾಜ್ ಬಂಡಿ, ಪವಿತ್ರ ಹಿರೇಮಠ್, ರಾಬಿಯಾ ಬೇಗಂ ಆದೋನಿ, ಬ್ಯಾಂಕ್ ಪ್ರತಿನಿಧಿ ಚಂದ್ರಶೇಖರ್ ಪಾಟೀಲ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಆರ್.ವಿ.ಹಿರೇಮಠ್ ಹಾಗೂ ಶೇರುದಾರರು, ಠೇವಣಿದಾರರು ಉಪಸ್ಥಿತರಿದ್ದರು.

## ದೇಶಕ್ಕೆ ರಾಷ್ಟ್ರೀಯ ಸೇವಾ ಯೋಜನೆ ಕೊಡುಗೆ ಅಪಾರವಾದದ್ದು : ಎಸ್ ಬಿ ಕುರಿ.




ಮಲ್ಲಮ್ಮ ನುಡಿವಾರ್ತೆ

ಕೊಪ್ಪಳ : ದೇಶಕ್ಕೆ ರಾಷ್ಟ್ರೀಯ ಸ್ವಯಂಸೇವಕರ ಕೊಡುಗೆ ಅಪಾರವಾದದ್ದು. ಯುವಜನತೆಯಾದ ನೀವು ರಾಷ್ಟ್ರೀಯ ಸೇವಾ ಯೋಜನೆಯ ಮೂಲಕ ನಿಸ್ವಾರ್ಥ ಸೇವೆಯನ್ನು ಸಲ್ಲಿಸಬೇಕು ಎಂದು ಸೇವಾ ದಿನಾಚರಣೆಯ ಕಾರ್ಯಕ್ರಮದಲ್ಲಿ ಎಸ್ ಬಿ ಕುರಿ ಅವರು ಹೇಳಿದರು. ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆಯ ಭಾರತ ರತ್ನ ಶ್ರೀ ಅಟಲ್ ಬಿಹಾರಿ ವಾಜಪೇಯಿ ಕಾನೂನು ಮಹಾವಿದ್ಯಾಲಯದಲ್ಲಿ ಹಮ್ಮಿಕೊಂಡ ರಾಷ್ಟ್ರೀಯ ಸೇವಾ ಯೋಜನೆ ದಿನಾಚರಣೆಯ ಅಂಗವಾಗಿ ಉದ್ಘಾಟಕರಾಗಿ ಆಗಮಿಸಿ ಅವರು ಮಾತನಾಡಿದರು. ರಾಷ್ಟ್ರೀಯ ಸೇವಾ ಯೋಜನೆ ಮಹಾತ್ಮ ಗಾಂಧೀಜಿಯವರ ಜನ್ಮಶತಾಬ್ದಿ ಸವಿನೆನಪಿಗಾಗಿ ಆಚರಿಸಲಾಗುತ್ತಿದೆ.

ಇದು ಮಹಾತ್ಮ ಗಾಂಧೀಜಿಯವರ ಕನಸಿನ ಕೂಸು ಹಾಗೂ ಡಾ. ಬಿ ಆರ್ ಅಂಬೇಡ್ಕರ್ ಅವರ ಮಹತ್ವಾಕಾಂಕ್ಷೆಯ ಯೋಜನೆ ಇದಾಗಿದ್ದು ಸ್ವಯಂಸೇವಕರು ದೇಶಕ್ಕೆ ಏನನ್ನಾದರೂ ಸೇವೆಯನ್ನು ಸಲ್ಲಿಸಬೇಕಾಗಿದ್ದರೆ ಅದು ಇಂತಹ ಮಹಾನ್ ಯೋಜನೆಗಳ ಮೂಲಕ ಸ್ವಯಂ ಸೇವಾಕರಾಗಿ ಸೇರಿ ಒಂದು ನಿಸ್ವಾರ್ಥ ಸೇವೆಯನ್ನು ಸಲ್ಲಿಸುವದು ಮುಖ್ಯವಾಗಿರುತ್ತದೆ. ಮತ್ತು ಸಮಾಜವನ್ನು ಒಂದು ಶಿಸ್ತು ಸಂಯಮ ಮತ್ತು ಸ್ವಚ್ಛತೆಯಲ್ಲಿ ತೊಡಗಿಸಲು ಸಾಧ್ಯವಾಗುತ್ತದೆ ಇದರ ಸದುಪಯೋಗವನ್ನು ಸ್ವಯಂಸೇವಕರಾದ ನೀವು ಹಲವಾರು ರೀತಿಯ ಸಮಾಜಮುಖಿ ಕಾರ್ಯಗಳನ್ನು ಸಮಾಜಕ್ಕೆ ಸಲ್ಲಿಸುವುದು ಮುಖ್ಯವಾಗಿರುತ್ತದೆ ಎಂದು ವಿದ್ಯಾರ್ಥಿಗಳಿಗೆ ಉದ್ಘಾಟಕರಾದ ಎಸ್ ಬಿ ಕುರಿ. ಸಲಹೆ ನೀಡಿದರು.

ಈ ಕಾರ್ಯಕ್ರಮದ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದ ಕಾರ್ಯಕ್ರಮಾಧಿಕಾರಿಗಳಾದ ಬಸವರಾಜ ಎಸ್.ಎಂ. ಮಾತನಾಡಿ ದೇಶದ ಅಭಿವೃದ್ಧಿಯಲ್ಲಿ ಯುವಕರನ್ನು ತೊಡಗಿಸಲು 24 ಸಪ್ಟೆಂಬರ್ 1969 ಮಹಾತ್ಮ ಗಾಂಧೀಜಿಯವರ ಜನ್ಮ ಶತಾಬ್ದಿ ಸವಿನೆನಪಿಗಾಗಿ ಇದನ್ನು ಪರಿಚಯಿಸಲಾಯಿತು. ರಾಷ್ಟ್ರೀಯ ಸೇವಾ ಯೋಜನೆಯಿಂದ ಸ್ವಯಂಸೇವಕರಿಗೆ ಸಾಕಷ್ಟು ಸೌಲಭ್ಯಗಳನ್ನು ನೀಡಲಾಗಿದೆ ರಾಷ್ಟ್ರೀಯ ಯೋಜನೆಯ ಮುಖ್ಯದೇಯೋದ್ದೇಶ ನನಗಲ್ಲ ನಿನಗೆ(ಓಠಣ ಟಜ ಥಣಣ ಥಿಠಣ). ಎಂಬ ಉದ್ದೇಶದೊಂದಿಗೆ ಸ್ವಯಂಸೇವಕರು ಸ್ವಾರ್ಥವಿಲ್ಲದೆ ಸಮಾಜಸೇವೆಯಲ್ಲಿ ತೊಡಗುವುದಕ್ಕೆ ಪ್ರಮುಖವಾಗಿರುವುದು ರಾಷ್ಟ್ರೀಯ ಸೇವಾ ಯೋಜನೆ ಆದ್ದರಿಂದ ಇದು ಸಾಕಷ್ಟು ರೀತಿಯ ಯುವಕರ ಏಳಿಗೆಗಾಗಿ ಅಂದರೆ ಸಾಮಾಜಿಕ ಮೌಲ್ಯಗಳನ್ನು, ನಾಯಕತ್ವ ಗುಣಗಳನ್ನು ಮತ್ತು ಹಲವಾರು ಕೌಶಲ್ಯತೆಗಳನ್ನು ಕೊಡುಗೆಯಾಗಿ ಸ್ವಯಂಸೇವಕರಿಗೆ ನೀಡುತ್ತದೆ. ರಾಷ್ಟ್ರೀಯ ಸೇವಾ ಯೋಜನೆಯ ವತಿಯಿಂದ ರಕ್ತದಾನ ಶಿಬಿರ , ಆರೋಗ್ಯದ ಕಾಳಜಿ, ನೇತ್ರದಾನದ ಕುರಿತು ಜಾಗೃತಿ, ಆರೋಗ್ಯ ತಪಾಸಣೆ, ಸಸಿಗಳನ್ನು ನೆಡುವುದು, ಪರಿಸರ ಸಂರಕ್ಷಣೆ ಮತ್ತು ಹಲವಾರು ವಿವಿಧ ಸಮಾಜಮುಖಿ ಕಾರ್ಯಕ್ರಮಗಳನ್ನು ಮಾಡಲಾಗುತ್ತದೆ ಎಂದರು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಪ್ರಾಚಾರ್ಯರಾದ ಶ್ರೀಮತಿ ಉಷಾ ದೇವಿ ಹಿರೇಮಠ

ಮಾತನಾಡಿ ದೇಶ ಕಾಯುವಲ್ಲಿ ಸೈನಿಕರ ಎಷ್ಟು ಮುಖ್ಯವೋ ಸ್ವಯಂಸೇವಕರಾದ ನೀವು ಸಮಾಜ ಸೇವೆಯಲ್ಲಿ ತೊಡಗುವುದು ಅಷ್ಟೇ ಮುಖ್ಯವಾಗಿರುತ್ತದೆ. ರಾಷ್ಟ್ರೀಯ ಸೇವಾ ಯೋಜನೆ ಯು ಸ್ವಯಂಸೇವಕರಿಗೆ ವೇದಿಕೆಯನ್ನು ಕಲ್ಪಿಸುವಲ್ಲಿ ಸಹಕಾರಿಯಾಗುತ್ತದೆ ಮತ್ತು ವಿದ್ಯಾರ್ಥಿಗಳಿಗೆ ನಾಯಕತ್ವದ ಗುಣಗಳೊಂದಿಗೆ ಕೀಳರಿಮೆಯನ್ನು ಹೋಗಲಾಡಿಸುತ್ತದೆ ಮತ್ತು ಸಮಾಜದಲ್ಲಿ ಯಾವ ರೀತಿ ಬದುಕುವುದಕ್ಕೆ ಸಮಾಜದೊಂದಿಗೆ ಒಂದು ಶಿಸ್ತನ್ನು ಸ್ವಯಂಸೇವಕರಿಗೆ ಕಲಿಸುವುದು ರಾಷ್ಟ್ರೀಯ ಸೇವಾ ಯೋಜನೆ ಮುಖ್ಯ ಉದ್ದೇಶವಾಗಿರುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಉಪನ್ಯಾಸಕರಾದ ಸೋಮಶೇಖರ್ ಯು ರಾಜು ಹಾಗೂ ದಹಿಕ ನಿರ್ದೇಶಕರಾದ ಬಸವರಾಜ ಅಳ್ಳಳ್ಳಿ ಹಾಗೂ ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿ ವಿದ್ಯಾರ್ಥಿನಿಯರು ಹಾಜರಿದ್ದರು. ಕಾರ್ಯಕ್ರಮವನ್ನು ಸಂಕಲ್ಪ ಅವರು ನೆರವೇರಿಸಿದರು, ವರುಣ್ ಕುಮಾರ್ ಸ್ವಾಗತಿಸಿದರು ಹಾಗೂ ಪ್ರಗತಿ ವಂದಿಸಿದರು ಹಾಗೂ ಕಿರಣ್ ಕುಮಾರ್ ಹಾಗೂ ಸಂಗಡಿಗರಿಂದ ರಾಷ್ಟ್ರೀಯ ಸೇವಾ ಯೋಜನೆಗೆ ಕಾರ್ಯಕ್ರಮವನ್ನು ಯಶಸ್ವಿ ಗೊಳಿಸಿದರು. ಈ ಸಂದರ್ಭದಲ್ಲಿ ಕಾನೂನು ವಿದ್ಯಾಲಯದ ಸಿಬ್ಬಂದಿಗಳು ಸೇರಿದಂತೆ ಶಿಕ್ಷಕರು, ಹಾಗೂ ವಿದ್ಯಾರ್ಥಿಗಳು ಭಾಗಿಯಾಗಿದ್ದು ವಿಶೇಷವಾಗಿತ್ತು.

## ಸಾಹಿತಿ ಬುದ್ಧಘೋಷ ಬುದ್ಧವಾಸಿ,ದೇವಿಂದ್ರ ಹೆಗಡೆಯವರಿಗೆ ನುಡಿನಮನ

## ಸಾಮಾಜಿಕ ಪ್ರಜ್ಞೆ ಜೀವಂತ ಕನಸುಗಾರ ಹೆಗಡೆ,



ಮಲ್ಲಮ್ಮ ನುಡಿ ವಾರ್ತೆ

ಶಹಾಪುರ:ಮನುಷ್ಯ ತನ್ನ ಕುಂಟುಂಬದೊಂದಿಗೆ ಸಾಮಾಜಿಕ ಬದುಕನ್ನೆ ಮೈಗೂಡಿಸಿಕೊಂಡು. ತಾಯಿ, ಮನಸ್ಸು ಹೊಂದಿದ ವ್ಯಕ್ತಿತ್ವದ ಬುದ್ದವಾಸಿ ದೇವಿಂದ್ರ ಹೆಗಡೆಯವರು ಓರ್ವ ಸಾಮಾಜಿಕ ಪ್ರಜ್ಞೆಯ ಜೀವಂತ ಕನಸುಗಾರರಾಗಿದ್ದರು ಎಂದು ಹಿರಿಯ ರೈತ ಹೋರಾಟಗಾರ ಮುಖಂಡ ಶರಣಪ್ಪ ಸಲಾದಪುರ ಅಭಿಪ್ರಾಯ ವ್ಯಕ್ತಪಡಿಸಿದರು, ಅವರು ಶಹಾಪುರ ತಾಲುಕಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಹಮ್ಮಿಕೊಂಡ ಕಸಾಪ ಹಮ್ಮಿಕೊಂಡ ನುಡಿನಮನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು, ಹಿರಿಯ ಸಾಹಿತಿ ಶಿವಣ್ಣ ಇಜೇರಿ ಮಾತನಾಡಿ, ಬುದ್ದವಾಸಿ ದೇವಿಂದ್ರ ಹೆಗಡೆಯವರ ಹೆಸರು ಹಸಿರಾಗಿ ಜನಮಾನಸದಲ್ಲಿ ಉಳಿಯುವ ಕಾರ್ಯ ಮಾಡಿದರು ಎಂದರು, ಪತ್ರಕರ್ತರಾದ ವಿಶ್ವರಾಧ್ಯ ಸತ್ಯಂಪೇಟ ಮಾತನಾಡಿ, ಸಮಾಜಿ ಮುಖಿ ಆಲೋಚನಗಳನ್ನು ಹೊಂದಿದ್ದ ಹೆಗಡೆಯವರು ನಮ್ಮನ್ನಗಲಿದರೂ ಅವರ ವೈಚಾರಿಕತೆ ಸಿದ್ದಾಂತಗಳು ನಮ್ಮಗಳ ನೈತಿಕ ಮೌಲ್ಯಗಳನ್ನಾಗಿಸಕೊಳ್ಳಬೇಕಾಗಿದೆ, ಎಂದರು, ನಿಕಟಪೂರ್ವ ಕಸಾಪ ಅಧ್ಯಕ್ಷರಾದ ಸಿದ್ದಲಿಂಗಣ್ಣ ಆನೆಗುಂದಿ ಮಾತನಾಡಿ, ಬುದ್ದ ಬಸವ ಡಾ, ಅಂಬೇಡ್ಕರ ತತ್ವಸಿದ್ದಾಂತಗಳನ್ನು ಅಳವಡಿಸಿಕೊಂಡು ಸಾಮಾಜಿಕವಾಗಿ ಹೋರಾಟದ ಬದುಕು ನಡೆಸಿದ್ದ ಬುದ್ದವಾಸಿ ದೇವಿಂದ್ರ ಹೆಗಡೆಯವರು ನೇರ ದಿಟ್ಟ ವ್ಯಕ್ತಿತ್ವ ಹೊಂದಿದ್ದರು ಎಂದರು, ಕರವೇ ಉತ್ತರ ಕರ್ನಾಟಕ ಅಧ್ಯಕ್ಷರಾದ ಡಾ, ಶರಣು ಗದ್ದುಗೆ ಮಾತನಾಡಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಮಾಹಾತ್ಮ ಗೌತಮಬುದ್ದರ ತತ್ವ ಆದರ್ಶಗಳನ್ನು ಪ್ರತಿಯೊಬ್ಬರಿಗೆ ಮುಟ್ಟುವಂತೆ ಅವಿರತ ಹೋರಾಟದ ಹಾದಿಯಲ್ಲೆ ತಮ್ಮ ಬದುಕು ಕಳೆದ ದಿ, ದೇವಿಂದ್ರ ಹೆಗಡೆಯವರು ಅಗಲಿಕೆ ನೋವು ತಂದಿದೆ, ಓರ್ವ ಕನಸುಗಾರರನ್ನು ಕಳೆದುಕೊಂಡು ಇಂದು ಸಮಾಜಿಕವಾಗಿ ದುಃಖವಾಗಿದೆ ಎಂದು ಅವರು ತಮ್ಮ ನುಡಿನಮನ ಸಲ್ಲಿಸಿದರು, ನಿವೃತ್ತ ಪ್ರಾಂಶುಪಾಲರಾದ ಡಾ, ಅಬ್ದುಲ್ ಕರೀಮ ಕನ್ಯಾಕೊಳೂರ ಮಾತನಾಡಿ, ಕ್ರೂರದ ಸಾಮಾಜಿಕ ವ್ಯವಸ್ಥೆಯಲ್ಲಿ ದಿಟ್ಟತನದಿಂದ ಹೋರಾಟಕ್ಕಿಳಿದುಕೊಂಡು ಶೋಷಿತ ವರ್ಗಕ್ಕೆ ಶಕ್ತಿ ನೀಡಿದ್ದ ಹೆಗಡೆಯವರು ಅಗಲಿಕೆ ದುಃಖದ ಸಂಗತಿ ಎಂದರು,

ಒಡನಾಡಿ ಕಲಾವಿದ ಕ್ರಾಂತಿಗೀತೆಗಳ ಜಾದುಗಾರ ಡಾ, ನೀಲಕಂಠ ಬಡಿಗೇರ ಮಾತನಾಡಿ, ನೂರಾರು ಹಾಡುಗಳನ್ನು ರಚನೆ ಮಾಡಿದ್ದ ಬುದ್ದವಾಸಿ ದೇವಿಂದ್ರ ಹೆಗಡೆಯವರು ಅಗಲಿಕೆ ತುಂಬಲಾಗದ ನೋವು ಉಂಟು ಮಾಡಿದೆ, ಅವರ ರಚಿಸಿದ ನೂರಾರು ಹಾಡುಗಳಿಗೆ ನಾನು ಧ್ವನಿ ನೀಡಿ ಹಾಡಿದ್ದು, ಮರೆಯವಂತಿಲ್ಲ, ಹೋರಾಟದ ಹಾಡುಗಳನ್ನೆ ಸ್ಥಳದಲ್ಲೆ ದಿಟ್ಟತ್ತನದಿಂದ ರಚನೆ ಮಾಡಿ ಹಾಡಿಸಿದ ಕಿರ್ತಿ ಶಾಲಿಯಾಗಿದ್ದರು, ಎಂದು ಅವರು ,ಬೌದ್ದ ಧರ್ಮ ಧರ್ಮವಾಗಬೇಕು ಎಂದು ಅವರು ಅಚಲ ನಿಲುವು ಹೋರಾಟದ ಶಕ್ತಿಯ ಚಿಂತಕರಾಗಿದ್ದರು ಎಂದು ಅವರು ಚಿಕ್ಕ ವಯಸ್ಸಿನಲ್ಲೆ ಡಿಎಸ್,ಎಸ್, ರಾಜ್ಯಮಟ್ಟದಲ್ಲೆ ಹೆಸರು ಮಾಡಿದ್ದ ಹೆಗಡೆಯವರು ಸಮಾಜದ ಶಕ್ತಿಯಾಗಿದ್ದರು ಎಂದು ಅವರು ತಮ್ಮ ಹಾಡುಗಳ ಮುಖಾಂತರ ನುಡಿನಮನ ಸಲ್ಲಿಸಿದರು,

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಸಾಪ ಅಧ್ಯಕ್ಷರಾದ ಡಾ, ರವಿಂದ್ರನಾಥ ಹೋಸಮನಿ ವಹಿಸಿದ್ದರು, ಮುಖಂಡರಾದ ಸಣ್ಣನಿಂಗಣ್ಣ ನಾಯ್ಕೊಡಿ, ಭೀಮರಾಯ ಹೊಸಮನಿ, ವೆಂಕಟೇಶ ನಾಯಕ ಸುರುಪುರ, ಸೇರಿದಂತೆ ಅನೇಕರು ಮಾತನಾಡಿದರು, ಸಾಹೇಬಣ್ಣ ಪುರ್ಲೆ, ಸೈಯದ್ ಕಾಲಿದ, ಅಶೋಕ ಚೌದ್ರಿ, ರಾಯಪ್ಪ ಸಾಲಿಮನಿ, ಮಲ್ಲಪ್ಪ ಬೀರನೂರ, ಶರಣಬಸಪ್ಪ ಜಾಕಾಪುರ, ಮಲ್ಲಿಕಾರ್ಜುನ ಹೊಸಮನಿ, ಭೀ,ಗುಡಿ ವಲಯ ಕಸಾಪ ಅಧ್ಯಕ್ಷರಾದ ಶರಣಬಸವ ಬಿರೆದಾರವರು ಕಾರ್ಯಕ್ರಮ ನೀರೂಪಿಸಿದರು, ಅನೇಕ ಸಮಾಜದ ಮುಖಂಡರು ಸಾಹಿತಿಗಳು ನುಡಿನಮನ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು,

## ಧರ್ಮ ಹಿಂದೂ ಜಾತಿ ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ ಪಂಚಸೇನೆ ಅಧ್ಯಕ್ಷ ವಿಶ್ವನಾಥ ಕರೆ




ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ :ರಾಜ್ಯ ಸರಕಾರ ಹಿಂದುಳಿದ ಆಯೋಗದ ಮೂಲಕ ನಡೆಸುತ್ತಿರುವ ಜಾತಿ ಸಮೀಕ್ಷೆಯಲ್ಲಿ ಪಂಚಮಸಾಲಿ ಸಮಾಜದವರು ಧರ್ಮ ಕಾಲಂನಲ್ಲಿ ಹಿಂದೂ ಎಂದು ಮತ್ತು ಜಾತಿ ಕಾಲಂನಲ್ಲಿ ಲಿಂಗಾಯತ್ ಪಂಚಮಸಾಲಿ ಎಂದು ನಮೂದಿಸಬೇಕು ಎಂದು ಪಂಚಸೇನೆ ಜಿಲ್ಲಾಧ್ಯಕ್ಷ ವಿಶ್ವನಾಥ ಮರಿಬಸಪ್ಪ ಕರೆ ನೀಡಿದ್ದಾರೆ.

ಬುಧವಾರ ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಟಿ ನಡೆಸಿ ಅವರು ಮಾತನಾಡಿದರು. ಸರಕಾರ ಆರ್ಥಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಸಮೀಕ್ಷೆ ಎಂದು ಹೇಳುತ್ತಿದೆ. ಇದರಲ್ಲಿ ಸುಮಾರು 60 ಕಾಲಂಗಳನ್ನು ಪ್ರತಿಯೊಬ್ಬರು ಭರ್ತಿ ಮಾಡಬೇಕು. ಈ ಹಿನ್ನೆಲೆಯಲ್ಲಿ ಕೊಪ್ಪಳ ಜಿಲ್ಲೆಯ ಸಮಸ್ಥ ಪಂಚಮಸಾಲಿ ಸಮಾಜದ ಬಾಂಧವರು ಯಾವುದೇ ಗೊಂದಗಳಿಲ್ಲದೇ ಧರ್ಮ ಕಾಲಂನಲ್ಲಿ ಹಿಂದೂ ಎಂದು ಮತ್ತು ಜಾತಿ ಕಾಲಂನಲ್ಲಿ ಲಿಂಗಾಯತ್ ಪಂಚಮಸಾಲಿ ಎಂದು ಬರೆಯಿಸಬೇಕು. ರಾಜ್ಯದಲ್ಲಿ ಈ ಕುರಿತು ಕೆಲವರು ವ್ಯಕ್ತಪಡಿಸುತ್ತಿರುವ ಅಭಿಪ್ರಾಯ ವೈಯಕ್ತಿಕವಾಗಿದೆ. ಧರ್ಮ ಹಿಂದೂ ಜಾತಿ ಲಿಂಗಾಯತ್ ಪಂಚಮಸಾಲಿ ಎಂಬ ನಿರ್ಣಯ ಸಮಸ್ಥ ಪಂಚಮಸಾಲಿ ಗುರುಗಳು ಮತ್ತು ಹಿರಿಯರು ತೆಗೆದುಕೊಂಡ ನಿರ್ಣಯವಾಗಿದೆ. ಹೀಗಾಗಿ ಕಡ್ಡಾಯವಾಗಿ ನಾವು ತಿಳಿಸಿದ ವಿಷಯವನ್ನು ಸಮಾಜದ ಪ್ರತಿಯೊಬ್ಬರು ಸ್ಪಷ್ಟಪಡಿಸಿಕೊಳ್ಳಬೇಕು ಎಂದರು.

ಗೋಷ್ಟಿಯಲ್ಲಿ ಪಂಚಸೇನೆಯ ಕಲ್ಯಾಣ ಕರ್ನಾಟಕ ಭಾಗದ ಮಾಧ್ಯಮ ವಕ್ತಾರ ರವೀಂದ್ರ ಕೊಟ್ರಪ್ಪ ಮುತ್ತಾಳ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಡಾ. ಮಹಾಂತೇಶ ನೆಲಾಗಣಿ, ಕುಕನೂರ ತಾಲೂಕು ಅಧ್ಯಕ್ಷ ಪ್ರಭುರಾಜ ಹಳ್ಳಿ, ಹಿರಿಯ ಮುಖಂಡ ಮಂಜುನಾಥ ಸೊರಟೂರು, ಮಹೇಶ ಇದ್ದರು.

## ಬಳ್ಳಾರಿ ಜಿಲ್ಲಾ ಲಾರಿ ಮಾಲೀಕರ ಸಂಘದ ಪುನರ್ ರಚನೆ

ಬಳ್ಳಾರಿ,ಸೆ.20: ಹಳೇ ಸಂಘ, ಹೊಸ ಸಂಘ, ಇವರೆಡನ್ನು ಹೊರತು ಪಡಿಸಿ ಮತ್ತೊಂದು ಸಂಘ ಎಂದು ಲಾರೀ ಮಾಲೀಕರ ಹಲವಾರು ಸಂಘಗಳಾಗಿ ಒಗ್ಗಟ್ಟು ಇಲ್ಲದಂತಾಗಿತ್ತು. ಆದಕ್ಕಾಗಿ ಸಂಘದ ಅಧ್ಯಕ್ಷ ಶ್ರೀನಿವಾಸುಲು ಮಿಂಚು. ಅಧ್ಯಕ್ಷ ಸ್ಥಾನ ಒಂದು ಬಿಟ್ಟು ಉಳಿದಂತೆ ಸಂಘದ ಇತರೇ ಪದಾಧಿಕಾರಿಗಳು ಸೇರಿದಂತೆ ಹೊಸ ಬಾಡಿಯನ್ನು ವಿಸರ್ಜನೆ ಮಾಡಿದ್ದರಂತೆ. ಎಲ್ಲರನ್ನೂ ಒಗ್ಗೂಡಿಸಿ, ಸಭೆ ಕರೆದು ಎಲ್ಲರನ್ನು ಒಂದು ಗೂಡಿಸಿ, ಎಲ್ಲರಿಗೂ ಸಂಘದಲ್ಲಿ ಆಧ್ಯತೆ ಸಿಗುವಂತೆ ಮಾಡಿ. ಅವರೆಲ್ಲ ನಿನ್ನೆ ಹುಲಿಗೆಮ್ಮಗೆ ಹೋಗಿ ಬಂದಿದ್ದಾರೆ. ಸಂಘದ ನೂತನ ಪದಾಧಿಕಾರಿಗಳ ಪಟ್ಟಿಯನ್ನು ನಾಡಿದ್ದು ಸೋಮವಾರ ಪ್ರಕಟಿಸಿ ಆದೇಶ ಪತ್ರ ವಿತರಿಸಲಿದ್ದಾರೆಂದು ತಿಳಿದು ಬಂದಿದೆ.

# ಕಾನೂನು ಸೇವಾ ಸಂಸ್ಥೆಗಳ ನಡುವೆ ಅಂತರ ಕಡಿಮೆಗೆ ಅರೆಕಾಲಿಕ ಕಾನೂನು ಸ್ವಯಂ ಸೇವಕರ ನೇಮಕ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಸೆ.23–ಅರೆಕಾಲಿಕ ಕಾನೂನು ಸ್ವಯಂ ಸೇವಕರು (ಪ್ಯಾರಾ ಲೀಗಲ್ ವ್ಯಾಲೆಂಟಿರ್ಸ್) ಎಂದರೆ ಸಮಾಜದಲ್ಲಿ ಕಾನೂನು ಅರಿವು ಮೂಡಿಸಲು, ಕಾನೂನು ನೆರವು ಪಡೆಯಲು ಜನರಿಗೆ ಸಹಾಯ ಮಾಡಲು ಮತ್ತು ಸಾಮಾನ್ಯ ಜನರು ಹಾಗೂ ಕಾನೂನು ಸೇವಾ ಸಂಸ್ಥೆಗಳ ನಡುವೆ ಅಂತರವನ್ನು ಕಡಿಮೆ ಮಾಡಲು ಕೆಲಸ ಮಾಡುವ ಸ್ವಯಂಸೇವಕರು ಎಂದು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಶಶಿಧರ್ ಶೆಟ್ಟಿ ಅವರು ಹೇಳಿದರು.

ಮಂಗಳವಾರ, ಎಲ್ಲಾ ಜಿಲ್ಲೆಯ ಕಾನೂನು ಸೇವೆಯ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಮತ್ತು ಮಾಧ್ಯಮದವರೊಂದಿಗೆ ವರ್ಚುವಲ್ ಮೂಲಕ ಸಂವಾದ ನಡೆಸಿ ಅವರು ಮಾತನಾಡಿದರು.

ಅರೆಕಾಲಿಕ ಕಾನೂನು ಸ್ವಯಂ ಸೇವಕರರು ಇವರು ವಕೀಲರಲ್ಲದಿದ್ದರೂ, ಸಮಾಜದಲ್ಲಿ ಕಾನೂನು ಸೇವೆಗಳನ್ನು




ತಲುಪಿಸಲು ಮಧ್ಯವರ್ತಿಗಳಾಗಿ ಕಾರ್ಯನಿರ್ವಹಿಸುತ್ತಾರೆ. ಜನರಿಗೆ ಕಾನೂನು ಅರಿವನ್ನು ಮೂಡಿಸುವುದು. ಕಾನೂನು ನೆರವು ಪಡೆಯಲು ಜನರಿಗೆ ಸಹಾಯ ಮಾಡುವುದು. ನ್ಯಾಯದ ಪ್ರವೇಶಕ್ಕೆ ಇರುವ ಅಡೆತಡೆಗಳನ್ನು ನಿವಾರಿಸುವುದು. ಸಾಮಾನ್ಯ ಜನರು ಮತ್ತು ಕಾನೂನು ಸೇವಾ ಪ್ರಾಧಿಕಾರಗಳ ನಡುವಿನ ಸಂಪರ್ಕ ಕೊಂಡಿಯಾಗಿ ಕೆಲಸ ಮಾಡುವುದು ಇವರ ಕಾರ್ಯವಾಗಿದೆ ಎಂದರು.

ಸಾಮಾಜಿಕ ಚಿಂತನೆ ಮತ್ತು ಸಮಾಜ ಸೇವೆ ಮಾಡುವ ಇಚ್ಛೆ ಹೊಂದಿರುವ ಶಿಕ್ಷಕರು, ನಿವೃತ್ತ ಕೇಂದ್ರ ಅಥವಾ ರಾಜ್ಯ ಸರ್ಕಾರಿ ನೌಕರರು, ಹಿರಿಯ ನಾಗರಿಕರು, ಎಂ.ಎಸ್.ಡಬ್ಲ್ಯೂ ವಿದ್ಯಾರ್ಥಿಗಳು, ಕಾನೂನು ವಿದ್ಯಾರ್ಥಿಗಳು, ಅಂಗನವಾಡಿ ಕಾರ್ಯಕರ್ತೆಯರು, ಸಂಘ–ಸಂಸ್ಥೆಗಳ ಸದಸ್ಯರು, ಸ್ತ್ರೀ ಶಕ್ತಿ ಸಂಘಗಳು, ಸ್ತ್ರೀಮೈತ್ರಿ ಸಂಘಗಳು, ಪದವೀಧರರು ಮತ್ತು ವೈದ್ಯಕೀಯ ಶಿಕ್ಷಣ ಕ್ಷೇತ್ರದಲ್ಲಿರುವವರು ಅರ್ಜಿ ಸಲ್ಲಿಸಬಹುದಾಗಿದೆ ಎಂದು ತಿಳಿಸಿದರು.

ಆಯಾ ಜಿಲ್ಲಾ ಅಥವಾ ತಾಲ್ಲೂಕು ಕಾನೂನು ಸೇವಾ ಪ್ರಾಧಿಕಾರಗಳ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದು. ಅ.20 ರೊಳಗೆ ಅರ್ಜಿ ಸಲ್ಲಿಸಬಹುದು. ಸಹಾಯವಾಣಿ ಸಂಖ್ಯೆ 15100 ಗೆ ಕರೆ ಮಾಡಿ ಮಾಹಿತಿ ಪಡೆಯಬಹುದಾಗಿದ್ದು, ಈ ಸ್ವಯಂ ಸೇವಕರಿಗೆ ಕಾನೂನು ತರಬೇತಿಯನ್ನು ನೀಡಿ ಒಟ್ಟಾರೆ–ಯಾಗಿ, ನ್ಯಾಯವನ್ನು ಎಲ್ಲರಿಗೂ ತಲುಪಿಸುವ ಒಂದು ಪ್ರಮುಖ ಕಾರ್ಯವಾಗಲಿದೆ. ಇದರ ಬಗ್ಗೆ ವ್ಯಾಪಕ ಪ್ರಚಾರ ನೀಡಬೇಕಾಗಿ ಮಾಧ್ಯಮ ಸಂಸ್ಥೆಗಳಿಗೆ ಮನವಿ ಮಾಡಿದರು. ವರ್ಚುವಲ್ ಮೂಲಕ ಬಳ್ಳಾರಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಎನ್.ಹೊಸಮನೆ ಅವರು ಭಾಗವಹಿಸಿದ್ದರು.

# ಸಹಕಾರಿ ಕೃಷಿ ಪತ್ತಿನ ಸಹಕಾರಿ ಸಂಘದ ವಾರ್ಷಿಕ ಸಭೆ

ಮಲ್ಲಮ್ಮ ನುಡಿ ವಾರ್ತೆ

ಕುಕನೂರ : ತಾಲೂಕಿನ ಮಂಡಲಗಿರಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿ ಸಹಕಾರ ಸಂಘ ಆಯೋಜಿಸಿದ್ದ 49ನೇ ವರ್ಷದ ವಾರ್ಷಿಕ ಮಹಾಸಭೆಯನ್ನು ಉದ್ದೇಶಿಸಿ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾದ ಸೋಮನಗೌಡ ಪಾಟೀಲ ಮಾನಾಡುತ್ತಾ ಬಹುತೇಕ ಕೃಷಿ ಪತ್ತಿನ ಸಹಕಾರ ಸಂಘಗಳು ಅವನತಿಗಳತ್ತ ಸಾಗುತ್ತಿದ್ದು ಇದಕ್ಕೆಲ್ಲ ಈ ಕೃಷಿ ಪತ್ತಿನ ಸಹಕಾರ ಸಂಘ ರೈತರನ್ನೇ ಅವಲಂಬಿಸಿದ್ದು ಈ ಸಂಘದ ಸದಸ್ಯರು ಹಾಗೂ ನಿರ್ದೇಶಕರು ಸಂಘವನ್ನು ಸ್ವಾವಲಂಬನೆ ಮಾಡಿದಾಗ ಸಂಘ ಹಾಗೂ ರೈತರು ಸೇರಿದಂತೆ ಗ್ರಾಮೀಣ ಭಾಗದ ಪ್ರತಿಯೊಬ್ಬರು ಆರ್ಥಿಕ ಸಬಲತೆ ಹೊಂದಲು ಸಾಧ್ಯ ಎಂದು ಹೇಳಿದರು.

ಕೃಷಿಗೆ ಸಂಬಂಧಿಸಿದ ಸಹಕಾರಿ ಸಂಘಗಳು ಯಶಸ್ವಿಯಾಗುವುದರಲ್ಲಿ ವಿಫಲತೆಯನ್ನು ಎದುರಿಸುತ್ತಿವೆ ಅದರಂತೆಯೇ ನಮ್ಮನ್ನು ಎಲ್ಲಾ ನಿರ್ದೇಶಕರು ಹಾಗೂ ಗ್ರಾಮದ ಹಿರಿಯರು ವಿಶೇಷ ನಂಬಿಕೆಯಿಂದ ಅವನತಿ ಹಂತದಲ್ಲಿದ್ದ ಸಂಸ್ಥೆಯ ಜವಾಬ್ದಾರಿಯನ್ನು ನಮ್ಮ ಹೆಗಲಿಗೆ ಏರಿಸಿದ್ದು ಇನ್ನು ಕೆಲವೇ ತಿಂಗಳಗಳಲ್ಲಿ ನಮ್ಮ ಅಧಿಕಾರಾವಧಿ ಸಂಪೂರ್ಣಗೊಳ್ಳಲಿದೆ ಈ ವೇಳೆಯಲ್ಲಿ ಸಂಸ್ಥೆಯನ್ನು ಅಭಿವೃದ್ಧಿಗೊಳಿಸಿ ಅವನತಿಯಿಂದ ಲಾಭದ ಕಡೆಗೆ ಸಂಸ್ಥೆಯನ್ನು ತಂದ ಆತ್ಮತೃಪ್ತಿ ನಮ್ಮಲ್ಲಿದ್ದು ಇದಕ್ಕೆ ಸಹಕರಿಸಿದ ಎಲ್ಲರಿಗೂ ಸೋಮನ ಪಾಟೀಲ್ ಅಧ್ಯಕ್ಷರು ಕೃತಜ್ಞತೆ ಹೇಳಿದರು.

ಗ್ರಾಮದ ಹಿರಿಯಯಾರಾದ ಹಂಚಾಳಪ್ಪತಳವಾರ ಮಾತನಾಡುತ್ತಾ ನಮ್ಮ ಪ್ರದೇಶ ಸಂಪೂರ್ಣವಾಗಿ ಹಿಂದುಳಿದಿದ್ದು 49 ವರ್ಷಗಳ ಹಿಂದೆಯೇ ನಮ್ಮ ಗ್ರಾಮದಲ್ಲಿ ಕೃಷಿ ಪತ್ತಿನ ಸಹಕಾರ ಸಂಘ ಪ್ರಾರಂಭಿಸಿ ಹಲವಾರು ಜನಪರ ಕಾರ್ಯಗಳನ್ನು ಮಾಡಿದ್ದು ಅನೇಕ ಹಿರಿಯರ ಅವಿರತ ಶ್ರಮದಿಂದ ಸಾಗಿಬಂದ ಸಂಸ್ಥೆ ಇದಾಗಿದ್ದು ಪರಸ್ಪರ ಸಹಾಯ ಹಸ್ತನೀಡುವುದೇ ಸಹಕಾರವಾಗಿದೆ ಎಂದು ಹೇಳಿದರು. ಈ ವೇಳೆಯಲ್ಲಿ ಪ್ರಮುಖರಾದ ಹನುಮಂತಪ್ಪ ಉಪ್ಪಾರ, ವೆಂಕಟೇಶ್ ಈಳಿಗೆರ, ಹನುಮಂತಗೌಡ ನಾಗನಗೌಡ್ರು, ಬಸಯ್ಯ ಸಸಿಮಠ, ಪರಪ್ಪ ಅಂಗಡಿ, ಸುರೇಶ ದಳವಾಯಿ, ಈರಯ್ಯ ಬದ್ರಾಪುರ ಸಹಕಾರ ಸಂಘದ ನಿರ್ದೇಶಕರು, ಸಿಬ್ಬಂದಿಗಳು ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

# ಲಸಿಕೆ ಹಾಕಿಸಿ ರೇಬಿಸ್ ತಡೆಗಟ್ಟಿಸಿ ಡಾ.ಕೆ.ಶೋಭಾ ಸಲಹೆ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಸೆ.24–ರೇಬಿಸ್ ಗಂಭೀರ ಮಾರಣಾಂತಿಕ ಕಾಯಿಲೆಯಾಗಿದ್ದು, ನಾಯಿ ಕಚ್ಚಿದ ತಕ್ಷಣ ನಿರ್ಲಕ್ಷ್ಯ ಮಾಡದೇ ಮತ್ತು ಗಿಡಮೂಲಿಕೆಗಳ ಔಷಧಿ ಕೊಡಿಸದೇ ಹತ್ತಿರದ ಆರೋಗ್ಯ ಕೇಂದ್ರದಲ್ಲಿ ರೇಬಿಸ್ ಇಮ್ಯೂನೊಗ್ಲೋಬಿಲಿನ್ ಲಸಿಕೆ ಹಾಕಿಸಬೇಕು ಎಂದು ಮಿಲ್ಲರ್ ಪೇಟೆ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದಾಧಿಕಾರಿ ಡಾ.ಶೋಭಾ ಅವರು ಹೇಳಿದರು.

ಮಿಲ್ಲರ್ ಪೇಟೆ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯ ಹನುಮಾನ್ ನಗರ ಬಡಾವಣೆಯಲ್ಲಿ ನಾಯಿ ಕಚ್ಚುವುದರಿಂದ ಬರುವ ರೇಬೀಸ್ ಕಾಯಿಲೆ ಕುರಿತ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನಾಯಿ ಕಡಿತದ ಜಾಗದಲ್ಲಿ ಸ್ವಚ್ಛ ನೀರಿನಿಂದ 10 ರಿಂದ 15 ನಿಮಿಷಗಳ ಕಾಲ ಸೋಪಿನಿಂದ ಚೆನ್ನಾಗಿ ತೊಳೆಯಬೇಕು. ರಕ್ತ ಸ್ರಾವ ಆಗುತ್ತಿದ್ದಲ್ಲಿ ಆ ಭಾಗಕ್ಕೆ ಸ್ವಚ್ಛವಾದ ಬಟ್ಟೆಯಿಂದ ಅಥವಾ ಹತ್ತಿಯಿಂದ ನಿಧಾನವಾಗಿ ಒತ್ತಿ ಸಾಧ್ಯವಾದಷ್ಟು ಬೇಗ ರಕ್ತಸ್ರಾವ ನಿಲ್ಲಿಸಿ ಹತ್ತಿರದ ಆಸ್ಪತ್ರೆಗೆ ಭೇಟಿ ನೀಡಬೇಕು ಅಥವಾ ಆ ಬಡಾವಣೆಯ ಆರೋಗ್ಯ ಕಾರ್ಯಕರ್ತರನ್ನು ಸಂಪರ್ಕಿಸಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಶರತ್ ಸಿ.ಆರ್., ಚೇತನ್ ಎಂ.ಕೆ., ಎಂ.ಎಲ್.ವಿ ಸೋಮಶೇಖರ್ ಸೇರಿದಂತೆ ಆಶಾ ಕಾರ್ಯಕತೆ–ಯರಾದ ತಾಯಮ್ಮ, ನವೀನ, ಶ್ರುತಿ ಮತ್ತು ಸಾರ್ವಜನಿಕರು ಭಾಗವಹಿಸಿದ್ದರು.

# ಸಮೀಕ್ಷೆಯಲ್ಲಿ ಹಿಂದೂ ಲಿಂಗಾಯತ– ಪಂಚಮಸಾಲಿ ಎಂದು ಬರೆಸಿ : ಸೋಮನಗೌಡ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಸಮೀಕ್ಷೆ ಆರಂಭಿಸಿದ್ದು ಪಂಚಮಸಾಲಿ ಬಂಧುಗಳು ಸಮೀಕ್ಷೆಯ ವೇಳೆ ಧರ್ಮ ಕಾಲಂನಲ್ಲಿ ಹಿಂದೂ ಎಂದು ಬರೆಯಿಸಿ, ಜಾತಿ ಕಾಲಂನಲ್ಲಿ ಲಿಂಗಾಯತ ಪಂಚಮಸಾಲಿ ಎಂದು ಬರೆಯಸಬೇಕು ಎಂದು ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ರಾಜ್ಯಾಧ್ಯಕ್ಷ ಸೋಮನಗೌಡ ಪಾಟೀಲ್ ಅವರು ಹೇಳಿದರು.

ನಗರದ ಪತ್ರಿಕಾಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಅವರು ಮಾತನಾಡಿದರು.

ಈಗಾಗಲೇ ಸಮೀಕ್ಷೆ ಆರಂಭವಾಗಿದೆ. ಸಮಾಜ ಬಾಂಧವರು ಯಾವುದೇ ಕಾರಣಕ್ಕೂ ಗೊಂದಲಕ್ಕೆ ಒಳಗಾಗುವುದು ಬೇಡ. ಸಮೀಕ್ಷೆಗೆ ಮನೆ ಮನೆಗೆ ಬರುವ ನೌಕರರಿಗೆ ಧರ್ಮ ಕಾಲಂನಲ್ಲಿ ಹಿಂದೂ ಎಂದು ಜಾತಿ ಕಾಲಂನಲ್ಲಿ ಪಂಚಮಸಾಲಿ ಲಿಂಗಾಯತ ಎಂದು ಬರೆಯಿಸಬೇಕು. ಯಾವುದೇ ಕಾರಣಕ್ಕೂ ಸಮೀಕ್ಷೆಯಿಂದ ಹಿಂದೆ ಸರಿಯವುದು ಬೇಡ ಎಂದರು.

ಸರ್ಕಾರವು ಸಮೀಕ್ಷೆಯನ್ನು ಆತುರದಲ್ಲಿ ಮಾಡಲು ಮುಂದಾಗಿದೆ. ಇದಕ್ಕೆ ವಿವಿಧ ಸ್ವಾಮೀಜಿಗಳು ಸಹ ಬೇಸರ ವ್ಯಕ್ತಪಡಿಸಿ ಆತುರದಲ್ಲಿ ಸಮೀಕ್ಷೆ ಕೈಗೊಳ್ಳುವುದು ಬೇಡ ಎಂದಿದ್ದಾರೆ. ಆದರೆ ಸರ್ಕಾರವು ಸಮೀಕ್ಷೆಯನ್ನಂತೂ ಮಾಡುತ್ತಿದೆ ಎಂದರು.

ಕೂಡಲಸಂಗಮ ಪೀಠದ ಬಸವ ಜಯ ಮೃತ್ಯುಂಜಯ ಸ್ವಾಮೀಜಿಗಳನ್ನು ಟ್ರಸ್ಟ್‌ನಿಂದ ಉಚ್ಚಾಟನೆ ಮಾಡಿದ ವಿಷಯ ನಮಗೆ ಗೊತ್ತಾಗಿದೆ. ಆದರೆ ಯಾವ ಕಾರಣಕ್ಕೆ ಉಚ್ಚಾಟನೆ ಮಾಡಲಾಗಿದೆ ಎನ್ನುವ ವಿಚಾರವೂ ನಮಗೆ ಗೊತ್ತಿಲ್ಲ. ಆ ಟ್ರಸ್ಟ್‌ನಲ್ಲಿ ಬೇರೆ ಯಾರೆಲ್ಲಾ ಇದ್ದಾರೆ ಎನ್ನುವ ಮಾಹಿತಿಯೂ ನಮಗೆ ಇಲ್ಲ. ಆ ಟ್ರಸ್ಟ್ ನಮ್ಮ ಸಂಘದ ಅಧೀನದಡಿ ಬರುವುದಿಲ್ಲ. ಹಾಗಾಗಿ ಆ ಬಗ್ಗೆ ನಾನು ಏನೂ ಮಾತನಾಡಲು ಬರಲ್ಲ.

ಕೂಡಲಸಂಗಮ ಶ್ರೀಗಳನ್ನು ಪೀಠದಿಂದಲೇ ಉಚ್ಚಾಟನೆ ಮಾಡಿದ ವಿಷಯಕ್ಕೆ ಸಂಘದಿಂದ ವಿಷಾಧ ವ್ಯಕ್ತಪಡಿಸುವೆ ಎಂದರಲ್ಲದೇ, ಆ ಸ್ವಾಮಿಗಳು ಸಹ ನಮ್ಮ ಸಮಾಜಕ್ಕೆ ಮೀಸಲಾತಿಗಾಗಿ ಹೋರಾಟವನ್ನು ಮಾಡಿದ್ದಾರೆ. ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಉಚ್ಚಾಟನೆಯ ವಿಷಯ ನಮಗೆ ಇನ್ನೂ ಪೂರ್ಣವಾಗಿ ಮಾಹಿತಿ ದೊರೆತಿಲ್ಲ ಎಂದು ಅಷ್ಟಕ್ಕೆ ಮಾತುಗಳಿಗೆ ಅವರು ಇತಿಶ್ರೀ ಹಾಡಿದರು.

ಸುದ್ದಿಗೋಷ್ಠಿಯಲ್ಲಿ ಪಂಚಮಸಾಲಿ ಸಮಾಜದ ಜಿಲ್ಲಾಧ್ಯಕ್ಷ ಬಸನಗೌಡ ತೊಂಡಿಹಾಳ, ದೇವರಾಜ ಹಾಲಸಮುದ್ರ, ಕರಿಯಪ್ಪ ಮೇಟಿ, ಸುಮಂಗಲಾ ಹಂಚಿನಾಳ, ಪ್ರತಿಮಾ ಪಟ್ಟಣಶೆಟ್ಟಿ, ಸುಜಾತ ಪಟ್ಟಣಶೆಟ್ಟಿ, ಗಿರಿಜಮ್ಮ ಪಾಟೀಲ್ ಉಪಸ್ಥಿತರಿದ್ದರು.

# ಮಾನವೀಯತೆ ಇಲ್ಲದ ಬದುಕು ವ್ಯರ್ಥ– ಮಲ್ಲಿನಕೇರಿ ಶ್ರೀ

ಮಲ್ಲಮ್ಮ ನುಡಿ ವಾರ್ತೆ

ಕುಕನೂರ : ಮನುಷ್ಯ ತನ್ನ ಜೀವನದಲ್ಲಿ ಪುರಾಣ ಪುಣ್ಯಕಥೆಗಳನ್ನ ಕೇಳಿಯು ಮಾನವೀಯತೆ ತನ್ನ ಬದುಕಿನಲ್ಲಿ ಅಳವಡಿಸಿಕೊಳ್ಳದಿದ್ದಾರೆ ಅವನ ಬದುಕು ವ್ಯರ್ಥ ಎಂದು ಹಿರೇಮಲ್ಲಿನಕೇರಿಯ ಚನ್ನಬಸವ ಮಹಾಸ್ವಾಮಿಗಳು ಹೇಳಿದರು.

ಅವರು ಕುಕನೂರ ಪಟ್ಟಣದ ಮುಂಡರಗಿ ಅನ್ನದಾನೀಶ್ವರ ಶಾಖಾಮಠದಲ್ಲಿ ಕಲ್ಮಠ ಸಹಕಾರದಿಂದ ನಡೆದ ದೇವಿ ಪುರಾಣದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡುತ್ತಾ ಪುರಾಣಗಳು ನಮ್ಮೆಲ್ಲರ ಒಳತಿಗಾಗಿ ಇವೆ, ಧರ್ಮದ ದಾರಿಯಲ್ಲಿ ಸಾಗಬೇಕಾದದ್ದು ಪ್ರತಿಯೊಬ್ಬರ ಕರ್ತವ್ಯ, ಆಚಾರ ಮತ್ತು ವಿಚಾರಗಳು




ಒಂದೇಯಾಗಬೇಕು, ಕಾಯಕವೇ ಕೈಲಾಸ ಎಂಬ ತತ್ವ ಅರಿದು ದುಡಿದು ಉಣ್ಣುವ ಸಂಸ್ಕೃತಿ ನಮ್ಮದು, ತಾಯಿ ಮತ್ತು ತಾಯಿ ನಾಡನ್ನ ಗೌರವಿಸುವ ಶ್ರೇಷ್ಠ ಪರಂಪರೆಯಲ್ಲಿ ಬಂದವರು ನಾವು ಎಂದರು.

ನಂತರ ಮಾತನಾಡಿದ ಡಾ ಪ್ರಶಾಂತ ಕಲ್ಮಠ ಭಕ್ತರ ಸಹಕಾರವೇ ದೊಡ್ಡದು ನಮ್ಮ ಕಲ್ಮಠಕ್ಕೆ ತನ್ನದೇ ಆದ ಭವ್ಯ ಪರಂಪರೆಯಿದೆ ಆದರೆ ಕಾಲಘಟ್ಟದಲ್ಲಿ ಅದು ಮರೆಯಾಗಿದೆ ಅಷ್ಟೇ ಆದರೆ ಭಕ್ತರ ಮಾತ್ರ ಯಾವಗಲೂ ಧರ್ಮದ ಕಾರ್ಯಗಳಿಗೆ ಸಹಕಾರ ನೀಡುತ್ತಾ ಬಂದಿದ್ದಾರೆ, ಅನ್ನದಾನೀಶ್ವರ ಮಠವು ನಮ್ಮೆಲ್ಲರ ಆರಾಧ್ಯ ಕೇಂದ್ರವಾಗಿದೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಶ್ರೀಮತಿ ಕುಸುಮಾ ಶಂಭುಲಿಂಗಪ್ಪ ಜೋಳದ ಮಾತನಾಡಿ ವೀರಶೈವ ಲಿಂಗಾಯತ ಮಠಗಳು ಸರ್ವಜನರ ಕಲ್ಯಾಣಕ್ಕೆ ಇವೆ, ಪುರಾಣಗಳಲ್ಲಿ ಭಕ್ತರ ಭಾಗವಹಿಸುವಿಕೆ ಮುಖ್ಯ, ಪುರಾಣ ಕೇಳುವುದರಿಂದ ಮಾನಸಿಕ ನೆಮ್ಮದಿ ದೊರೆ–ಯುತ್ತದೆ ಎಂದರು.

ಈ ಸಂದರ್ಭದಲ್ಲಿ ಪೂಜ್ಯ ಮಹಾದೇವ ಸ್ವಾಮೀಜಿ, ಶ್ರೀಮಠದ ಆಡಳಿತಾಧಿಕಾರಿ ಸಂಗಮೇಶ ಕಲ್ಮಠ, ವೀಣಾ ಕಲ್ಮಠ, ಗದಿಗೆಪ್ಪ ಪವಾಡಶೆಟ್ಟಿ, ವೀರಯ್ಯ ದಳಪತಿ, ಕಲ್ಲಪ್ಪ ಅಳವಂಡಿ, ಶರಣಪ್ಪ ಯತ್ನಟ್ಟಿ, ಗಂಗಮ್ಮ ಮಟ್ಟಿ, ಸುದಾ ಕಟಬಿ, ಆನಂದ ಮಡಿವಾಳರ, ಮೌಲ ಸಂಗಟಿ, ಪ್ರಶಾಂತ ಹೊಸಮಠ, ಸಂಗೀತ ಸೇವೆಯನ್ನ ಶಂಕ್ರಣ್ಣ ಹಾಲಕರೆ, ಚನ್ನಪ್ಪ ಹಾಲಕರೆ ಮತ್ತು ಇತರರು ಇದ್ದರು.

# ಸೆ.29 ರಂದು ಬಳ್ಳಾರಿ ಜಿಲ್ಲಾ ಮೊದಲ ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಸೆ.24–ಜಿಲ್ಲೆಯ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ (20 ಅಂಶ ಸೇರಿದಂತೆ) ಮೊದಲ ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯನ್ನು ಸೆ.29 ರಂದು ಮಧ್ಯಾಹ್ನ 02 ಗಂಟೆಗೆ ನಗರದ ಜಿಲ್ಲಾ ಪಂಚಾಯತ್‌ನ ಅಬ್ದುಲ್ ನಜೀರ್‌ಸಾಬ್ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ವಸತಿ, ವಕ್ಫ್ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಅವರು ಸಭೆಯ ಅಧ್ಯಕ್ಷತೆ ವಹಿಸುವರು ಎಂದು ಕರ್ನಾಟಕ (20 ಅಂಶ) ಅನುಷ್ಠಾನ ಸಮಿತಿಯ ಸದಸ್ಯ ಕಾರ್ಯದರ್ಶಿಯೂ ಆದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹ್ಯಾರಿಸ್ ಸುಮೈರ್ ಅವರು ತಿಳಿಸಿದ್ದಾರೆ.

# ಜವಾಹರ ನವೋದಯ ವಿದ್ಯಾಲಯ ಪ್ರವೇಶ ಪರೀಕ್ಷೆಗೆ ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಸೆ.23–ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಚಿಕ್ಕಜೋಗಿಹಳ್ಳಿಯಲ್ಲಿರುವ ಜವಾಹರ ನವೋದಯ ವಿದ್ಯಾಲಯದ 9ನೇ ಮತ್ತು 11ನೇ ತರಗತಿಯ (2026–27ನೇ ಸಾಲಿಗಾಗಿ) ಪ್ರವೇಶ ಪರೀಕ್ಷೆಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಅಕ್ಟೋಬರ್ 07 ಕೊನೆಯ ದಿನವಾಗಿದೆ.

ಆಸಕ್ತರು ಆನ್ ಲೈನ್ ವೆಬ್‌ಸೈಟ್: 9ನೇ ತರಗತಿಗಾಗಿ- https://cbseitms.nic.in/2025/nvsix9/registrationclassIX/registrationclassIX ಮತ್ತು 11ನೇ ತರಗತಿಗಾಗಿ– https://cbseitms.nic.in/2025/nvsxi_11/registrationclassXI/registrationclassXI ಗೆ ಭೇಟಿ ನೀಡಬಹುದು ಎಂದು ಪ್ರಾಚಾರ್ಯರಾದ ಸುದೇಶ ಗೋಪಾಲ ಮಲಾಜುರೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪ್ರಗತಿ ಪರಿಶೀಲನಾ ಸಮಿತಿ ಸಭೆ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಸೆ.24– ಕುರುಗೋಡು ತಾಲ್ಲೂಕಿನಲ್ಲಿ ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ–2005ರ ಪರಿಣಾಮಕಾರಿ ಅನುಷ್ಠಾನ ಕುರಿತು ಕುರುಗೋಡು ತಾಲ್ಲೂಕು ತಹಶೀಲ್ದಾರರ ಅಧ್ಯಕ್ಷತೆಯಲ್ಲಿ ಸೆ.26 ರಂದು ಬೆಳಿಗ್ಗೆ 11 ಗಂಟೆಗೆ ಕುರುಗೋಡು ತಾಲ್ಲೂಕು ತಹಶೀಲ್ದಾರರ ಕಚೇರಿ ಸಭಾಂಗಣದಲ್ಲಿ ತಾಲ್ಲೂಕು ಮಟ್ಟದ ಸಮನ್ವಯ ಮತ್ತು ಪರಿಶೀಲನಾ ಸಮಿತಿ ಸಭೆ ಏರ್ಪಡಿಸಲಾಗಿದೆ ಎಂದು ಬಳ್ಳಾರಿ ಗ್ರಾಮಾಂತರ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಹಾಗೂ ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಜ್ಯ ಮಟ್ಟದ ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಶೌರ್ಯ ಪ್ರಶಸ್ತಿಗೆ ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಸೆ.24–ರಾಜ್ಯ ಸರ್ಕಾರದ ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಮಕ್ಕಳ ದಿನಾಚರಣೆ–2025ರ ಪ್ರಯುಕ್ತ ಧೈರ್ಯ ಸಾಹಸ ಪ್ರದರ್ಶಿಸಿದ ಮಕ್ಕಳಿಗೆ ನೀಡುವ ಬಾಲಕರಿಗೆ ಹೊಯ್ಸಳ ಮತ್ತು ಬಾಲಕಿಯರಿಗೆ ಕೆಳದಿ ಚೆನ್ನಮ್ಮ ಶೌರ್ಯ ಪ್ರಶಸ್ತಿಗೆ ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ.

6 ರಿಂದ 18 ವರ್ಷದೊಳಗಿನ ಮಕ್ಕಳು ತಮ್ಮ ಪ್ರಾಣದ ಹಂಗನ್ನು ತೊರೆದು ಸಮಯ ಪ್ರಜ್ಞೆಯಿಂದ ಇತರರ ಪ್ರಾಣದ ರಕ್ಷಣೆಗಾಗಿ ಧೈರ್ಯ–ಸಾಹಸ ಪ್ರದರ್ಶಿಸಿದ ಬಾಲಕರಿಗೆ "ಹೊಯ್ಸಳ" ಪ್ರಶಸ್ತಿ ಮತ್ತು ಬಾಲಕಿಯರಿಗೆ "ಕೆಳದಿ ಚೆನ್ನಮ್ಮ" ಪ್ರಶಸ್ತಿಯನ್ನು ಮಕ್ಕಳ ದಿನಾಚಾರಣೆ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಪ್ರಕರಣವು 01ನೇ ಆಗಸ್ಟ್ 2024 ರಿಂದ 31ನೇ ಜುಲೈ 2025 ರೊಳಗೆಣಟಿಜಜಜಿಟಿಜಜ ನಡೆದಿರಬೇಕು. ಪ್ರಶಸ್ತಿಗೆ ಆಯ್ಕೆಯಾದವರಿಗೆ ತಲಾ ರೂ.10 ಸಾವಿರ ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರ ಒಳಗೊಂಡಿರುತ್ತದೆ.

ಇದೇ ಸಂದರ್ಭದಲ್ಲಿ ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಕನಿಷ್ಠ 5 ವರ್ಷಗಳ ಕಾಲ ಅತ್ಯುತ್ತಮ ಸೇವೆ ಸಲ್ಲಿಸಿರುವ ವ್ಯಕ್ತಿಗಳಿಗೆ ತಲಾ ರೂ.25 ಸಾವಿರ ನಗದು ಬಹುಮಾನ, ಪ್ರಶಸ್ತಿ ಪತ್ರ ಮತ್ತು ಸಂಸ್ಥೆಗಳಿಗೆ ತಲಾ ರೂ.1 ಲಕ್ಷ ನಗದು ಬಹುಮಾನ, ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಗುತ್ತದೆ.

ಮಕ್ಕಳ ದಿನಾಚರಣೆ–2025ನೇ ಸಾಲಿನ ಪ್ರಶಸ್ತಿಗಾಗಿ ನಿಗದಿಪಡಿಸಿದ ಅರ್ಜಿ ನಮೂನೆಗಳನ್ನು ಜಿಲ್ಲಾ ಉಪನಿರ್ದೇಶಕರ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಳ್ಳಾರಿ ಇವರಿಂದ ಪಡೆದು, ಕನ್ನಡ ಭಾಷೆಯಲ್ಲಿ ದ್ವಿಪ್ರತಿಯಲ್ಲಿ ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ, ಭರ್ತಿ ಮಾಡಿದ ಅರ್ಜಿಗಳನ್ನು ಸೆ.30 ರೊಳಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ನಗರದ ಎಸ್‌ಪಿ ವೃತ್ತದ ಬಳಿಯ ದೇವಿನಗರದ ಸ್ತ್ರೀಸೇವಾನಿಕೇತನ ಆವರಣದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರ ಕಚೇರಿ ಹಾಗೂ ದೂ.08392–266219 ಗೆ ಸಂಪರ್ಕಿಸಬಹುದು ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೆ.29 ರಂದು ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಕೆಡಿಪಿ ಸಭೆ

# ಅಧಿಕಾರಿಗಳು ಪೂರಕ ಮಾಹಿತಿಯೊಂದಿಗೆ ಸಿದ್ಧತೆಯಲ್ಲಿರಬೇಕು: ಡಿಸಿ ನಾಗೇಂದ್ರ ಪ್ರಸಾದ್.ಕೆ ಸೂಚನೆ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಸೆ.23–ಇದೇ ಸೆ.29 ರಂದು ಜಿಲ್ಲಾ ಉಸ್ತುವಾರಿ ಸಚಿವ ಬಿ.ಝೆಡ್.ಜಮೀರ್ ಖಾನ್ ಅವರ ಅಧ್ಯಕ್ಷತೆಯಲ್ಲಿ ಈ ವರ್ಷದ ಜಿಲ್ಲಾ ಮಟ್ಟದ ಕೆಡಿಪಿ ಸಭೆ ನಡೆಯಲಿದ್ದು, ಅಧಿಕಾರಿಗಳು ತಮ್ಮ ಇಲಾಖೆಗಳ ಸಂಬಂಧಿಸಿದ ಅಗತ್ಯ ಪೂರಕ ಮಾಹಿತಿ ಸಿದ್ಧತೆಯಲ್ಲಿಟ್ಟುಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ನಿರ್ದೇಶನ ನೀಡಿದರು.

ನಗರದ ಜಿಲ್ಲಾ ಪಂಚಾಯತ್ ಹೊಸ ನಜೀರ್ ಸಾಬ್ ಸಭಾಂಗಣದಲ್ಲಿ ಮಂಗಳವಾರ ಏರ್ಪಡಿಸಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ವರ್ಷಗಳ ಬಳಿಕ ಪೂರ್ಣ ಪ್ರಮಾಣದ ಕೆಡಿಪಿ ಸಭೆ ನಡೆಯಲಿದ್ದು, ಜಿಲ್ಲೆಯ ಎಲ್ಲಾ ಶಾಸಕರು ಸಹಭಾಗವಹಿಸಲಿದ್ದಾರೆ. ಹಾಗಾಗಿ ಯಾವುದೇ ರೀತಿಯ ಮಾಹಿತಿ ಕೊರತೆಯಾಗದಂತೆ ಎಚ್ಚರ ವಹಿಸಬೇಕು ಎಂದು ತಿಳಿಸಿದರು.

ಅಧಿಕಾರಿಗಳು ತಮ್ಮ ಇಲಾಖೆಗಳಿಂದ ಅನುಷ್ಠಾನಗೊಳಿಸಿದ ವಿವಿಧ ಯೋಜನೆಗಳು, ಅವುಗಳ ಪ್ರಗತಿ, ಶೇಕಡವಾರು ಗುರಿ ಸಾಧನೆ ಸೇರಿದಂತೆ ಎಲ್ಲಾ ವಿಧದ ಮಾಹಿತಿಯೂ ಸಹ ಒಳಗೊಂಡಿರುವಂತೆ ಮಾಹಿತಿ ಕೈಪಿಡಿ ಸಿದ್ಧತೆ ಮಾಡಿಕೊಳ್ಳಬೇಕು ಎಂದರು.

ಜಿಲ್ಲೆಯಲ್ಲಿ ಕೃಷಿಗೆ ಸಂಬಂಧಿಸಿದಂತೆ ರಸಗೊಬ್ಬರ ಪೂರೈಕೆ, ಬೇಡಿಕೆ ಮತ್ತು ಜಿಲ್ಲೆಯ ಪ್ರಮುಖ ವಾಣಿಜ್ಯ ಬೆಳೆಯಾದ ಮೆಣಸಿನಕಾಯಿ ಬೆಳೆಯಿಂದ ರೈತರು ಮುಸುಕಿನ ಜೋಳ, ತೊಗರಿ ಬೆಳೆ ಬೆಳೆಯಲು ಕಾರಣವೇನು, ಬೆಳೆಗಳ ವಿಮೆಗೆ ರೈತರ ನೋಂದಣಿ ಕ್ರಮ ಕುರಿತ ಮಾಹಿತಿ ಚರ್ಚೆಯಾಗಬಹುದು. ಕೃಷಿ ಮತ್ತು ತೋಟಗಾರಿಕೆ ಅಧಿಕಾರಿಗಳು ಇಲ್ಲಿಯವರೆಗಿನ




ಎಲ್ಲಾ ಮಾಹಿತಿ ನಮೂದಿಸಬೇಕು ಎಂದು ಸೂಚಿಸಿದರು.

ಜಿಲ್ಲೆಯಲ್ಲಿ ಹೈನುಗಾರಿಕೆಗೆ ಉತ್ತೇಜನ, ಹಾಲು ಉತ್ಪಾದಕರ ಸಹಕಾರ ಸಂಘಗಳ ರಚನೆ ಹಾಗೂ ಹಾಲು ಉತ್ಪಾದನೆಗೆ ರೈತರಿಗೆ ನೀಡಬೇಕಾದ ಪ್ರೋತ್ಸಾಹ–ಬೆಂಬಲ ಮತ್ತು ಗುಣಮಟ್ಟದ ಹಾಲು ಸರಬರಾಜು ಕುರಿತಂತೆ ಸಚಿವರು ಚರ್ಚೆ ನಡೆಸುವುದಲ್ಲದೇ, ಜಿಲ್ಲೆಯಲ್ಲಿ ನಿರ್ಮಾಣಗೊಳ್ಳಲಿರುವ ಮೆಗಾಡೈರಿ ಸ್ಥಾಪನೆಯ ಇಲ್ಲಿವರೆಗಿನ ಬೆಳವಣಿಗೆಯ ಕುರಿತು ಚರ್ಚಿಸುವರು. ಹಾಗಾಗಿ ಸವಿಸ್ತಾರ ಮಾಹಿತಿಯೊಂದಿಗೆ ಅಧಿಕಾರಿಗಳು ಸಿದ್ಧತೆಯಲ್ಲಿರಬೇಕು ಎಂದು ಪಶುವೈದ್ಯಾಧಿಕಾರಿಗಳು, ಕೆಎಂಎಫ್ ವ್ಯವಸ್ಥಾಪಕರಿಗೆ ಹೇಳಿದರು.

ಅದೇರೀತಿಯಾಗಿ, ರೇಷ್ಮೆ ಮತ್ತು ಮೀನುಗಾರಿಕೆ ಇಲಾಖೆಗಳು ಇಲ್ಲಿಯವರಿಗೆ ಅನುಷ್ಠಾನಗೊಳಿಸಿದ ಸೌಲಭ್ಯ, ಜಿಲ್ಲೆಯಲ್ಲಿ ಅಪೌಷ್ಟಿಕತೆ ಮಕ್ಕಳ ಆರೋಗ್ಯ ಸುಧಾರಣೆಯ ಕ್ರಮ ಕುರಿತಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿಗಳು ಮಾಹಿತಿ ನೀಡಬೇಕು ಎಂದರು.

ಜಿಲ್ಲೆಯಲ್ಲಿ ಆರೋಗ್ಯ ಸೌಲಭ್ಯ ವಿತರಣೆ, ಆಸ್ಪತ್ರೆಗಳ ನಿರ್ವಹಣೆ, ಔಷಧಗಳ ದಾಸ್ತಾನು ಸಂಬಂಧಿಸಿದಂತೆ ಜಿಲ್ಲಾ ಆರೋಗ್ಯಾಧಿಕಾರಿಗಳು, ಬಿಎಂಸಿಆರ್ಸಿ ನಿರ್ದೇಶಕರು ಮಾಹಿತಿ ನೀಡಲು ಸಿದ್ಧರಿರಬೇಕು ಎಂದರು.

ಸಭೆಯಲ್ಲಿ ಸರ್ಕಾರದ ಗ್ಯಾರಂಟಿ ಯೋಜನೆಗಳ ಪ್ರಗತಿ, ಈಗಾಗಲೇ ನಡೆಯುತ್ತಿರುವ ಮಾಜಿ ದೇವದಾಸಿಯರ ಮರು ಸಮೀಕ್ಷೆ, ಲಿಂಗತ್ವ ಅಲ್ಪಸಂಖ್ಯಾತರ ಸಮೀಕ್ಷೆ ಮತ್ತು ಹಿಂದುಳಿದ ವರ್ಗಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಪ್ರಗತಿ ವರದಿಯ ಪೂರಕ ಮಾಹಿತಿ ಇರಬೇಕು ಎಂದು ತಿಳಿಸಿದರು.

ಮುಖ್ಯವಾಗಿ ಅಧಿಕಾರಿಗಳು ಸಭೆಯಲ್ಲಿ ಅಂಕಿ–ಸಂಖ್ಯೆ ಮಂಡಿಸುವ ಬದಲು, ಯೋಜನೆ, ಸೌಲಭ್ಯ, ಕಟ್ಟಡ ನಿರ್ಮಾಣ, ಸ್ಥಳ ಬೇಡಿಕೆ, ಬೇಕಾದ ಸಾಮಾಗ್ರಿ–ಸಲಕರಣೆ, ಕುಡಿಯುವ ನೀರಿನ ವ್ಯವಸ್ಥೆ, ಎಸ್‌ಎಸ್‌ಎಲ್‌ಸಿ ಯಲ್ಲಿ ಜಿಲ್ಲೆಯ ಮುಂಚೂಣಿ, ವಸತಿ ನಿಲಯಗಳ ಸ್ಥಿತಿ, ಜಿಲ್ಲೆಯಲ್ಲಿ ಕೈಗಾರಿಕೆಗಳ ಅಭಿವೃದ್ಧಿ ಸೇರಿದಂತೆ ಅಗತ್ಯ ಮಾಹಿತಿ ನೀಡಲು ಮುಂದಾಗಬೇಕು ಎಂದು ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ಕಿವಿಮಾತು ಹೇಳಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹ್ಯಾರಿಸ್ ಸುಮೈರ್, ಬಳ್ಳಾರಿ ವಲಯ ಉಪಅರಣ್ಯ ಸಂರಕ್ಷಣಾಧಿಕಾರಿ ಡಾ.ಕೆ.ಎನ್.ಬಸವರಾಜ, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್, ಜಿಪಂ ಉಪಕಾರ್ಯದರ್ಶಿ ಶಶಿಕಾಂತ್ ಶಿವಪೂರೆ, ಜಿಪಂ ಮುಖ್ಯ ಯೋಜನಾಧಿಕಾರಿ ವಾಗೀಶ್ ಶಿವಾಚಾರ್ಯ, ಮಹಾನಗರ ಪಾಲಿಕೆ ಆಯುಕ್ತ ಪಿ.ಎಸ್. ಮಂಜುನಾಥ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

## ಸದಸ್ಯರಿಗೆ ಪ್ರತಿಶತ 10 ಲಾಭಾಂಶ ಹಂಚಿಕೆ ಬೆನಕಟ್ಟಿ ಪಿಕೆಪಿಎಸ್‌ಗೆ 19.76 ಲಕ್ಷ ಲಾಭ



**ಮಲ್ಲಮ್ಮ ನುಡಿ ವಾರ್ತೆ**

ಬಾಗಲಕೋಟೆ,ಸೆ.24-ತಾಲೂಕಿನ ಬೆನಕಟ್ಟಿಯ ಪ್ರಾಥಮಿಕ ಕೃಷಿಪತ್ತಿನ ಸಹಕಾರಿ ಸಂಘ ಕಳೆದ ಮಾರ್ಚ ಅಂತ್ಯಕ್ಕೆ19.76 ಲಕ್ಷರೂ.ಗಳ ಲಾಭ ಗಳಿಸಿದೆ ಎಂದು ಸಂಘದ ಅಧ್ಯಕ್ಷ ವೇಮನ ಯಡಹಳ್ಳಿ ಹೇಳಿದರು.

ಸೋಮವಾರ ಜರುಗಿದ ಸಂಘದ 112 ನೆಯ ವಾರ್ಷಿಕ ಸರ್ವ ಸಾಧಾರಣ ಸಭೆಯಲ್ಲಿ ಈ ವಿಷಯ ಪ್ರಕಟಿಸಿದ ಅವರು, ಸದಸ್ಯರಿಗೆ ಪ್ರತಿಶತ 10 ರಷ್ಟು ಲಾಭಾಂಶ ವಿತರಣೆಯ ನಿರ್ಣಯ ಕೈಗೊಳ್ಳಲಾಗಿದೆ. ರೈತರ ಆಶೋತ್ತರಗಳಿಗೆ ಸ್ಪಂದಿಸಿ ಕಾರ್ಯ ನಿರ್ವಹಿಸುತ್ತಿರುವ ಸಂಘ, ರೈತರ ಕೃಷಿ ಚಟುವಟಿಕೆಗಳಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸುವುದಲ್ಲದೇ, ನಿಗದಿತ ಸಮಯಕ್ಕೆ ಸಾಲ ಸೌಲಭ್ಯ ಕಲ್ಪಿಸುತ್ತದೆ ಎಂದು ಹೇಳಿದರು.

ಸಂಘದ ಮುಖ್ಯಕಾರ್ಯನಿರ್ವಾಹಕ ಶಿವಾನಂದ ಸುನಗದ ಸಂಘದ ವಾರ್ಷಿಕ ವರದಿ ಮಂಡಿಸಿದರು. ಸಾಲದ ಮಿತಿ ಹೆಚ್ಚಿಸಬೇಕು, ಸಾಲದ ಹಣ ಸ್ಥಳೀಯವಾಗಿಯೇ ಸಿಗುವಂತಾಗಬೇಕು, ಚೆಕ್ ಬುಕ್ ಸೌಲಭ್ಯ ಕಲ್ಪಿಸಬೇಕು ಎಂಬುದು ಸೇರಿ ಹಲವು ಬೇಡಿಕೆಗಳನ್ನು ಅನೇಕ ಜನ ರೈತರು ಆಡಳಿತ ಮಂಡಳಿ ಮುಂದಿಟ್ಟರು.

ಸಭೆಯಲ್ಲಿ ಸಾಧನೆಗೈದ ರೈತರನ್ನು ಸನ್ಮಾನಿಸಲಾಯಿತು. ಉಪಾಧ್ಯಕ್ಷ ಜಗದೀಶ ಅಂಗಡಿ, ನಿರ್ದೇಶಕರಾದ ಸಿ.ಎನ್. ಬಾಳಕ್ಕನವರ, ರಂಗಣ್ಣ ಬೆಣ್ಣೂರ, ರಾಘು ಯಡಹಳ್ಳಿ, ಶೇಕಪ್ಪ ಬಂಡಿ, ವೆಂಕಟೇಶ ತಿಮ್ಮಾಪೂರ, ಭರಮಪ್ಪ ಬ್ಯಾಡಗೌಡರ, ಪಾಂಡು ಅರಿಷಿನಗೋಡಿ, ಬಸಪ್ಪ ಮಾದರ, ಲಕ್ಷ್ಮೀಬಾಯಿ ಬೆಣ್ಣೂರ, ಶೈಲಾ ಸನ್ನಪ್ಪನವರ ವೇದಿಕೆಯಲ್ಲಿದ್ದರು. ಶಿಕ್ಷಕ ಪಾಂಡು ಸನ್ನಪ್ಪನವರ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

## ಎನ್‌ಎಸ್‌ಎಸ್ ಸೇವಾ ಮನೋಭಾವ ಬೆಳೆಸುತ್ತದೆ : ಡಾ.ರುದ್ರೇಶ



**ಮಲ್ಲಮ್ಮ ನುಡಿ ವಾರ್ತೆ**

ಬಾಗಲಕೋಟೆ,ಸೆ.24-ವಿದ್ಯಾರ್ಥಿಗಳು ಆದರ್ಶ ವ್ಯಕ್ತಿತ್ವ ರೂಪಿಸಿಕೊಳ್ಳಬೇಕು. ಎನ್.ಎಸ್.ಎಸ್ ವಿದ್ಯಾರ್ಥಿಗಳಲ್ಲಿ ಮಾನವೀಯ ಮೌಲ್ಯಗಳನ್ನು ಹಾಗೂ ಸೇವಾ ಮನೋಭಾವ ಬೆಳೆಸುತ್ತದೆ ಎಂದು ಧಾರವಾಡದ ಸಾಹಿತಿ ಡಾ.ರುದ್ರೇಶ ಮೇಟಿ ಹೇಳಿದರು.

ನವನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಐಕ್ಯೂಎಸಿ ರಾಷ್ಟ್ರೀಯ ಸೇವಾ ಯೋಜನೆ ಘಟಕದ ಸಹಯೋಗದಲ್ಲಿ ವಿಶ್ವಮಾನವ ಸಭಾಭವನದಲ್ಲಿ ಬುಧವಾರ ನಡೆದ ರಾಷ್ಟ್ರೀಯ ಸೇವಾ ಯೋಜನೆ ದಿನಾಚರಣೆಯ ವಿಶೇಷ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಆದರ್ಶವಾದ ಉತ್ತಮ ವ್ಯಕ್ತಿತ್ವ ಕಟ್ಟಿಕೊಳ್ಳಲು ಭೌತಿಕ, ಬೌದ್ಧಿಕ ಸಂಪತ್ತು ಹೆಚ್ಚಿಸಿಕೊಳ್ಳಲು ಎನ್.ಎಸ್.ಎಸ್ ಪೂರಕವಾಗಿದೆ. ಸೇವೆಯ ಪರಿಕಲ್ಪನೆಯನ್ನು ಅರಿತುಕೊಂಡು ಉತ್ತಮ ನಾಗರಿಕರಾಗಬೇಕು ಎಂದು ಡಾ.ರುದ್ರೇಶ ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಡಾ.ಅರುಣಕುಮಾರ ಗಾಳಿ ಮಾತನಾಡಿ, ವಿದ್ಯಾರ್ಥಿಗಳು ಪರಿಸರ ಪ್ರಜ್ಞೆಯನ್ನು ಬೆಳೆಸಿಕೊಳ್ಳುವ ಮೂಲಕ ಸಹಕಾರ, ಸಹಬಾಳ್ವೆಯಿಂದ ಬದುಕುವ ರೀತಿಯನ್ನು ಎನ್.ಎಸ್.ಎಸ್ ಕಲಿಸುತ್ತದೆ. ಸಮಾಜ ನಮಗೇನು ಕೊಟ್ಟಿದೆ ಎನ್ನುವದಕ್ಕಿಂತ ಸಮಾಜಕ್ಕೆ ನಾವು ಏನು ಕೊಡುತ್ತಿದ್ದೇವೆ ಎನ್ನುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದರು. ಡಾ.ಜಿ.ಜಿ.ಹಿರೇಮಠ ಆಶಯ ನುಡಿ ಹೇಳಿ, ಎನ್.ಎಸ್.ಎಸ್.ನ ಮುಖ್ಯ ಉದ್ದೇಶ ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ಸಾರ್ವಜನಿಕ ಸೇವೆಯ ಮೂಲಕ ಅಭಿವೃದ್ಧಿಗೊಳಿಸುವದಾಗಿದೆ. ಗಾಂಧೀಜಿಯವರ ಸರ್ವೋದಯ ತತ್ವಗಳನ್ನು ಎಲ್ಲರೂ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಧಾರವಾಡ ಹಿರಿಮಲ್ಲೂರ್ ಈಶ್ವರನ್ ಕಾಲೇಜಿನ ಡಾ.ಈರಣ್ಣ ಇಂಜಗನೇರಿ ಎನ್.ಎಸ್.ಎಸ್ ಮತ್ತು ನಾಯಕತ್ವ ಎಂಬ ವಿಷಯದ ಮೇಲೆ ವಿಶೇಷ ಉಪನ್ಯಾಸ ನೀಡಿದರು. ಪ್ರೊ.ಪರಸಪ್ಪ ತಳವಾರ ಪ್ರಾರ್ಥನೆ ಮಾಡಿದರು, ಡಾ.ಬಸವರಾಜ ಬೀಳಗಿ ಸ್ವಾಗತಿಸಿದರು, ಡಾ.ಚಂದ್ರಶೇಖರ ಕಾಳನ್ನವರ ನಿರೂಪಿಸಿದರು. ಪ್ರೊ.ಸಂಪತ್ತ ಲಮಾಣಿ ವಂದಿಸಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಎನ್.ಎಸ್.ಎಸ್. ಘಟಕದ ಸ್ವಯಂ ಸೇವಕರು, ಕಾಲೇಜಿನ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

## ಶೀಘ್ರದಲ್ಲೇ ಕಾರ್ನರ್ ಪ್ಲಾಟ್ ಲಿಲಾವು ಸಂತ್ರಸ್ತರಿಗೆ ಹಕ್ಕುಪತ್ರ ವಿತರಿಸಿದ ಶಾಸಕ ಮೇಟಿ



**ಮಲ್ಲಮ್ಮ ನುಡಿ ವಾರ್ತೆ**

ಬಾಗಲಕೋಟೆ,ಸೆ.24-ಬಾಗಲಕೋಟೆ ನಗರದ ವಿವಿಧ ಮುಳುಗಡೆ ಸಂತ್ರಸ್ಥರಿಗೆ ಶಾಸಕ ಹಾಗೂ ಬಿಟಿಡಿಎ ಅಧ್ಯಕ್ಷ ಎಚ್.ವಾಯ್.ಮೇಟಿ ಮಂಗಳವಾರ ಹಕ್ಕು ಪತ್ರ ವಿತರಣೆ ಮಾಡಿದರು.

ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಕಚೇರಿ ಆವರಣದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸಂತ್ರಸ್ಥರಿಗೆ ಹಕ್ಕುಪತ್ರ ವಿತರಿಸಿ ಮಾತನಾಡಿದ ಅವರು, ಮುಳುಗಡೆ ಸಂತ್ರಸ್ತರು, ವಯಸ್ಕರ ಮಕ್ಕಳು ಹಾಗೂ ಬಾಡಿಗೆದಾರರು ಸೇರಿ ಒಟ್ಟು 40 ಜನ ಸಂತ್ರಸ್ತರಿಗೆ ಹಕ್ಕುಪತ್ರಗಳನ್ನು ನೀಡಲಾಗಿದೆ. ಹಕ್ಕುಪತ್ರ ಪಡೆದುಕೊಂಡ ಸಂತ್ರಸ್ತರು ನೋಂದಣಿ ಮಾಡಿಸಿಕೊಂಡು ಮನೆ ಕಟ್ಟಿಕೊಂಡು ನೆಮ್ಮದಿಯ ಜೀವನ ನಡೆಸಬೇಕು ಎಂದು ಹೇಳಿದರು.

ಹಕ್ಕುಪತ್ರ ಪಡೆದ ಯಾವುದೇ ಸಂತ್ರಸ್ಥರು ನಿವೇಶನ ಖಾಲಿ ಬಿಡಬಾರದು. ಖಾಲಿ ನಿವೇಶನ ಬಿಟ್ಟರೆ ಮುಳ್ಳು ಕಂಟಿ ಬೆಳೆಯುತ್ತದೆ. ಸ್ವಚ್ಛವಾಗಿ ಇಟ್ಟುಕೊಂಡು ನಿವೇಶನದ ಸದುಪಯೋಗಪಡಿಸಿಕೊಳ್ಳಬೇಕು. ಯುನಿಟ್-1 ಮತ್ತು 2ರಲ್ಲಿ ಬರುವ ಮೂಲೆ ನಿವೇಶನಗಳ ಲಿಲಾವು ಪ್ರಕ್ರಿಯೆ ಶೀಘ್ರದಲ್ಲಿಯೇ ಕೈಗೊಳ್ಳಲಾಗುತ್ತಿದೆ ಎಂದು ಮೇಟಿ ಹೇಳಿದರು. ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಮುಖ್ಯ ಅಭಿಯಂತರ ಚಂದ್ರಹಾಸ ಬಂಡಿ ಮಾತನಾಡಿ, ಪ್ರಾಧಿಕಾರದಿಂದ ಮುಳುಗಡೆ ಸಂತ್ರಸ್ತರಿಗೆ ನಿವೇಶನದ ಹಕ್ಕುಪತ್ರಗಳನ್ನು ನೀಡಿದ್ದು, ಮನೆಯನ್ನು ಕಟ್ಟಿಕೊಂಡು ಸ್ಥಳಾಂತರಗೊಂಡು ನೆಮ್ಮದಿಯ ಜೀವನ ಕಟ್ಟಿಕೊಳ್ಳುವ ಕೆಲಸವಾಗಬೇಕು. ಮೂರನೇ ಯುನಿಟ್‌ನಲ್ಲಿ ಸಹ ನಿವೇಶನ ಹಂಚಿಕೆ ಪ್ರಾರಂಭ ಮಾಡಲಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಬುಡಾ ಅಧ್ಯಕ್ಷ ಅಬ್ದುಲರಜಾಕ ಮೈನೂದ್ದೀನ ಬೇನೂರ, ಬಿಟಿಡಿಎ ಪುನರ್ವಸತಿ ಅಧಿಕಾರಿ ನವೀನಕುಮಾರ ಕಟ್ಟಿಮನಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಮೆಡಿಕಲ್ ಕಾಲೇಜಿನಲ್ಲಿ ದೇಹದಾನಿಗಳಿಗೆ ಸನ್ಮಾನ



**ಮಲ್ಲಮ್ಮ ನುಡಿ ವಾರ್ತೆ**

ಬಾಗಲಕೋಟೆ,ಸೆ.24-ವೈದ್ಯಕೀಯ ವಿದ್ಯಾರ್ಥಿಗಳಿಗೆ ಶರೀರದ ಅಧ್ಯಯನ ಪ್ರಮುಖ ಮತ್ತು ಬಹುಮುಖ್ಯವಾದ ವಿಷಯ. ದೇಹ ರಚನೆಯ ಅಧ್ಯಯನಕ್ಕಾಗಿ ಮನುಷ್ಯನ ಮೃತಶರೀರ ಉಪಯೋಗಿಸಲಾಗುವುದು. ಒಂದರ್ಥದಲ್ಲಿ ಮನುಷ್ಯನ ಮೃತಶರೀರ ವೈದ್ಯಕೀಯ ವಿದ್ಯಾರ್ಥಿಗಳಿಗೆ ಜ್ಞಾನದೀವಿಗೆ ಇದ್ದಂತೆ ಎಂದು ಬಿ.ವಿ.ವಿ ಸಂಘದ ವೈದ್ಯಕೀಯ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಅಶೋಕ ಸಜ್ಜನ ಹೇಳಿದರು.

ಮಂಗಳವಾರ ನಗರದ ಎಸ್.ನಿಜಲಿಂಗಪ್ಪ ಮೆಡಿಕಲ್ ಕಾಲೇಜಿನಲ್ಲಿ ದೇಹದಾನಿಗಳ ಸಾಮೂಹಿಕ ಪುಣ್ಯಸ್ಮರಣೆ ಮತ್ತು ದೇಹದಾನಿಗಳ ಸನ್ಮಾನ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಅವರು, ದೇಹದಾನಿಗಳ ಮೃತಶರೀರದ ಅಧ್ಯಯನದಿಂದ ವೈದ್ಯಕೀಯ ವಿದ್ಯಾರ್ಥಿಗಳಿಗೆ ವೈದ್ಯಕೀಯ ಜ್ಞಾನ ಪ್ರಾಪ್ತವಾಗುತ್ತಿದೆ. ಮೃತಶರೀರದ ಅಧ್ಯಯನದ ಸಂದರ್ಭ ವಿದ್ಯಾರ್ಥಿಗಳು ತುಂಬ ಗೌರವ ಮತ್ತು ಘನತೆಯಿಂದ ನಡೆದುಕೊಳ್ಳುವರು. ದೇಹದಾನಿಗಳ ದಾನವನ್ನು ಮಹಾವಿದ್ಯಾಲಯ ಕೃತಜ್ಞತೆಯಿಂದ ಸ್ಮರಿಸುತ್ತದೆ ಎಂದರು.

ರಾಷ್ಟ್ರೀಯ ದೇಹಾಂಗದಾನ ಜಾಗೃತಿ ಸಮಿತಿ ಟ್ರಸ್ಟ್ ಸಂಸ್ಥಾಪಕ ದಿ.ಎಂ.ಬಿ.ಹೂಗಾರ ಅವರ 13 ನೇ ಪುಣ್ಯಸ್ಮರಣೆ ಅಂಗವಾಗಿ ದೇಹದಾನ ದಿನಾಚರಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಎಸ್.ಎನ್.ಮೆಡಿಕಲ್ ಕಾಲೇಜಿನ ಪ್ರಾಚಾರ್ಯರಾದ ಡಾ.ಭುವನೇಶ್ವರಿ ಯಳಮಲಿ ಮಾತನಾಡಿ, 2002 ರಲ್ಲಿ ಸ್ಥಾಪನೆಯಾದ ನಿಜಲಿಂಗಪ್ಪ ಮೆಡಿಕಲ್ ಕಾಲೇಜಿಗೆ ಇದುವರೆಗೆ 1133ಕ್ಕೂ ಅಧಿಕ ಮೃತದೇಹಗಳನ್ನು ದಾನರೂಪದಲ್ಲಿ ಸ್ವೀಕರಿಸಲಾಗಿದೆ. ಮೃತ ಶರೀರಗಳ ಮೂಲಕ ವೈದ್ಯಕೀಯ ವಿದ್ಯಾರ್ಥಿಗಳಿಗೆ ಶರೀರ ರಚನೆ ಕುರಿತು ಪರಿಣಾಮಕಾರಿಯಾಗಿ ಪಾಠಮಾಡಲು ಸಾಧ್ಯ. ಈ ದಿಸೆಯಲ್ಲಿ ದೇಹದಾನಿಗಳು ವೈದ್ಯಕೀಯ ವಿದ್ಯಾರ್ಥಿಗಳಿಗೆ ಜ್ಞಾನದ ಹೊತ್ತಿಗೆಗಳಿದ್ದಂತೆ ಎಂದು ಅಭಿಪ್ರಾಯಪಟ್ಟರು.

ಬೈಲಹೊಂಗಲದ ಡಾ.ರಾಮಣ್ಣವರ ಚಾರಿಟೇಬಲ್ ಟ್ರಸ್ಟ್‌ನ ಡಾ.ಮಹಾಂತೇಶ ರಾಮಣ್ಣವರ ಪ್ರಾಸ್ತಾವಿಕ ಮಾತನಾಡಿದರು. ಕಾರ್ಯಕ್ರಮದಲ್ಲಿ ಸುಮಾರು 35 ದೇಹದಾನಿಗಳನ್ನು ಸನ್ಮಾನಿಸಲಾಯಿತು.

ರಾಷ್ಟ್ರೀಯ ದೇಹಾಂಗದಾನ ಜಾಗೃತಿ ಸಮಿತಿ ಟ್ರಸ್ಟ್ ಅಧ್ಯಕ್ಷ ಡಾ.ಶಿವಾನಂದ ಹೂಗಾರ, ಉಪಾಧ್ಯಕ್ಷೆ ಶಂಕ್ರಮ್ಮ ಹೂಗಾರ, ಟ್ರಸ್ಟ್‌ನ ಬಾಗಲಕೋಟೆ ಜಿಲ್ಲಾಧ್ಯಕ್ಷ ಜಯಪ್ರಕಾಶ ನಾಗಠಾಣ, ವಿಜಯಪುರ ಜಿಲ್ಲಾಧ್ಯಕ್ಷ ಡಾ.ಅಮರೇಶ ಮಿಣಜಗಿ, ವಿವಿಧ ವಿಭಾಗಗಳ ವೈದ್ಯರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

:CITATION:

IN THE COURT OF THE PRL. CIVIL JUDGE AND JMFC., AT HUMNABAD.

CRL. MISC. No. 1237/2025.

Petitioners:

1. Gopal Krishna S/o Venkappa, Age: 62-yrs. Occu: Agriculture
2. Sobha W/o Subhash, Age: 73-yrs. Occu: Household. Both R/o Akka Mahadevi Road Humnabad. Dist. Bidar.

Respondent:

The Registrar of Birth and Death through The Chief officer TMC Humnabad. Dist. Bidar.

Sub:- Petition U/Sec. 13(3) of Birth and Death Registration Act-1969

Whereas, the above mentioned petitioners have filed the petition under section 13(3) of Birth and Death Registration Act-1969 praying this Honorable Court to issue Death Certificate of Father of petitioner No.1 and Husband of petitioner No.2 by namely LATE. VENKAPPA S/O SHARANAPPA, who was died on 15.03.1983 at Humnabad, Tq.Humnabad Dist. Bidar. The petitioners claiming the Death Certificate of said for transfer of property and other official purpose and home record.

Therefore, it is hereby proclaimed that if any persons have got any objection in this regard, may approach to this Court on 27.10.2025 at 11.00 AM in person or any authorized pleader to answer such claim otherwise the matter will be heard and determined in your absence as per law.

Given under my hand and seal of he court, this the 20-09-2025.

//By order of the court//
Chief Ministerial Officer,
Prl. Civil Judge & JMFC Court,
Humnabad.

## ನಾಳೆ ದಂತ ಕಾಲೇಜಿನಲ್ಲಿ ಪದವಿ ಪ್ರದಾನ ಸಮಾರಂಭ

**ಮಲ್ಲಮ್ಮ ನುಡಿ ವಾರ್ತೆ**

ಬಾಗಲಕೋಟೆ,ಸೆ.24- ನಗರದ ಪಿ.ಎಮ್.ನಾಡಗೌಡ ಸ್ಮಾರಕ ದಂತ ವೈದ್ಯಕೀಯ ಮಹಾವಿದ್ಯಾಲಯದ 34 ನೇ ಪದವಿ ಪ್ರದಾನ ಸಮಾರಂಭ ಸೆ.26 ಶುಕ್ರವಾರ ಸಾಯಂಕಾಲ 5 ಗಂಟೆಗೆ ಮೆಡಿಕಲ್ ಕಾಲೇಜ್ ಶತಾಬ್ಧಿ ಭವನದಲ್ಲಿ ಜರುಗಲಿದೆ.

ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯ ಸರ್ಕಾರದ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಪೋಲಿಸ್ ಉಪ ಮಹಾನಿರೀಕ್ಷಕ ರವಿ ಚನ್ನಣ್ಣವರ ಆಗಮಿಸಲಿದ್ದು, ಅಧ್ಯಕ್ಷತೆಯನ್ನು ಬಿ.ವಿ.ವಿ.ಸಂಘದ ಕಾರ್ಯಾಧ್ಯಕ್ಷ ವೀರಣ್ಣ ಚರಂತಿಮಠ ವಹಿಸುವರು.

ಸಂಘದ ಗೌರವ ಕಾರ್ಯದರ್ಶಿ ಮಹೇಶ ಅಥಣಿ ಮತ್ತು ವೈದ್ಯಕೀಯ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಅಶೋಕ ಸಜ್ಜನ (ಬೇವೂರ) ಉಪಸ್ಥಿತರಿರುವರು ಎಂದು ದಂತ ಕಾಲೇಜಿನ ಪ್ರಾಚಾರ್ಯ ಡಾ.ಶ್ರೀನಿವಾಸ ವನಕಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನೀರು ಇರುವಾಗಲೇ ಬೇಗ ಸಮೀಕ್ಷೆ ಮಾಡಿ:ಶಾಸಕ ಚನ್ನಾರೆಡ್ಡಿ ಪಾಟೀಲ



**ಮಲ್ಲಮ್ಮ ನುಡಿ ವಾರ್ತೆ**

ಯಾದಗಿರಿ: ಭೀಮಾನದಿ ನೀರು ಭತ್ತ ಹಾಗೂ ಹತ್ತಿ ಜಮೀನಿಗೆ ನುಗ್ಗಿದೆ. ಬೆಳೆಯಲ್ಲಿ ನೀರು ಕಂಡು ಬರುತ್ತಿದ್ದು ನೀವು ಬೆಳೆಯಲ್ಲಿ ನೀರು ಇರುವಾಗಲೇ ಬೇಗ ಸಮೀಕ್ಷೆ ಮಾಡಬೇಕೆಂದು ಶಾಸಕ ಚನ್ನಾರೆಡ್ಡಿ ಪಾಟೀಲ ತುನ್ನೂರು ಅವರು ಕಂದಾಯ ಅಧಿಕಾರಿಗಳಿಗೆ ಹೇಳಿದರು. ಅವರು ಮಂಗಳವಾರ ಸಂಜೆ ಜಿಲ್ಲೆಯ ವಡಗೇರಾ ತಾಲೂಕಿನ ನಾಯ್ಕಲ್ ಗ್ರಾಮದ ಹೊರಭಾಗದಲ್ಲಿ ಭೀಮಾನದಿ ಹಿನ್ನಿರು ನುಗ್ಗಿ ಭತ್ತ ಹಾಗೂ ಹತ್ತಿ ಬೆಳೆಯಾದ ಪ್ರದೇಶಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿದರು.

ಮಹಾರಾಷ್ಟ್ರದ ಉಜನಿ ಜಲಾಶಯದಿಂದ ಹೆಚ್ಚು ನೀರು ಬಿಡುಗಡೆ ಮಾಡಿದ ಪರಿಣಾಮ ಭೀಮಾನದಿಗೆ ಹೆಚ್ಚಿನ ನೀರು ಬಿಡುಗಡೆ ಮಾಡಿದ ಪರಿಣಾಮ ಭೀಮಾನದಿ ತೀರದ ನಾಯ್ಕಲ್ ಸೇರಿದಂತೆ ವಿವಿಧ ಗ್ರಾಮದ ರೈತರ ಜಮೀನಿಗೆ ನದಿ ನೀರು ಹರಿದು ಬೆಳೆ ಹಾನಿಯಾದ ಹಿನ್ನಲೆ ಖುದ್ದು ಶಾಸಕ ಚನ್ನಾರೆಡ್ಡಿ ಪಾಟೀಲ ತುನ್ನೂರು ಅವರು ಬೆಳೆ ಹಾನಿ ಪ್ರದೇಶ ವೀಕ್ಷಣೆ ಮಾಡಿ ಅನ್ನದಾತರ ಅಳಲು ಆಲಿಸಿದರು.

ಪ್ರತಿವರ್ಷ ಹೆಚ್ಚು ಭೀಮಾನದಿ ನೀರು ಬಂದರೆ ನಮ್ಮ ಬೆಳೆ ನೀರಾಗ ಹೊಗಲತದ ರೀ , ಎಕರೆ ಬೀಜ,ಗೊಬ್ಬರ ಹಾಕಿ ಹಣ ಖರ್ಚು ಮಾಡಿದ್ದಿವಿ ಆದರೆ, ಈಗ ಚಂದ ಫಸಲು ಬಂದ ಭತ್ತ ಹಾಗೂ ಹತ್ತಿ ನೀರಾಗ ಹೋಗ್ಯಾದ ನೀವೆ ನಮಗೆ ಸಹಾಯ ಮಾಡಬೇಕೆಂದು ರೈತರು ನೋವು ತೊಡಿಕೊಂಡರು.

**ಬ್ಯಾರೇಜ್ ನ ಹಳೆ ಗೇಟ್ ಗೇಟ್ ತೆಗೆಸಿ..!**

ಗುರುಸಣಗಿ ಬ್ರಿಡ್ಜ್ ಕಂ ಬ್ಯಾರೇಜ್ ಗೆ ಅಳವಡಿಕೆ ಮಾಡಿರುವ ಹಳೆ ಗೇಟ್ ಇನ್ನೂ ತೆಗೆದಿಲ್ಲ.ಗೇಟ್ ತೆಗೆಯದ ಕಾರಣ ಬ್ಯಾರೇಜ್ ಹಿನ್ನಿರು ನಮ್ಮ ಜಮೀನಿಗೆ ಹರಿಯುತ್ತಿವೆ. ದಯವಿಟ್ಟು ಗೇಟ್ ತೆಗೆಸಿ ಎಂದು ರೈತ ಮಲ್ಲಿಕಾರ್ಜುನ ಶಾಸಕರಿಗೆ ಮನವಿ ಮಾಡಿದರು.

ಭೀಮಾನದಿ ಪ್ರವಾಹದಿಂದ ಹಾಗೂ ಮಳೆಯಿಂದ ಹಾನಿಯಾದ ಬಗ್ಗೆ ರೈತರು ಹಾಗೂ ಕಂದಾಯ ಅಧಿಕಾರಿಗಳಿಂದ ಅಗತ್ಯ ಮಾಹಿತಿ ಪಡೆದರು. ನಂತರ ಶಾಸಕ ಚನ್ನಾರೆಡ್ಡಿ ಪಾಟೀಲ ತುನ್ನೂರು ಅವರು ಮಾತನಾಡಿ,ಭೀಮಾನದಿ ನೀರು ಬಿಡುಗಡೆ ಮಾಡಿದ ಕಾರಣ ನಾಯ್ಕಲ್ ಸೇರಿದಂತೆ ಅನೇಕ ಕಡೆ ಬೆಳೆ ಹಾನಿಯಾಗಿದೆ. ಈಗಾಗಲೇ ಅಧಿಕಾರಿಗಳು ಜಮೀನಿಗೆ ಭೇಟಿ ನೀಡಿ ಸಮೀಕ್ಷೆ ಮಾಡುತ್ತಿದ್ದಾರೆ. ನಾನು ಕೂಡ ಬೆಳೆ ಹಾನಿ ನೋಡಲು ಬಂದಿದ್ದಿನಿ.ಅಧಿಕಾರಿಗಳಿಗೆ ಬೇಗ ಸಮೀಕ್ಷೆ ಮಾಡಲು ಹೇಳಿದ್ದಿನಿ. ರೈತರು ಕೂಡ ತಮ್ಮ ಬೆಳೆ ಹಾನಿ ಬಗ್ಗೆ ಅಧಿಕಾರಿಗಳಿಗೆ ಸರಿಯಾಗಿ ಮಾಹಿತಿ ಕೊಡಬೇಕೆಂದರು.ಯಾವುದೇ ಕಾರಣಕ್ಕು ಅಧಿಕಾರಿಗಳು ವಿಳಂಬ ಮಾಡಬಾರದು. ಸರಿಯಾಗಿ ಸಮೀಕ್ಷೆ ಬೇಗ ಮಾಡಬೇಕೆಂದರು.ನಮ್ಮ ಸರಕಾರ ಆದಷ್ಟೂ ಬೇಗ ಪರಿಹಾರ ನೀಡುವ ಕೆಲಸ ಮಾಡುತ್ತದೆ ಎಂದು ಶಾಸಕ ಚನ್ನಾರೆಡ್ಡಿ ಪಾಟೀಲ ತುನ್ನೂರು ಅವರು ತಿಳಿಸಿದರು.

ಈ ವೇಳೆ ವಡಗೇರಾ ಗ್ಯಾರಂಟಿ ಸಮಿತಿ ಅಧ್ಯಕ್ಷ ಖಾಜಾ ಮೈನೊದ್ದಿನ್ ಮಿರ್ಚಿ,ಭಾಷುಮೀಯಾಹೊಸಳ್ಳಿ,ಶೇಕಪ್ಪಗೌಡ ಮಾಹಿ,ಮಲ್ಲಿಕಾರ್ಜುನಅನಕಸೂಗುರು, ಮರೇಪ್ಪ,ಶರಣಪ್ಪ ,ಶಿವರಾಯ ನಾಟೇಕರ್,ಶರಣಪ್ಪಕಾಡಂಗೇರಿ,ಅಬ್ಬಾಸಲಿ ಬಂದಗಿ,ಮೈಬಿಬೂಬ್,ಖದೀರ್ ಸಾಬ್,ತಿಮ್ಮಯ್ಯ, ಬಸವರಾಜ, ಪ್ರವೀಣ್ ನಾಯ್ಕಲ್,ಭೀಮರಾಯ ತುಮಕೂರು,ಅಬ್ದುಲ್,ಮಲ್ಲಿಕಾರ್ಜುನರೆಡ್ಡಿ ,ಸುಭಾ ಷ್ ರೆಡ್ಡಿ ಇದ್ದರು.

## ಯಾದಗಿರಿಯಲ್ಲಿ ನಡೆದ ಕಾನೂನು ಅರಿವು - ನೆರವು ಕಾರ್ಯಕ್ರಮ

**ಮಲ್ಲಮ್ಮ ನುಡಿ ವಾರ್ತೆ**

ಯಾದಗಿರಿ: ಕಾನೂನಿಗೆ ಎಲ್ಲರೂ ಗೌರವ ನೀಡಿದರೇ ಸಮಾಜದಲ್ಲಿ ಶಾಂತಿಯಿಂದ ಬದುಕಬಹುದು. ದೇಶದ ಕಾನೂನು ಎಲ್ಲರಿಗೂ ಇದೆ. ಅದನ್ನು ತಿಳಿದುಕೊಳ್ಳಬೇಕೆಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಮರಿಯಪ್ಪ ಹೇಳಿದರು.

ನಗರದ ಚಾಮಾ ಫಂಕ್ಷನ್ ಹಾಲ್ ನಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಶಶಿ ಚಾರಿಟೇಬಲ್ ಟ್ರಸ್ಟ್ ಮತ್ತು ಶ್ರೀ ಹರಿ ಪ್ಯಾರಾಮೆಡಿಕಲ್ ಕಾಲೇಜು ಇವರ ಸಂಯುಕ್ತಾಶ್ರಯದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಬಾಲ ಕಾರ್ಮಿಕರು, ಮಾದಕ ವಸ್ತುಗಳು ಮಾನಸಿಕ ಆರೋಗ್ಯ ಕುರಿತು ಕಾನೂನು ಅರಿವು-ನೆರವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ತಾಯಿಯ ಗರ್ಭದಲ್ಲಿನ ಶಿಶುವಿಗೂ ಕಾನೂನು ಇದೆ, ಅದೇ ಭ್ರೂಣ ಹತ್ಯೆ. ಹುಟ್ಟಿದ ಪ್ರತಿಯೊಬ್ಬರಿಗೂ ಜನನ,ಮರಣ ಪತ್ರ ತೆಗೆದುಕೊಳ್ಳಲು ಕಾನೂನು ಎಂದು ಅವರು ಮಾರ್ಮಿಕವಾಗಿ ವಿವರಿಸಿದರು.




ಬಾಲ್ಯ ವಿವಾಹ ಮಾಡುವುದು ಅಪರಾಧ ಇದರ ಬಗ್ಗೆ ಎಲ್ಲರೂ ತಿಳಿದುಕೊಳ್ಳಬೇಕು. ಬಾಲಕರನ್ನು ಕಾರ್ಮಿಕರನ್ನಾಗಿ ಯಾರು ಬಳಸಿಕೊಳ್ಳಬಾರದು. ಇದಕ್ಕೆಲ್ಲ ಬೇರೆ, ಬೇರೆ ಕಠಿಣವಾದ ಕಾನೂನುಗಳೇ ಇವೆ ಎಂದು ನ್ಯಾಯಾವಾದಿ ಮರಿಯಪ್ಪ ಹೇಳಿದರು.

ಶಶಿ ಚಾರಿಟೇಬಲ್ ಮತ್ತು ವಿಜ್ಯೂಕೇಷನಲ್ ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷರಾದ ಹನುಮಂತಪ್ಪ ಶಿರಗೋಳ

ಮಾತನಾಡಿ, ಕಾನೂನಿಗೆ ಗೌರವ ನೀಡಿದರೇ ಅದು ಗೌರವ ನೀಡುತ್ತದೆ. ಕಾನೂನು ಉಲ್ಲಂಘನೆ ಆಗುವಂತಹ ಕೆಲಸಗಳು ಯಾರು ಮಾಡಬಾರದೆಂದರು.

ಇಂತಹ ಅರಿವು ಕಾರ್ಯಕ್ರಮಗಳು ಇನ್ನೂ ಹೆಚ್ಚಾಗಿ ಹಮ್ಮಿಕೊಳ್ಳುವ ಮೂಲಕ ಜನರಲ್ಲಿ ಹೆಚ್ಚಿನ ಜಾಗೃತಿ ಮೂಡಿಸಲಾಗುವುದೆಂದರು.

ಮನೋವೈದ್ಯ ಡಾ. ಅಮೀತ ಕುಮಾರ ಹಾಗೂ ಜಿಲ್ಲಾ ಬಾಲಾ ಕಾರ್ಮಿಕ ಯೋಜನಾ ನಿರ್ದೇಶಕರಾದ ರಿಯಾಜ್ ಪಟೇಲ್ ಮಾತನಾಡಿದರು.

ಶ್ರೀಹರಿ ಪ್ಯಾರಾಮೇಡಿಕಲ್ ಕಾಲೇಜು ಅಧ್ಯಕ್ಷರಾದ ಸುಭಾಶ್ಚಂದ್ರ ಮಾನೇಗಾರ ಉಪಸ್ಥಿತರಿದ್ದರು.

ಸೆಕ್ಸಸ್ ಗ್ರಂಥಾಲಯ ಮುಖ್ಯಸ್ಥರಾದ ಮಾಳಪ್ಪ ಯಾದವ್ ನಿರೂಪಣೆ ಮಾಡಿದರು.

ಶಶಿ ಚಾರಿಟೇಬಲ್ ಟ್ರಸ್ಟಿನ ಮಲ್ಲಿಕಾರ್ಜುನ ಶಿರಗೋಳ ಸ್ವಾಗತಿಸಿ ಪ್ರಾಸ್ತವಿಕ ನುಡಿಗಳನ್ನಾಡಿದರು, ಹಾಗೂ ಕೊನೆಗೆ ವಂದಿಸಿದರು.

